3. ನಿಯಮ 69ರ ಮೇರೆಗೆ ಚರ್ಚೆ

ವಿಷಯ : ರಾಜ್ಯದಲ್ಲಿ ನಕ್ಸಲೀಯರ ಚಟುವಟಿಕೆ ಮತ್ತು ಕಾನೂನು ಸುವ್ಯವಸ್ಥೆ ಹದಗೆಟ್ಟಿರುವ ಬಗ್ಗೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ನಿಲುವಳಿ ಸೂಚನೆ ಮೂಲಕ ಪ್ರತಿಪಕ್ಷದಲ್ಲಿ ಕುಳಿತಿರುವಂಥ ನಾವೆಲ್ಲಾ, ನಮ್ಮೆಲ್ಲಾ ಹಿರಿಯ ಸದಸ್ಯರಾದ ಸನ್ಮಾನ್ಯ ಮಾಧುಸ್ವಾಮಿಯವರು, ವಾಟಾಳ್ ನಾಗರಾಜ್‌ರವರು ಈ ಭಾಗದಲ್ಲಿರುವಂಥ ಮಾನ್ಯ ಜಗದೀಶ್ ಶೆಟ್ಟರ್‌ರವರು, ಈಶ್ವರಪ್ಪನವರು ಎಲ್ಲರೂ ಮುಖಂಡರುಗಳು ಸೇರಿ ಒಂದು ನಿಲುವಳಿ ಸೂಚನೆಯನ್ನು ತಮ್ಮ ಗಮನಕ್ಕೆ ತರುತ್ತಿದ್ದೇವೆ. ಅದು ಎಷ್ಟೊಂದು ಅಗತ್ಯತೆ ಇದೆ ಎನ್ನುವಂಥದ್ದು ವಿಧಾನಸೌಧದ ಸುತ್ತಮುತ್ತಲ ವಾತಾವರಣವನ್ನು ನೋಡಿದರೆ ಇದರ ಗಂಭೀರತೆ ಅರ್ಥವಾಗುತ್ತದೆ. ನಾನು ಇಲ್ಲಿಗೆ ಬರಬೇಕಾದರೆ, ಶಾಸಕರ ಸುತ್ತಮುತ್ತ ಇರುವ ವಾತಾವರಣವನ್ನು ನೋಡಿಕೊಂಡು ವಿಧಾನಸೌಧದ ಒಳಗಡೆ ಬರಬೇಕಾದರೆ ಒಂದು ರೀತಿಯ ಭಯಾನಕ ವಾತಾವರಣ, ಏನೋ ಒಂದು ದೊಡ್ಡ ಘಟನೆ ಆಗಿ ಹೋಗಿದೆ ಆ ರೀತಿಯ ಒಂದು ಪೊಲೀಸರ ಸರ್ಪಗಾವಲು ವಿಧಾನಸೌಧದ ಸುತ್ತಮುತ್ತ ಇರುವ ಒಂದು ವಾತಾವರಣವನ್ನು ನೋಡಿ ಇಲ್ಲಿ ಏನೋ ಆಗಿರಬಹುದೆನ್ನುವ ಒಂದು ಗಾಬರಿಯಿಂದ ಒಳಗಡೆ ಬಂದೆ. ನಾನು ಸರ್ಕಾರಕ್ಕೆ ಸೂಕ್ತವಾದ ಬಂದೋಬಸ್ತಿನ ದೃಷ್ಟಿಯಿಂದ ತಾವು ಮಾಡಿದ್ದೀರಿ, ಅದರ ಬಗ್ಗೆ ನನ್ನದೇನು ಆಕ್ಷೇಪಣೆ ಇಲ್ಲ. ಆದರೆ ವಿಧಾನಸೌಧದ ಸುತ್ತಮುತ್ತ ಶಾಸಕರು ರಕ್ಷಣೆಯಿಂದ ಒಳಗಡೆ ಬಂದು ನಾವೆಲ್ಲರೂ ಕುಳಿತು ಕೊಳ್ಳಬಹುದು. ನಮ್ಮ ಕ್ಷೇತ್ರದಿಂದ ನಾವು ಇಲ್ಲಿಗೆ ಬಂದು, ವಾಪಸ್ಸು ನಮ್ಮ ಊರಿಗೆ ಹೋಗುತ್ತೇವೆಯೋ ಎನ್ನುವ ಒಂದು ಭಯದ ವಾತಾವರಣ ಇವತ್ತು ನಮ್ಮನ್ನು ಕಾಡುತ್ತಿದೆ. ಶಾಸಕರಿಗೆ, ಚುನಾಯಿತ ಪ್ರತಿನಿಧಿಗಳಿಗೆ ಒಂದು ರೀತಿಯಾದ ರಕ್ಷಣೆ ಸಿಗಬಹುದು, ಆದರೆ ಶ್ರೀಸಾಮಾನ್ಯನ ಸ್ಥಿತಿ ಏನು ಕರ್ನಾಟಕ ರಾಜ್ಯದಲ್ಲಿ, ಈ ಬಗ್ಗೆ ಯೋಚನೆ ಮಾಡಬೇಕಾದ ಒಂದು ಪರಿಸ್ಥಿತಿ ಇರುವಂಥ ಈ ಒಂದು ಸಂದರ್ಭದಲ್ಲಿ ಈ ನಿಲುವಳಿ ಸೂಚನೆಯ ಮೂಲಕ, ತುಮಕೂರು ಜಿಲ್ಲೆಯ ಪಾವಗಡ ತಾಲ್ಲೂಕಿನ ವೆಂಕಟಮ್ಮನಹಳ್ಳಿಯಲ್ಲಿ ನಕ್ಸಲೀಯರಿಂದ ಪೊಲೀಸರ ಮಾರಣಹೋಮ ಹಾಗೂ ಚಿಕ್ಕಮಗಳೂರು ಜಿಲ್ಲೆಯಲ್ಲಿ ಜನರು ಹಾಗೂ ಜನಪ್ರತಿನಿಧಿಗಳಿಗೆ ನಕ್ಸಲೀಯರಿಂದ ಜೀವಬೆದರಿಕೆ ಮತ್ತು ಇತ್ತೀಚೆಗೆ ಬೆಂಗಳೂರಿನಲ್ಲಿ ಉಗ್ರಗಾಮಿಗಳಿಂದ ಅಪಾರ ಪ್ರಮಾಣದ ಶಸ್ತ್ರಾಸ್ತ್ರಗಳನ್ನು ವಶಪಡಿಸಿಕೊಳ್ಳಲಾಗಿರುವುದು. ಕರ್ನಾಟಕ ರಾಜ್ಯ ಈ ನಕ್ಸಲೇಟ್ ಹಾಗೂ ಉಗ್ರಗಾಮಿಗಳ ಒಂದು ಕಾರ್ಯಸ್ಥಾನಕ್ಕೆ ಕೇಂದ್ರವಾಗಿರುವಂಥದ್ದು, ಇದರಿಂದ ರಾಜ್ಯದ ಜನರು ಭಯಭೀತರಾಗಿದ್ದಾರೆ ಎನ್ನುವಂಥ ಒಂದು ವಿಷಯದ ಬಗ್ಗೆ ನಿಲುವಳಿ ಸೂಚನೆ ಮೂಲಕ ಚರ್ಚೆ ಮಾಡಿ, ಸರ್ಕಾರಕ್ಕೆ ನಮ್ಮಲ್ಲಿರುವಂಥ ಮಾಹಿತಿಗಳನ್ನು ಕೊಟ್ಟು ಇದಕ್ಕೆ ಒಂದು ಏನಾದರೂ ಪರಿಹಾರವನ್ನು ಹುಡುಕಬೇಕು ಎನ್ನುವ ಸದುದ್ದೇಶದಿಂದ ನಿಲುವಳಿ ಸೂಚನೆಯನ್ನು ನಾವೆಲ್ಲರೂ ಒಟ್ಟಿಗೆ ಸೇರಿ ಇದಕ್ಕೊಂದು ಪ್ರಾಮುಖ್ಯತೆಯನ್ನು ಕೊಟ್ಟು ತಂದಿರುತ್ತೇವೆ. ನನಗೆ ಆಶ್ಚರ್ಯವೆಂದರೆ, ನಮ್ಮ ಹಣಕಾಸು ಸಚಿವರು ಹಾಗೂ ಹಿರಿಯರಾದಂಥ ಮಾನ್ಯ ಸಿದ್ದರಾಮಯ್ಯನವರು ಆ ಬಜೆಟ್‌ನಲ್ಲಿ ಕರ್ನಾಟಕ ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ತೃಪ್ತಿಕರವಾಗಿದೆ ಎಂದು ಒಂದು ಮಾತನ್ನು ತಾವು ಹೇಳಿರುತ್ತೀರಿ. ಮಾನ್ಯ ಸಿದ್ದರಾಮಯ್ಯನವರು ಹಣಕಾಸು ಸಚಿವರಾಗಿ ಅದರಲ್ಲೂ ಹಿರಿಯರಾಗಿ ನೀವು ಹೇಳುವಂಥ

ಒಂದೊಂದು ಮಾತಿಗೂ ಮನ್ನಣೆ ಮತ್ತು ಮಾನ್ಯತೆ ಹಾಗೂ ಗೌರವ ಇರುತ್ತದೆ. ವಾಸ್ತವಿಕ ಸಂಗತಿಗಳ ಆಧಾರದ ಮೇಲೆ ಮಾತನಾಡುವುದನ್ನು ಬಿಟ್ಟು ಯಾವ ಪರಿಸ್ಥಿತಿ ಇದೆಯೋ ಅದಕ್ಕೆ ತದ್ವಿರುದ್ಧವಾಗಿ ತಾವು ಹೇಳಿರುವುದು ಅದರ ಬಗ್ಗೆ ಚರ್ಚೆಯಾದಾಗ, ಅದರ ಸತ್ಯಾಂಶಗಳನ್ನು ಸರಿತಪ್ಪುಗಳನ್ನು ನಾವು ಮಾತನಾಡೋಣ. ತುಮಕೂರು ಜಿಲ್ಲೆ ಪಾವಗಡ ತಾಲ್ಲೂಕಿನಲ್ಲಿ ಆಗಿರುವಂಥ ಘಟನೆ, ಕರ್ನಾಟಕ ಉಗ್ರಗಾಮಿಗಳ, ನಕ್ಸಲೀಯರ ಭಯೋತ್ಪಾದಕರ ಒಂದು ತಂಗುದಾಣವಾಗಿ ಪರಿವರ್ತನೆಯಾಗುತ್ತಿದೆ. ನಾನು ಅಂದುಕೊಂಡಿದ್ದೇನೆ, ಸರ್ಕಾರ ಕಾನೂನು ಸುವ್ಯವಸ್ಥೆಯನ್ನು ಹದ್ದುಬಸ್ತಿನಲ್ಲಿಟ್ಟು ನಾಗರೀಕರಿಗೆ ರಕ್ಷಣೆ ಕೊಡುವಂಥದ್ದು ಸರ್ಕಾರದ ಒಂದು ಆದ್ಯ ಕರ್ತವ್ಯ. ಆದರೆ ಇವತ್ತು ನಿರ್ಭೀತಿಯಿಂದ ಬೆಂಗಳೂರು ಮಹಾನಗರದಲ್ಲಿ ಕರ್ನಾಟಕ ರಾಜ್ಯದ ಪ್ರಮುಖ ನಗರಗಳಲ್ಲಿ ಓಡಾಟವನ್ನು ಮಾಡುವುದಕ್ಕಾಗದಿರುವಂಥ ಉಸಿರುಗಟ್ಟುವಂಥ ಒಂದು ಪರಿಸ್ಥಿತಿ ಬಂದಿದೆ ಎನ್ನುವುದಾದರೆ ಸರ್ಕಾರ, ಗೃಹ ಇಲಾಖೆ, ಏನು ಮಾಡುತ್ತಿದೆ ಎನ್ನುವ ಒಂದು ಪ್ರಶ್ನೆ ಇಲ್ಲಿ ಉದ್ಭವವಾಗುತ್ತಿದೆ. ಆಶ್ಚರ್ಯವೆಂದರೆ, ಯಾವ ಒಂದು ಐ.ಟಿ. ಉದ್ಯಮದಿಂದ ಇಡೀ ಜಗತ್ತಿನಲ್ಲಿ ಬೆಂಗಳೂರು ನಗರಕ್ಕೆ ಒಂದು ಹೆಸರು ಬಂದಿದೆಯೋ ಆ ಐ.ಟಿ. ಉದ್ಯಮಿಗಳ ಮೇಲೂ ಸಹ ಒಂದು ರೀತಿಯ ಉಗ್ರಗಾಮಿಗಳ ಧಾಳಿ, ವ್ಯವಸ್ಥಿತವಾದ ಒಂದು ಷಡ್ಯಂತ್ರ ನಡೆಯುತ್ತಿದೆ ಎನ್ನುವಂಥದ್ದೂ ಸಹ ಅನೇಕ ತನಿಖಾ ವರದಿಗಳಲ್ಲಿ ಬಹಳ ಸ್ಪಷ್ಟವಾಗಿ ಕಾಣುತ್ತಿದೆ. ಅವರಿಗೆ ರಕ್ಷಣೆ ಇಲ್ಲದೆ ಬೆಂಗಳೂರನ್ನು ಬಿಟ್ಟು ಅವರು ಹೊರಗೆ ಹೋಗುವುದಕ್ಕೆ ಅವರೆಲ್ಲರೂ ಸಿದ್ಧತೆಯನ್ನು ಮಾಡಿಕೊಳ್ಳುತ್ತಿದ್ದಾರೆ. ಚುನಾಯಿತ ನಮ್ಮ ಪ್ರತಿನಿಧಿಗಳು ಮಲೆನಾಡಿನ ಆ ಭಾಗದಲ್ಲಿ ಕೆಲಸ ಮಾಡುವುದಕ್ಕಾಗದೆ ಓಡಾಟವನ್ನು ಮಾಡುವುದಕ್ಕಾಗದಂಥ ಪ್ರಾಣದ ಭಯಭೀತಿಯಿಂದ ಓಡಾಟ ಮಾಡುವಂಥ ಒಂದು ಪರಿಸ್ಥಿತಿ ಇದೆ. ಒಂದು ರೀತಿಯ ನೇರವಾದ ಒಂದು ಬೆದರಿಕೆ, ಗ್ರಾಮೀಣ ಪ್ರದೇಶದಲ್ಲಿ ಹೋಗಿ, ಈ ಶಾಸಕರಿಗೆ ಇಲ್ಲಿ ಓಡಾಡುವುದಕ್ಕೆ ಬಿಡಕೂಡದು ಎನ್ನುವಂಥದ್ದು, ಒತ್ತಾಯದ ಮೇಲೆ ಜನರಿಂದ ಹಣ ಸಂಗ್ರಹಣೆ ಮಾಡುತ್ತಿರುವಂಥದ್ದು ಈ ರೀತಿಯ ಒಂದು ಭಯಾನಕ ವಾತಾವರಣ ಚಿಕ್ಕಮಗಳೂರು ಜಿಲ್ಲೆ ಹಾಗೂ ಮಲೆನಾಡು ಪ್ರದೇಶದಲ್ಲಿರುವಂಥದ್ದು, ನಮ್ಮ ಶಾಸಕರ ಪ್ರಾಣಕ್ಕೆ ಧಕ್ಕೆ ಬಂದು ಅವರು ರಕ್ಷಣೆಯಲ್ಲಿ ಓಡಾಟ ಮಾಡುತ್ತಿರುವ ಒಂದು ಪರಿಸ್ಥಿತಿ ಇವತ್ತು ನಮ್ಮ ರಾಜ್ಯದಲ್ಲಿದೆ. ಸ್ವಾಮಿ, ನಾನು ಆ ವಿವರಕ್ಕೆ ಹೋಗುವುದಕ್ಕೆ ಮುಂದೆ, ಸರ್ಕಾರದ ಗಮನಕ್ಕೆ ತರುವ ಒಂದು ದೃಷ್ಟಿಯಿಂದ ನೀವೇ ಕೊಟ್ಟಿರುವ ಒಂದು ಅಂಕಿ ಅಂಶಗಳ ಪ್ರಕಾರ 2003–04ನೇ ಸಾಲಿನವರೆಗೆ 6617 ರಷ್ಟು ಮಹಿಳೆಯರ ಮೇಲೆ ದೌರ್ಜನ್ಯ ನಡೆದಿದೆ. ಬೆಂಗಳೂರು ನಗರ ಒಂದರಲ್ಲಿಯೇ 2002 ರಿಂದ 2004 ರವರೆಗೆ 718 ಕೊಲೆಗಳಾಗಿದೆ, 619 ದರೋಡೆಗಳಾಗಿದೆ. 456 ಸರಗಳ ಅಪಹರಣವಾಗಿದೆ. 1079 ಪ್ರಕರಣಗಳಲ್ಲಿ ಹಗಲುಹೊತ್ತಿನಲ್ಲಿ ದರೋಡೆಯಾಗಿದೆ. 4452 ಪ್ರಕರಣಗಳಲ್ಲಿ ರಾತ್ರಿ ಹೊತ್ತು ದರೋಡೆಯಾಗಿದೆ. 8343 ವಾಹನಗಳ ಕಳವಾಗಿದೆ, ಇವೆಲ್ಲಾ ದಾಖಲೆಗಳಲ್ಲಿ ಸಿಗುತ್ತದೆ. ದಾಖಲೆಯಲ್ಲಿ ಸಿಗದಿರುವಂಥದ್ದು ಇದರ 10 ಪಟ್ಟು ಜಾಸ್ತಿ ಇರಬಹುದೆಂದು ನನ್ನ ಒಂದು ಅನಿಸಿಕೆ. ವಿಧಾನಸೌಧದ ಪಕ್ಕದಲ್ಲಿರುವ ಶಾಸಕರ ಭವನದಲ್ಲಿಯೇ ಶಾಸಕರ ಕೊಠಡಿಯಲ್ಲಿಯೇ ಕಳವಾಯಿತು. ಬಳ್ಳಾರಿ ಜಿಲ್ಲೆ, ಹಿರಿಯ ಸಚಿವರಾದ ಶ್ರೀ ಎಂ.ಪಿ. ಪ್ರಕಾಶ್‌ರವರು ಇಲ್ಲಿಯೇ ಇದ್ದಾರೆ, ಈ ಸುಪಾರಿ ಹಂತಕರಿಗೆ ಹೇಳಿ ಮಾಡಿಸಿರುವಂಥ ಒಂದು ಭದ್ರ ಕೋಟೆಯಾಗಿದೆ. ಇವತ್ತು ಎಲ್ಲಾ ಅಂಕಿ ಅಂಶಗಳಲ್ಲಿ ನಮಗೆ ಸಿಗುತ್ತಿದೆ. ಆಂಧ್ರಪ್ರದೇಶದ ಈ ನಮ್ಮ ಗಡಿ ಭಾಗದಲ್ಲಿ

ದಿನಕ್ಕೊಂದು ತಲೆ ಕತ್ತರಿಸಿ ಕೊಲೆ ಮಾಡತಕ್ಕಂಥದ್ದು ಮರುಕಳಿಸುತ್ತಿದೆ. ಇತ್ತೀಚೆಗೆ ಆಂಧ್ರಪ್ರದೇಶದ ಭೂ ಮಾಲೀಕರ ಸಂಖ್ಯೆ ನಮ್ಮ ಬಾರ್ಡರ್‌ಗೆ ಬರುವ ಸಂಖ್ಯೆ ಜಾಸ್ತಿಯಾಗಿ ಈ ರಾಯಲ್ ಸೀಮಾ ಪ್ರದೇಶದ ಕರ್ನಾಟಕದ ರಾಯಚೂರು, ಬಳ್ಳಾರಿ ಈ ಕಡೆ ಕೋಲಾರ ಜಿಲ್ಲೆಯ ಗಡಿ ಭಾಗದಲ್ಲಿ ಈ ಭೂಮಿಯನ್ನು ಖರೀದಿ ಮಾಡುತ್ತಿದ್ದು ಈ ರಾಯಲ್ ಸೀಮಾ ಎಷ್ಟು ಕೊಲೆಗಳಿಗೆ ಕಾರಣ, ಈ ಬಳ್ಳಾರಿಯ ಸುಪಾರಿ ಕೊಲೆ ಮಾಡುತ್ತಿರುವುದಕ್ಕೆ ಅವರು ಸಹ ಕಾರಣ ಅಂತ ಮಾಹಿತಿ ಇದೆ ಎಂದು ನಾನು ತಿಳಿದುಕೊಂಡಿದ್ದೇನೆ. ಬಳ್ಳಾರಿ ನಗರಸಭೆಯ ಮ್ಯಾನೇಜರ್ ವಿಜಯ ಕುಮಾರ್‌ರವರ ಹತ್ಯೆಯಾಯಿತು. ಇಂಜನೀಯರ್ ರಾಮಕೃಷ್ಣರವರ ಹತ್ಯೆಯಾಯಿತು. ಲಿಕ್ಕರ್ ದೊರೆ ಬಿ. ಪ್ರಸಾದನ್ ಅವರ ಬರ್ಬರ ಕೊಲೆಯಾಯಿತು. ನಗರ ಸಭೆಯ ಸದಸ್ಯ ರಾಘವೇಂದ್ರನ ಕೊಲೆಯಾಯಿತು. ಇವರ ತಂದೆ ಮಾಜಿ ನಗರಸಭೆಯ ಸದಸ್ಯ, ಕುಮಾರಸ್ವಾಮಿಯ ಕೊಲೆಯಾಯಿತು. ರಾಯಲ್ ಸೀಮಾದಲ್ಲಿ ಕಿಂಗ್ ಎಂದು ಕರೆಸಿಕೊಳ್ಳುತ್ತಿದ್ದ ವೆಂಕಟೇಶ್ವರರಾವ್‌ರವರ ಕೊಲೆಯಾಯಿತು. ಬಳ್ಳಾರಿಯಲ್ಲಿ ಆಂಧ್ರ ಮಾದರಿಯಲ್ಲಿಯೇ ಬರ್ಬರ ಹತ್ಯೆಯಾಯಿತು. ಗುಲ್ಬರ್ಗಾ ಜಿಲ್ಲೆ ಇದಕ್ಕೇನೂ ಹೊರತಾಗಿಲ್ಲ. ಸನ್ಮಾನ್ಯ ಮುಖ್ಯಮಂತ್ರಿಗಳು ಪ್ರತಿನಿಧಿಸತಕ್ಕಂಥ ಆ ಜಿಲ್ಲೆಯಲ್ಲಿ ಇತ್ತೀಚೆಗೆ ಶಿರವಾಳ ಗ್ರಾಮದಲ್ಲಿ ಶಸ್ತ್ರಾಸ್ತ್ರ ಗುಂಪೊಂದು ಅಮಾಯಕರ ಮೇಲೆ ಗುಂಡು ಹಾರಿಸಿ ನಾಲ್ವರನ್ನು ಬಲಿ ತೆಗೆದುಕೊಂಡರು. ಈ ಘಟನೆ ನಡೆದು 7 ತಿಂಗಳಾದರೂ ಇದುವರೆಗೆ ಅಪರಾಧಿಗಳ ಬಂಧನವಾಗಲಿಲ್ಲ. ಯಾರನ್ನು ಹಿಡಿದಿಲ್ಲ, ಗುಲ್ಬರ್ಗಾ ನಗರದಲ್ಲಿ ನೂರಾರು ಜನರ ಎದುರು ಆ ಎಎಸ್‌ಐ, ಒಬ್ಬ ಆಟೋ ಚಾಲಕನನ್ನು ಕೊಂದು ಹಾಕಿದರು, ಇದುವರೆಗೆ ಪೋಲೀಸ್ ಇಲಾಖೆ ಕ್ರಮ ತೆಗೆದುಕೊಂಡಿಲ್ಲ. ನನಗೆ ಅನಿಸುವಂಥದ್ದು ಈ ರೀತಿ ಕಾನೂನು ಸುವ್ಯವಸ್ಥೆ ಸಂಪೂರ್ಣವಾಗಿ ಹದಗೆಡುತ್ತಿರಬೇಕಾದರೆ ಈ ಸರ್ಕಾರಕ್ಕೆ ಖಚಿತವಾಗಿ ಕಾನೂನು ಸುವ್ಯವಸ್ಥೆ ಮಾಡುವುದಕ್ಕೆ ಅದನ್ನು ನಿಭಾಯಿಸುವುದಕ್ಕೆ ಈ ರಾಜಕೀಯ ಚಾಕಚಕ್ಯತೆ ಇದೆ ಎಂದು ನಮಗೆ ಎಲ್ಲೂ ಅನಿಸುತ್ತಿಲ್ಲ. ಎಲ್ಲಾ ಕಡೆ ಅಧಿಕಾರಿಗಳ ದರ್ಬಾರು, ಇಲ್ಲವಾದರೆ ಸಮ್ಮಿಶ್ರ ಸರ್ಕಾರದ ಪಾಲುದಾರ ಕಾರ್ಯಕರ್ತರ ಹಸ್ತಕ್ಷೇಪ, ಅವರು ಮಧ್ಯೆ ಪ್ರವೇಶ ಮಾಡಿ ಪೊಲೀಸ್ ಸ್ಟೇಶನ್ನೇ ನಮ್ಮದು ಎಂದು ಅವರು ತಿಳಿದುಕೊಂಡಿದ್ದಾರೆ. ಇಲ್ಲಿರುವಂಥ ಉನ್ನತ ಪೊಲೀಸ್ ಅಧಿಕಾರಿಗಳಿಗೆ ಈ ವಿಷಯ ಗೊತ್ತಿದೆಯೋ ಅಥವಾ ಇಲ್ಲವೋ?

ಮಾನ್ಯ ಮುಖ್ಯಮಂತ್ರಿಗಳು ಒಂದು ಗಂಭೀರವಾದ ಮಾತನ್ನು ಹೇಳಿದರು. ಯೋಚನೆ ಮಾಡಿ ಹೇಳಿದರೋ ಏನೋ ಗೊತ್ತಿಲ್ಲ. ಈ ನಕ್ಸಲೀಯರ ಚಟುವಟಿಕೆಗಳು ಅದೊಂದು ಸಾಮಾಜಿಕ ಚಳುವಳಿ ಎಂದು, ಒಂದು ರೀತಿಯಾಗಿ ಗೊತ್ತಿದ್ದೊ ಅಥವಾ ಗೊತ್ತಿಲ್ಲದೆಯೋ ಸರ್ಟಿಫಿಕೇಟನ್ನು ಸನ್ಮಾನ್ಯ ಮುಖ್ಯಮಂತ್ರಿಗಳು ಕೊಟ್ಟು ಬಿಟ್ಟರು. ನಂತರ ಅವರನ್ನು ಮಾತುಕತೆಗೆ ಕರೆದರು, ಮಾತುಕತೆಗೆ ಕರೆದಾಗ ಆಹ್ವಾನ ಹೇಗಿತ್ತು ಎಂದರೆ, ಚಿಕ್ಕಮಗಳೂರು ಜಿಲ್ಲೆ ಮೆಣಸಿನ ಹಾಡ್ಯದಲ್ಲಿ ಅಲ್ಲಿ ಚಕಮುಕಿಯಾಯಿತು, ಆ ಹಿನ್ನೆಲೆಯಲ್ಲಿ ಮಾತುಕತೆಯ ಬಗ್ಗೆ ಆಹ್ವಾನವನ್ನು ಕೊಟ್ಟಿದ್ದೀರಿ. ಎಸ್.ಟಿ.ಎಫ್.ನ್ನು ಕಳುಹಿಸುತ್ತೇನೆ ಎಂದು ಮುಖ್ಯಮಂತ್ರಿಗಳು ಹೇಳಿದರು. ಇದು ಸದನದಲ್ಲಿ ಕೊಟ್ಟ ಭರವಸೆಯಾಗಿದೆ. ಪ್ರತಿಪಕ್ಷದ ನಾಯಕರ ಜೊತೆ ಸಮಾಲೋಚನೆ ಮಾಡಿ ಕೊಟ್ಟಂತಹ ಭರವಸೆಯಾಗಿದೆ. ಈ ಲೆಕ್ಕಾಚಾರವನ್ನು ಹಾಕುವುದರೊಳಗಾಗಿ ವೆಂಕಟಮ್ಮನಹಳ್ಳಿಯಲ್ಲಿ ಪೊಲೀಸರ ಹೆಣಗಳು ಬಿದ್ದವು, ಇಂತಹ ಸಂದರ್ಭದಲ್ಲಿ ನಮ್ಮ ಪೊಲೀಸ್ ಉನ್ನತ ಅಧಿಕಾರಿಗಳು

ಗಮನಿಸಬೇಕಾದುದು ಎಂದರೆ, ನಮ್ಮ ಗೃಹಸಚಿವರಾದ ಸನ್ಮಾನ್ಯ ಮುಖ್ಯಮಂತ್ರಿಗಳು ಈ ನಕ್ಸಲೀಯರ ಭೇಟಿಯಾಡುವ ನೆಪದಲ್ಲಿ ಸನ್ಮಾನ್ಯ ವಾಟಾಳ್ ನಾಗರಾಜರವರೆ, ಆ ನೆಪದಲ್ಲಿ ಬೆಂಗಳೂರಿನಲ್ಲಿ ಬೀದಿಗಳಲ್ಲಿ ರಾತ್ರಿ ಹೊತ್ತು ವಾಹನಗಳನ್ನು ತಡೆದು ಪರಿಶೀಲನೆ ಮಾಡುವುದು, ಅವರಿಗೆ ಕಿರುಕುಳವನ್ನು ಕೊಟ್ಟು, ಆಗ ರಾತ್ರಿ ಗಸ್ತು ತಿರುಗುವವರು ಏನೇನು ದೋಚಿದರೋ ಗೊತ್ತಿಲ್ಲ. ಕಿರುಕುಳದ ಮೇಲೆ ಕಿರುಕುಳವನ್ನು ಕೊಟ್ಟರು. ಒಂದು ರೀತಿಯಲ್ಲಿ ಸರ್ಕಾರಿ ಭಯೋತ್ಪಾದನೆ ಪ್ರಾರಂಭವಾಯಿತು. ರಾತ್ರಿ ಗಸ್ತು ತಿರುಗಬಾರದು, ತನಿಖೆ ಮಾಡಬಾರದು ಎಂದು ನಾನು ಹೇಳಲಿಲ್ಲ. ಅದರ ಬಗ್ಗೆ ವಿವರವನ್ನು ಪತ್ರಿಕೆಗಳಲ್ಲಿ ನೋಡಿದಾಗ, ಪತ್ರಿಕೆಗಳಲ್ಲಿ ಬಂದ ವರದಿಯನ್ನು ನೋಡಿದಾಗ ಇದೊಂದು ಕಿರುಕುಳಕ್ಕೆ ಹಾದಿಯಾಯಿತೇ ಹೊರತು, ಪ್ರಾಮಾಣಿಕವಾಗಿ ಈ ರೀತಿ ಭಯೋತ್ಪಾದಕರನ್ನು, ನಕ್ಸಲೀಯರ ಚಟುವಟಿಕೆಗಳಲ್ಲಿ ಭಾಗವಹಿಸುವವರನ್ನು ಐ.ಎಸ್.ಐ. ಚಟುವಟಿಕೆಗಳಲ್ಲಿ ಭಾಗವಹಿಸುವವರನ್ನು, ದೇಶದ್ರೋಹಿ ಚಟುವಟಿಕೆಗಳಲ್ಲಿ ಭಾಗವಹಿಸುವವರನ್ನು ಹಿಡಿಯಬೇಕು ಎನ್ನುವ ಯಾವುದೇ ಒಂದು ಪ್ರಯತ್ನದಿಂದ ಆ ಮೂಲಕ ಜನರ ವಿಶ್ವಾಸಕ್ಕೆ ಬರಲಿಲ್ಲ. ಯಾರೋ ಕೆಲವು ಹುಡುಗರು ಕುಡಿದು ಹೋಗುತ್ತಿದ್ದರು, ಅವರು ಯಾರೂ ಮಾಡದ ಪಾಪವನ್ನು ಮಾಡಲಿಲ್ಲ, ಯಾರು ತಲೆಯನ್ನು ಕಡಿದರು ಅವರನ್ನು ಬಿಟ್ಟರು, ರಾತ್ರಿ ಯಾರೋ ಯುವಕರು ಹೋಗುವವರನ್ನು ಬರುವವರನ್ನು ಬಂಧಿಸಿ ಕಿರುಕುಳವನ್ನು ಕೊಡುವುದು ಪ್ರಾರಂಭವಾಯಿತು. ಇದು ಎಲ್ಲಿಯವರೆವಿಗೆ ಹೋಯಿತು ಎಂದರೆ ಲೋಕಾಯುಕ್ತರವರಾದ ಮಾನ್ಯ ವೆಂಕಟಾಚಲಯ್ಯನವರು ಇದನ್ನು ಗಮನಿಸಿ ಈ ರೀತಿಯಾಗಿ ಕಿರುಕುಳವನ್ನು ಕೊಡಬಾರದು ಎಂದು ಸೂಚನೆಯನ್ನು ಹಾಗೂ ಅವರ ಅಭಿಪ್ರಾಯವನ್ನು ಕೊಡುವ ಮಟ್ಟಕ್ಕೆ ಅದು ಆಯಿತು. ಆದರೆ ಅದು ಇನ್ನೂ ನಿಂತಿಲ್ಲ, ನಕ್ಸಲೀಯರ ಮೇಲೆ ಒಂದು ರೀತಿಯ ಸೇಡನ್ನು ತೀರಿಸಿಕೊಳ್ಳುವ ರೀತಿಯಲ್ಲಿ, ಆ ನೆಪದಲ್ಲಿ ಈ ಪೋಲೀಸ್‌ನವರು ನಾಗರೀಕರ ಮೇಲೆ ಈ ರೀತಿಯಾಗಿ ಕಿರುಕುಳವನ್ನು ಕೊಡುವಂತಹ ಮಾರ್ಗವನ್ನು ಅನುಸರಿಸಿದರು. ಇವರು ಎಲ್ಲೆಲ್ಲಿ ಗಸ್ತು ತಿರುಗಿದರು, ಇವರು ವಿಧಾನಸೌಧದ ಸುತ್ತಮುತ್ತ ಮತ್ತು ಮಂತ್ರಿಗಳ ಮನೆಯ ಸುತ್ತಮುತ್ತ ಗಸ್ತು ತಿರುಗುತ್ತಾರೆ. ಮುಖ್ಯಮಂತ್ರಿಗಳ ಮನೆಯ ಸುತ್ತಮುತ್ತ ಗಸ್ತು ತಿರುಗುತ್ತಾರೆ. ನಾಗರೀಕರಿಗೆ ಭಯೋತ್ಪಾದಕರು ಇಲ್ಲಿಯೇ ತಂಗುದಾಣ ಮಾಡಿರಬಹುದು, ಪೋಲೀಸರೆ ರಕ್ಷಣೆಯನ್ನು ಕೊಡುತ್ತಾರೆ ಎನ್ನುವಂತಹ ರೀತಿಯಲ್ಲಿ ವಿ.ಐ.ಪಿ.ಗಳ ಮನೆಯ ಸುತ್ತಮುತ್ತ ರಾತ್ರಿ ಹೊತ್ತು ಗಸ್ತು ತಿರುಗಿ ಬಹಳ ಚೆನ್ನಾಗಿ ಕೆಲಸ ಮಾಡುತ್ತಿದ್ದೇವೆನ್ನುವಂತಹ ರೀತಿಯಲ್ಲಿ ಮಾಡಿದರು. ಗಸ್ತು ತಿರುಗುತ್ತಿರುವುದು ಮೇಲ್ನೋಟಕ್ಕೆ ಕಾಣುತ್ತಿರುವುದು ಪ್ರತ್ಯಕ್ಷವಾಗಿ ನೋಡಿದ್ದೇನೆ. ಬಹುಶಃ ಆಡಳಿತವನ್ನು ನಡೆಸುವವರಿಗೆ ಜನತೆಗೆ ಅನುಮಾನ ಬರುವಂತಹ ರೀತಿಯಲ್ಲಿ ಈ ಒಂದು ಕೆಲಸಗಳು ಪ್ರಾರಂಭವಾಯಿತು. ಬಹುಶಃ ಈ ರೀತಿಯಾಗಿ ಸರ್ಕಾರಿ ಭಯೋತ್ಪಾದನೆ ಪೋಲೀಸ್‌ನವರಿಂದ ಪ್ರಾರಂಭವಾದರೆ ಬಹುಶಃ ಜನರು ದಂಗೆ ಏಳುವಂತಹ ಕಾಲ ಬರಬಹುದು, ಇದರ ಬಗ್ಗೆ ತಾವು ಎಚ್ಚರವನ್ನು ವಹಿಸಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಚಿಕ್ಕಮಗಳೂರಿನಲ್ಲಿ ಮತ್ತು ಬಾಗಲಕೋಟೆಯಲ್ಲಿ ಮತ್ತು ಇತರ ಭಾಗಗಳಲ್ಲಿ ಸ್ಥಳೀಯ ಶಾಸಕರ ಜೊತೆಯಲ್ಲಿಯೇ ಒಂದು ರೀತಿಯಾಗಿ ಎಸ್.ಪಿ. ಮತ್ತು ಡಿ.ಸಿ.ಯವರ ಅಧಿಕಾರಿಗಳ ದೌರ್ಜನ್ಯ, ಒಂದು ರೀತಿಯಾಗಿ ಭಯದ ವಾತಾವರಣದಲ್ಲಿ ಚುನಾಯಿತ ಪ್ರತಿನಿಧಿಗಳಾದ ಶಾಸಕರುಗಳು ಕೆಲಸ ಮಾಡದಂಥ ಉಸಿರು ಕಟ್ಟುವಂತಹ ಪರಿಸ್ಥಿತಿ, ಇವತ್ತು ಅದು ಎಲ್ಲಿಗೆ ಬಂದಿದೆ ಎಂದರೆ,

ಪ್ರತಿಪಕ್ಷದಲ್ಲಿ ಕುಳಿತಿರುವಂತಹ ಯಾವುದೇ ಶಾಸಕರಿಗೆ, ಯಾವುದೇ ರೀತಿಯಾದಂತಹ ಮನ್ನಣೆ, ಗೌರವ, ಪೊಲೀಸ್ ಇಲಾಖೆಯಲ್ಲಿ ನಾವು ಕಾಣುವುದಿಲ್ಲ. ಒಂದು ರೀತಿಯಾಗಿ ಆಡಳಿತ ಪಕ್ಷದ ಆಜ್ಞೆಗೆ ತಕ್ಕಂತೆ ನಾವು ಕಾನೂನು ಪರಿಪಾಲನೆ ಮಾಡಬೇಕಾದರೆ ನಮಗೆ ಎಲ್ಲಿ ರಕ್ಷಣೆ ಸಿಗುತ್ತದೆ ಎನ್ನುವಂತಹ ಕೆಟ್ಟ ವಾತಾವರಣ, ನಾನು ಕಳೆದ 20 ವರ್ಷಗಳಿಂದ ಈ ಸದನದಲ್ಲಿ ಕೆಲಸವನ್ನು ಮಾಡಿದ್ದೇನೆ, ಬಹುಶಃ ಆಡಳಿತ ಪಕ್ಷದ ನಮ್ಮ ಸ್ನೇಹಿತರುಗಳಿಗೆ ಈ ಕಡೆ ಇರುವಂತಹವರಿಗೆ ಅನುಭವಕ್ಕೆ ಬಂದಿರಬಹುದು, ಹಿಂದೆಂದೂ ಸಹ ಈ ರೀತಿಯಾಗಿ ಪೊಲೀಸ್‌ನವರು ಕೆಟ್ಟ ರೀತಿಯಲ್ಲಿ ಚುನಾಯಿತ ಪ್ರತಿನಿಧಿಗಳ ಜೊತೆ ವರ್ತನೆ ಮಾಡುತ್ತಿರುವುದನ್ನು ಇದುವರೆವಿಗೆ ಸನ್ಮಾನ್ಯ ಸಭಾಧ್ಯಕ್ಷರೆ ನಾನು ಕಾಣಲಿಲ್ಲ. ಈ ರಾಜ್ಯದಲ್ಲಿ ಈ ರೀತಿಯಾಗಿ ಕಾನೂನು ಮತ್ತು ಸುವ್ಯವಸ್ಥೆ ಹದಗೆಡುತ್ತಿರಬೇಕಾದರೆ ನೀವು ಏನು ಮಾಡುತ್ತಿದ್ದೀರಿ? ನಿಮ್ಮ ಇಂಟಲಿಜೆನ್ಸ್ ಏನು ಮಾಡುತ್ತಿತ್ತು? ಏತಕ್ಕಾಗಿ ಈ ಕಡೆಗೆ ಗಮನವನ್ನು ಕೊಡಲಿಲ್ಲ. ನಿಮಗೆ ಆಶ್ಚರ್ಯವಾಗಬಹುದು, ಇದರ ಬಗ್ಗೆ ನಾನು ಹೇಳಿದೆ, ಬಹಳ ಹಗುರವಾಗಿ ಈ ನಮ್ಮ ಆಡಳಿತ ಪಕ್ಷದ ಸದಸ್ಯರು ಎರಡೂ ಮನೆಯಲ್ಲಿ ತೆಗೆದುಕೊಂಡರು. ಯಾವ ನಕಲಿ ಛಾಪಾ ಕಾಗದದ ಕರೀಂಲಾಲನ ಹಗರಣ ಪ್ರಾರಂಭವಾಯಿತೋ ಇದರಲ್ಲಿ ಸಾವಿರಾರು ಕೋಟಿ ರೂಪಾಯಿಗಳು ಈ ರೀತಿಯಾಗಿ ದೇಶದ್ರೋಹಿ ಚಟುವಟಿಕೆಗೆ ಈ ಹಣ ಉಪಯೋಗವಾಗುತ್ತಿದೆ, ಬಂದೋಬಸ್ತು ಆಗಬೇಕು, ಇದರ ಬಗ್ಗೆ ಕ್ರಮವನ್ನು ತೆಗೆದುಕೊಳ್ಳಬೇಕು, ಎಂದು ನಮ್ಮ ಪ್ರಾಣದ ಹಂಗನ್ನು ತೊರೆದು ಇಲ್ಲಿ ಹೋರಾಟವನ್ನು ಮಾಡಿದೆವು. ಇದರ ಬಗ್ಗೆ ನಾನು ಹೇಳುವುದು ಬೇಡ ಸ್ವಾಮಿ, ಇದು ಇವತ್ತು ನಿಮಗೆ ಗೊತ್ತಾಗಲಿಲ್ಲ, ಇದು ಅವತ್ತೆ ನಿಮಗೆ ಗೊತ್ತಿರುವಂತಹದ್ದು. ಈ ಜುಡಿಷಿಯಲ್ ಕಸ್ಟಡಿಯಲ್ಲಿದ್ದಂತಹ ವ್ಯಕ್ತಿಗಳನ್ನು ಬಿಡುಗಡೆ ಮಾಡಬಾರದು ಎಂದು ದಿನಾಂಕ : 29–11–2001 ಜಿ.ಎ. ಭಾವಾರವರು ಅಸಿಸ್ಟೆಂಟ್ ಕಮೀಷನರ್ ಆಫ್ ಪೊಲೀಸ್ ಅಬ್ದುಲ್ ಕರೀಂಲಾಲ್ ಬಗ್ಗೆ ಇತರ ಅಪರಾಧಿಗಳ ಬಗ್ಗೆ ಅರ್ಜಿಯನ್ನು ಹಾಕಿದಂತಹ ಸಂದರ್ಭದಲ್ಲಿ ಅವರು ಏನು ಹೇಳಿದ್ದಾರೆ,

> "Further it is learnt that this racket has connection with neighbouring countries of India like Nepal, Bangla Desh. Further there is definite information that the prime accused in this case Abdul Kareem Telgi has connections with underworld people".

ಎಂದು ನಾನು ಹೇಳುತ್ತಿಲ್ಲ. ಈ ಮನೆಯಲ್ಲಿ ಎರಡು ಕಡೆ ಸಾಕ್ಷ್ಯಾಧಾರಗಳೊಂದಿಗೆ ನಾವು ಏನು ಆರೋಪವನ್ನು ಮಾಡಿದ್ದೆವೋ, ಈ ಕರೀಂಲಾಲ ಏನೂ ಅದು 25 ಅಥವಾ 30 ಸಾವಿರ, 40 ಸಾವಿರ ಕೋಟಿನೋ ಅದು ಬೇರೆ ವಿಷಯ. ಆ ಹಣ ಎಲ್ಲೂ ಇಲ್ಲ, ಅದು ಸಿಕ್ಕಿಲ್ಲ. ನಕಲಿ ಛಾಪಾ ಕಾಗದದ ವ್ಯವಹಾರ ನಡೆದಿರುವುದು ನಿಜ, ಆ ದುಡ್ಡು ಈ ದೇಶದಲ್ಲಿ ದೇಶದ್ರೋಹಿ ಚಟುವಟಿಕೆಗೆ ಐಎಸ್‌ಐಗೆ ಕುಮ್ಮಕ್ಕು ಕೊಡುವುದಕ್ಕೋಸ್ಕರ ಈ ಹಣ ಉಪಯೋಗವಾಗುತ್ತಿದೆ ಎಂದು ಸಾರಿಸಾರಿ ಈ ಸದನದಲ್ಲಿ ಹೇಳುವಂತಹ ಪ್ರಯತ್ನವನ್ನು ಮಾಡಿದೆವು. ನಾನು ಸನ್ಮಾನ್ಯ ಮುಖ್ಯಮಂತ್ರಿಗಳಲ್ಲಿ ಒಂದು ಮಾತನ್ನು ಹೇಳುತ್ತೇನೆ, ನಾನು ಬಹಳ ಜವಾಬ್ದಾರಿಯಿಂದ ಹಾಗೂ ಅನುಭವದಿಂದ

ಹೇಳುತ್ತಿದ್ದೇನೆ, ಇವತ್ತು ಈ ದೇಶದ ಇತಿಹಾಸದಲ್ಲಿ ಜೈಲಿನ ಒಳಗಡೆ, ನಮ್ಮ ಜೈಲಿನ ಅಧಿಕಾರಿಗಳು, ಪೊಲೀಸ್ ಅಧಿಕಾರಿಗಳು ಅವನ ಜೊತೆ ನಕಲಿ ಛಾಪಾಕಾಗದ ವ್ಯವಹಾರ ಮಾಡುವುದಕ್ಕೆ ಬಂದು ಶಾಮೀಲಾಗಿರುವಂತಹ ವ್ಯಕ್ತಿಗಳು ಕೆಲವರು ಈಗ ಜೈಲಿನೊಳಗಡೆ ಇದ್ದಾರೆ, ಕೆಲವರು ಹೊರಗಡೆ ಇದ್ದಾರೆ, ಇವತ್ತು ಹೊರಗಡೆ ಇರುವಂತಹ ಟಾಪ್ ಪೊಲೀಸ್ ಆಫೀಸರ್‌ಗಳೂ ಸ್ವತಃ ಈ ಸ್ಟಾಂಪಿಟ್ ಇಲಾಖೆಯ ಅಧಿಕಾರಿಯ ಆ ಗುಪ್ತ ವರದಿಗಳನ್ನು ಟೇಬಲ್ ಮಾಡಿ ಇನ್ನು ಅನೇಕ ಜನ ಟಾಪ್ ಪೊಲೀಸ್ ಅಧಿಕಾರಿಗಳು ಇದರಲ್ಲಿ ಶಾಮೀಲಾಗಿದ್ದಾರೆ ಎನ್ನುವಂತಹ ವರದಿಯನ್ನು ಕೊಟ್ಟ ಮೇಲೂ ಸಹ, ರಕ್ಷಣೆಯನ್ನು ಕೊಡುವಂತಹ ಪ್ರಯತ್ನವನ್ನು ಮಾಡಿದ್ದೀರಿ. ಸುಪ್ರೀಂಕೋರ್ಟ್ ನಾಲ್ಕು ವಾರದಲ್ಲಿ ಇವರ ಮೇಲೆ ಕ್ರಮ ತೆಗೆದುಕೊಳ್ಳಬೇಕು, ಇವರನ್ನು ಪ್ರಾಸಿಕ್ಯೂಟ್ ಮಾಡಬೇಕು ಎಂದು ಹೇಳಿದ ಮೇಲೂ ಸಹ ಕೆಲವರು ಬಂಧನವಾಗಿರುವವರನ್ನು ತೋರಿಸಿಕೊಟ್ಟೆವು. ಉಳಿದಂತಹ ಆ ಸ್ಟಾಂಪಿಟ್ ಅಧಿಕಾರಿಗಳು ಕೊಟ್ಟಂತಹ ವರದಿಯ ಆಧಾರದ ಮೇಲೆ ಆ ಟಾಪ್ ಪೊಲೀಸ್ ಅಧಿಕಾರಿಗಳನ್ನು ನೀವು ಮುಟ್ಟುವುದಕ್ಕೆ ಹೋಗುತ್ತಿಲ್ಲ. ಇವರೆಲ್ಲರೂ ಒಂದು ರೀತಿಯಾಗಿ ಅಂಡರ್‌ವರ್ಲ್ಡ್‌ನವರ ಜೊತೆಗೆ ಸಂಬಂಧವನ್ನು ಇಟ್ಟುಕೊಂಡಿದ್ದಾರೆ. ಐಎಸ್‌ಐನವರ ಜೊತೆಗೆ ಸಂಬಂಧವನ್ನು ಇಟ್ಟುಕೊಂಡಿದ್ದಾರೆ. ದೇಶದ್ರೋಹಿ ಚಟುವಟಿಕೆಗೆ ಕುಮ್ಮಕ್ಕು ಕೊಡುತ್ತಿದ್ದಾರೆ, ಇವೆಲ್ಲವೂ ಗೊತ್ತಿದ್ದು ಸಹ ಅವರನ್ನು ರಕ್ಷಣೆ ಮಾಡುವಂತಹ ಪ್ರಯತ್ನ ಮತ್ತೆ ಅವರನ್ನು ಮುಟ್ಟಿದರೆ ಅನೇಕ ವಿಷಯಗಳು ಬಹಿರಂಗವಾಗಿ ನಮ್ಮ ಸ್ಥಾನಮಾನಕ್ಕೆ, ಸರ್ಕಾರ ಮುಂದುವರಿಯುವುದಕ್ಕೆ ಅಡ್ಡಿಯಾಗುತ್ತದೆ, ಎನ್ನುವ ಭಯದ ವಾತಾವರಣಕ್ಕೋಸ್ಕರ ಇವರನ್ನು ರಕ್ಷಣೆ ಮಾಡುವುದಕ್ಕೆ ಪ್ರಯತ್ನವನ್ನು ಮಾಡುತ್ತಿದ್ದೀರಾ? ಇದನ್ನು ಇವತ್ತು ರಾಜ್ಯದ ಜನ ಕೇಳುತ್ತಿರುವಂತಹ ಪ್ರಶ್ನೆಯಾಗಿದೆ. ಆಡಳಿತದಲ್ಲಿ ಯಾರೇ ಇರಬಹುದು, ನಾನು ಜವಾಬ್ದಾರಿ ಸ್ಥಾನದಲ್ಲಿದ್ದುಕೊಂಡು ಬೆಟ್ಟು ತೋರಿ ನಿಮ್ಮನ್ನು ಅಪರಾಧಿ ಸ್ಥಾನದಲ್ಲಿ ನಿಲ್ಲಿಸುವುದಕ್ಕೋಸ್ಕರ ಈ ಮಾತನ್ನು ಆಡುತ್ತಿಲ್ಲ. ಎಲ್ಲೋ ಒಂದು ಕಡೆ ಇದನ್ನು ಗಂಭೀರವಾಗಿ ತೆಗೆದುಕೊಳ್ಳುವಂತಹ ಪ್ರಯತ್ನವನ್ನು ನೀವು ಮಾಡಲಿಲ್ಲ. ಇದರ ಪರಿಣಾಮ ಇಡೀ ದೇಶಕ್ಕೆ ಕರ್ನಾಟಕ ಎಂದರೆ ಯಾರು ಬೇಕಾದರೂ ಇಲ್ಲಿಗೆ ಬಂದು ಶಾಂತಿಗೌರವದಿಂದ ಬಾಳಿ ಬದುಕಬಹುದು ಎಂಬ ವಾತಾವರಣವಿತ್ತೋ ಅದು ಸಂಪೂರ್ಣ ಬದಲಾವಣೆಯಾಗಿ ನಮಗೆ ರಕ್ಷಣೆ ಇಲ್ಲದೆ ಇರುವಂತಹ ಪರಿಸ್ಥಿತಿ ಬಂದಿದೆ. ಇವತ್ತು ಈ ಸದನದಲ್ಲಿ ನಿಂತುಕೊಂಡು ನಾನು ಒಂದು ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ, ಈ ನಕ್ಸಲೀಯರ ಚಳುವಳಿ ಜನ್ಮ ತಾಳಿದ್ದೇ ಈ ಹಿಂಸಾಚಾರದ ಸಿದ್ಧಾಂತದ ಆಧಾರದ ಮೇಲೆ. ಶೋಷಣೆ ವಿರುದ್ಧ ಹೋರಾಟ ಎಂಬ ಸಿದ್ಧಾಂತದಿಂದ ಆರಂಭವಾದ ಈ ಚಳುವಳಿ ಇವತ್ತು ಈ ಪರಿಸ್ಥಿತಿಗೆ ಬಂದು ಮುಟ್ಟಿದೆ, ಭಾರತದ 15 ರಾಜ್ಯಗಳಲ್ಲಿ ಈ ನಕ್ಸಲೀಯರ ಚಟುವಟಿಕೆಗಳು ಹರಡಿಕೊಂಡಿದೆ. ಅನೇಕ ರಾಜಕೀಯ ಪಕ್ಷಗಳ ಸಂಪರ್ಕ ಇಟ್ಟುಕೊಂಡಿದ್ದಾರೆ. ಆ ರೀತಿಯ ರಾಜಕೀಯ ಪಕ್ಷಗಳ ಸಂಪರ್ಕವೇ ಅವರ ಶಕ್ತಿ ಹೆಚ್ಚಾಗುವುದಕ್ಕೆ ಕಾರಣವಾಯಿತು ಎಂದು ಆಂಧ್ರದ ಉದಾಹರಣೆ ಕೊಟ್ಟು ನಾನು ಬಹಳ ನೇರವಾಗಿ ಹೇಳಲಿಕ್ಕೆ ಇಚ್ಛೆಪಡುತ್ತೇನೆ. ಈ ನಕ್ಸಲೀಯರ ಬೇಡಿಕೆಗಳು ಕೆಲವು ರೀತಿ ನ್ಯಾಯಸಮ್ಮತವಾಗಿರಬಹುದು, ನಾನು ಇಲ್ಲವೆಂದು ಹೇಳುತ್ತಿಲ್ಲ. ಯಾರು ಶೋಷಣೆಗೆ ಒಳಗಾಗಿದ್ದಾರೆ, ತೊಂದರೆಗೆ ಒಳಗಾಗಿದ್ದಾರೆ, ಅವರಿಗೆ ನ್ಯಾಯ ಸಿಗಬೇಕು ಎನ್ನುವ ನೆಪದಲ್ಲಿ ಈ ಚಳುವಳಿ ಪ್ರಾರಂಭವಾಗಿದೆ. ಈ ರೀತಿಯ ಸಮಸ್ಯೆಗಳ ಈಡೇರಿಕೆಗಾಗಿ ಅವರು ತಾಳಿರುವಂತಹ ಹಿಂಸಾ

ಮಾರ್ಗಕ್ಕೆ ಯಾರೂ ಸಹ ನಾಗರೀಕ ಸಮಾಜ ಅದಕ್ಕೆ ಸಹಕಾರ, ಬೆಂಬಲ ಕೊಡಲಿಕ್ಕೆ ಸಾಧ್ಯವಿಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಎಲ್ಲರಿಗೂ ಗೊತ್ತಿರುವಂತಹ ಅಂಕಿಅಂಶ, ಕಳೆದ 10 ವರ್ಷಗಳಲ್ಲಿ ಈ ನಕ್ಸಲೀಯರು ನಡೆಸಿದಂತಹ ಹಿಂಸಾಚಾರದಲ್ಲಿ ಭಾರತದ ವಿವಿಧ ಭಾಗಗಳಲ್ಲಿ ಸುಮಾರು ಆರು ಸಾವಿರಕ್ಕೂ ಹೆಚ್ಚು ಜನ ಪ್ರಾಣವನ್ನು ಕಳೆದುಕೊಂಡಿದ್ದಾರೆ.

ಶ್ರೀ ಬಸವರಾಜ ರಾಯರೆಡ್ಡಿ : ಮಾನ್ಯ ಅಧ್ಯಕ್ಷರೆ, ನಾನು ಕ್ರಿಯಾಲೋಪ ಎತ್ತುತ್ತೇನೆ.

ಅಧ್ಯಕ್ಷರು : ಮಾನ್ಯ ಯಡಿಯೂರಪ್ಪನವರೆ, ಮಾನ್ಯ ಬಸವರಾಜ ರಾಯರೆಡ್ಡಿ ಅವರದ್ದು ಪಾಯಿಂಟ್ ಆಫ್ ಆರ್ಡರ್ ಅಂತ ಹೇಳುತ್ತಿದ್ದಾರೆ.

ಶ್ರೀ ಬಸವರಾಜ ರಾಯರೆಡ್ಡಿ : ಮಾನ್ಯ ಅಧ್ಯಕ್ಷರೆ, ಈಗ ಬಜೆಟ್‌ನ ಮಂಡನೆಯಾಗಿದೆ. ಇದರ ಬಗ್ಗೆ ಸುದೀರ್ಘವಾದ ಚರ್ಚೆ ಪ್ರಾರಂಭವಾಗಬೇಕು. ಅದಕ್ಕೆ ನಾವು ಪ್ರಾಮುಖ್ಯತೆಯನ್ನು ಕೊಡಬೇಕು. ಮಾನ್ಯ ವಿರೋಧಪಕ್ಷದ ನಾಯಕರು ಈಗ ಲಾ ಅಂಡ್ ಆರ್ಡರ್ ಬಗ್ಗೆ ಮಾತನಾಡುತ್ತಿರುವುದನ್ನು ಪ್ರಾಮುಖ್ಯ ಅಲ್ಲವೆಂದು ನಾನು ಹೇಳುವುದಿಲ್ಲ. ತಾವು ಈಗ ನಿಲುವಳಿ ಸೂಚನೆ ತಂದಿದ್ದೀರಿ. ಆ ನಿಲುವಳಿ ಸೂಚನೆಗೆ ಪ್ರಿಲಿಮನರಿಯಾಗಿ ತಾವು ದಯವಿಟ್ಟು ಸಂಕ್ಷಿಪ್ತವಾಗಿ ಹೇಳಿ. ಅದನ್ನು ಅಧ್ಯಕ್ಷರ ತೀರ್ಮಾನಕ್ಕೆ ಬಿಟ್ಟರೆ ಅವರು ಆ ಬಗ್ಗೆ ತೀರ್ಮಾನ ಮಾಡುತ್ತಾರೆ. ಈಗಾಗಲೇ ತಾವು ಇಪ್ಪತ್ತು ನಿಮಿಷ ಮಾತನಾಡಿದ್ದೀರಿ. ಈಗ ಇಲ್ಲಿಗೆ ಇದನ್ನು ಮುಗಿಸಿ ದಯಮಾಡಿ ವಿತ್ತೀಯ ಕಾರ್ಯಕಲಾಪಗಳು ನಡೆಯಲಿಕ್ಕೆ ಅವಕಾಶ ಮಾಡಿಕೊಡಬೇಕಾಗಿ ವಿನಂತಿಸುತ್ತೇನೆ.

ಶ್ರೀ ಅರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೆ, ಇದು ಪಾಯಿಂಟ್ ಆಫ್ ಆರ್ಡರ್‌ಗೆ ಬರುವುದಿಲ್ಲ.

ಶ್ರೀ ಬಸವರಾಜ ರಾಯರೆಡ್ಡಿ : ಮಾನ್ಯ ಅಧ್ಯಕ್ಷರೆ, ಸುದೀರ್ಘವಾದ ಚರ್ಚೆ ಮಾಡಲಿಕ್ಕೆ ಬೇರೆ ಅವಕಾಶವಿದೆ, ಇದು ತಪ್ಪು.

ಅಧ್ಯಕ್ಷರು : ಆಯಿತು, ಬೇಗ ಮುಗಿಸಿ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಬಸವರಾಜ್ ರಾಯರೆಡ್ಡಿಯವರೆ, ಇದರಲ್ಲಿ ಪಾಯಿಂಟ್ ಇಲ್ಲ, ಆರ್ಡರ್ ಇಲ್ಲ, ಯಾಕೆ ಸುಮ್ಮನೆ? ಮಾನ್ಯ ಯಡಿಯೂರಪ್ಪನವರು ಸುದೀರ್ಘವಾಗಿ ಮಾತನಾಡುತ್ತಿದ್ದಾರೆ.

ಅಧ್ಯಕ್ಷರು : ಮಾನ್ಯ ವಿರೋಧ ಪಕ್ಷದ ನಾಯಕರೆ, ವಿಷಯಕ್ಕೆ ಸಂಬಂಧಪಟ್ಟ ಹಾಗೆ ಮಾತನಾಡಿ ಬೇಗ ಮುಗಿಸಿ.

ಶ್ರೀ ಬಸವರಾಜ ರಾಯರೆಡ್ಡಿ : ಮಾನ್ಯ ಅಧ್ಯಕ್ಷರೇ, ವಿಷಯಕ್ಕೆ ಸಂಬಂಧಪಟ್ಟ ಹಾಗೆ ಮಾತನಾಡಬೇಕೇವಿನಹ ಬೇರೆ ವಿಚಾರ ಮಾತನಾಡುವುದಲ್ಲ. ಸದನದ ನಿಯಮಾವಳಿಯ ವಿರುದ್ಧವಾಗಿ ಮಾತನಾಡುತ್ತಿದ್ದೀರಿ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ವಿರೋಧ ಪಕ್ಷದ ನಾಯಕರು ಸದನದ ನಿಯಮಾವಳಿಯನುಸಾರವೇ ಮಾತನಾಡುತ್ತಿದ್ದಾರೆ. ಅದರ ಬಗ್ಗೆ ನೀವು ಏನು ತಲೆಯನ್ನು ಕೆಡಿಸಿಕೊಳ್ಳಬೇಡಿ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಮಾನ್ಯ ಅಧ್ಯಕ್ಷರೆ, ಸರ್ಕಾರ ಒಪ್ಪಿದರೆ, ಸ್ಟೇಟ್‌ವೈಸ್ ಚರ್ಚೆಯನ್ನು ಪ್ರಾರಂಭ ಮಾಡಬಹುದು ಎಂದು ಕಾಣುತ್ತದೆ. ಪ್ರಿಲಿಮನರಿ ಸಬ್‌ಮಿಷನ್ ಅಗತ್ಯ ಇಲ್ಲದಿದ್ದರೆ ಸೀದಾ ಚರ್ಚೆಯನ್ನು ಪ್ರಾರಂಭ ಮಾಡಬಹುದು.

ಅಧ್ಯಕ್ಷರು : ದಯಮಾಡಿ ಕುಳಿತುಕೊಳ್ಳಿ.

ಶ್ರೀ ಬಸವರಾಜ ರಾಯರೆಡ್ಡಿ : ಮಾನ್ಯ ಅಧ್ಯಕ್ಷರೆ, ಪ್ರಿಲಿಮನರಿ ಸಬ್‌ಮಿಷನ್‌ಗೆ ಅರ್ಧ ಗಂಟೆ ತೆಗೆದುಕೊಂಡರೆ ಹೇಗೆ? ಸಂದರ್ಭ ಬಂದಾಗ ಮಾತನಾಡಿ, ಪ್ರಿಲಿಮನರಿ ಸಬ್‌ಮಿಷನ್ ಸಾಕು ಅಂತ ನಾನು ಹೇಳಿದ್ದಷ್ಟೆ, That is my request to you.

ಶ್ರೀ ಬಿ.ಎಸ್.ಯಡಿಯೂರಪ್ಪ : ಮಾನ್ಯ ರಾಯರೆಡ್ಡಿಯವರೆ, ಸನ್ಮಾನ್ಯ ಮುಖ್ಯಮಂತ್ರಿಗಳು ಹಾಗೂ ಉಪ ಮುಖ್ಯಮಂತ್ರಿಗಳಿಗೆ ಗೊತ್ತಿದೆ. ನಾನು ಪ್ರಾರಂಭದಲ್ಲಿ ಒಂದು ಮಾತು ಹೇಳಿದೆ, ಬೇರೆ ಯಾವುದೇ ಒಂದು ನಿಲುವಳಿ ಸೂಚನೆಯನ್ನು ತಂದು ಪ್ರಿಲಿಮನರಿ ಸಬ್‌ಮಿಷನ್ ಮಾಡಿ ಅಧ್ಯಕ್ಷರ ಅನುಮತಿಯನ್ನು ಪಡೆಯುವುದು ಒಂದು ವಾಡಿಕೆ. ಸನ್ಮಾನ್ಯ ಮುಖ್ಯಮಂತ್ರಿಗಳು, ಉಪ ಮುಖ್ಯಮಂತ್ರಿಗಳು ನಾವುಗಳು ವಿಧಾನಸೌಧದೊಳಗೆ ಬರಲಿಕ್ಕೆ ಯೋಚನೆ ಮಾಡಿ ಬರುವಂತಹ ಪರಿಸ್ಥಿತಿ ಬಂದಿದೆ. ನಾಗರಿಕರು ಓಡಾಡಲಿಕ್ಕೆ ಆಗದಂತಹ ಪರಿಸ್ಥಿತಿ ಬಂದಿದೆ, ಪೊಲೀಸರು ಕೈಚೆಲ್ಲಿ ಕುಳಿತಿರುವಂತಹ ಈ ಸಂದರ್ಭದಲ್ಲಿ, ನಾನು ಮಾನ್ಯ ರಾಯರೆಡ್ಡಿ ಅಂತಹವರಿಗೆ, ಈ ಒಂದು ರಾಜ್ಯ ಸರ್ಕಾರದ ಚುನಾಯಿತ 224 ಸದಸ್ಯರ ಮೊದಲನೇ ಕರ್ತವ್ಯ ಅಂದರೆ, ಈ ನಾಡಿನ ಜನತೆಯ ರಕ್ಷಣೆ ಮಾಡುವಂತಹ ಹಾಗೂ ಕಾನೂನು ಸುವ್ಯವಸ್ಥೆ ಹದಗೆಡದಿರುವಂತೆ ನೋಡಿಕೊಳ್ಳುವುದು ನಮ್ಮ ನಿಮ್ಮೆಲ್ಲರ ಜವಾಬ್ದಾರಿಯಾಗಿದೆ. ಎಲ್ಲೋ ಒಂದು ಕಡೆ ಸಡಿಲವಾಗಿ, ಆ ಬಿಗಿ ತಪ್ಪಿ ಹೋಗಿ, ಎಲ್ಲವೂ ಕೈಮೀರಿ ಹೋಗುವಂತಹ ಪ್ರಸಂಗ ಬಂದಿರುವುದರಿಂದ ನೇರವಾಗಿ ಒಂದು ರೀತಿ ಚರ್ಚೆಗೆ ಅವಕಾಶ ಮಾಡಿಕೊಟ್ಟಿದ್ದಾರೆಂದು ಅರ್ಥ.

ಶ್ರೀ ಬಸವರಾಜ ರಾಯರೆಡ್ಡಿ : ನಿಮ್ಮ ಮಾತಿಗೆ ನಾನು ಆಕ್ಷೇಪಣೆ ಮಾಡುತ್ತಿಲ್ಲ, ನಾನು ಹೇಳಿದ್ದು ಪ್ರಿಲಿಮನರಿ ಚರ್ಚೆ ಸಾಕು, ವಿತ್ತೀಯ ಕಾರ್ಯಕಲಾಪಕ್ಕೆ ಅವಕಾಶ ಮಾಡಿಕೊಡಿ ಎಂದು ನಾನು ಹೇಳಿದ್ದಷ್ಟೆ.

ಶ್ರೀ ಬಿ. ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ನಾನು ಕೊಡುವಂತಹ ಮಾಹಿತಿಯಿಂದ ಸರ್ಕಾರಕ್ಕೆ, ಗೃಹ ಇಲಾಖೆಗೆ ಕೆಲವು ದಾಖಲೆಗಳು, ಮಾಹಿತಿಗಳು ಸಿಕ್ಕಿ, ಅದನ್ನು ಕಂಟ್ರೋಲ್, ಮಾಡಿ ರಾಜ್ಯದ ಜನತೆ ನೆಮ್ಮದಿಯಿಂದ ಬದುಕುವುದನ್ನು ನೋಡುವಂತಹ ಜವಾಬ್ದಾರಿ ಆ ಕಡೆ, ಈ ಕಡೆ ಇರುವಂತಹ ಸದಸ್ಯರುಗಳಿಗೆ ತೋರಿಸುವಂತಹ ದೃಷ್ಟಿಯಿಂದ ಕೆಲವು ಮಾಹಿತಿಗಳನ್ನು ಕೊಡಲಿಕ್ಕೆ ಇಚ್ಛೆಪಡುತ್ತೇನೆ. ಈಗಾಗಲೇ ಆಂಧ್ರ ಹತ್ತಿಕೊಂಡು ಉರಿಯುತ್ತಿದೆ. ಬೇರೆ ಬೇರೆ ದೇಶಗಳಲ್ಲಿ ಈ ಉಗ್ರಗಾಮಿಗಳ, ನಕ್ಸಲೀಯರ ಹಾವಳಿಯಿಂದ ಆ ಭಾಗದ ಜನ ತತ್ತರಿಸಿ ಹೋಗಿದ್ದಾರೆ. ಆ ವಿವರಗಳು ನಿಮ್ಮಲ್ಲೂ ಇವೆ, ದಾಖಲೆಗಳಲ್ಲಿ ಹೋಗಬೇಕಾಗಿದೆ. ನಾನು ಆಗಲೇ ಹೇಳಿದ್ದೇನೆ, ಕಳೆದ ಹತ್ತು ವರ್ಷಗಳಲ್ಲಿ ನಕ್ಸಲೀಯರು ನಡೆಸಿದಂತಹ ಹಿಂಸಾಚಾರದಿಂದ ಭಾರತದ ವಿವಿಧ ಭಾಗಗಳಲ್ಲಿ ಆರು ಸಾವಿರಕ್ಕೂ ಹೆಚ್ಚು ಜನರು ಪ್ರಾಣವನ್ನು ಕಳೆದುಕೊಂಡಿದ್ದಾರೆ. ನೂರಾರು ಜನ ಪೊಲೀಸರು ಅವರಿಂದ ಹತ್ಯೆಗೆ ಒಳಗಾಗಿದ್ದಾರೆ, ಹತ್ತಾರು ಜನ ರಾಜಕೀಯ ಮುಖಂಡರು ಇಲ್ಲಿ ಸಿಕ್ಕಿ ಪ್ರಾಣವನ್ನು ಕಳೆದುಕೊಂಡಿದ್ದಾರೆ. . . People's War Group, ಈ ಮಾವೋವಾದಿ ಸಂಘಟನೆ, ನಕ್ಸಲೀಯರು ಹೀಗೆ ಬೇರೆ ಬೇರೆ ಹೆಸರುಗಳಲ್ಲಿ ಕಾರ್ಯಾಚರಣೆ ನಡೆಯುತ್ತಿದೆ. ಇವರಿಗೆ ಭಾರತದ ಸಂವಿಧಾನದ ಮೇಲೆ ಗೌರವವಿಲ್ಲ, ರಾಜ್ಯಾಂಗದ ಬಗ್ಗೆ ನಂಬಿಕೆ ಇಲ್ಲ, ಪ್ರಜಾಪ್ರಭುತ್ವದ ವ್ಯವಸ್ಥೆಯನ್ನು ಇವರು ಒಪ್ಪುವುದಿಲ್ಲ. ದೇಶದ ಎಲ್ಲೆಡೆ ಹಿಂಸೆಯ ಒಂದು ವಾತಾವರಣ ತಂದಿದ್ದಾರೆ.

ಅಧ್ಯಕ್ಷರು : ಈಗ ತಾವು ಲಾ ಅಂಡ್ ಆರ್ಡರ್ ಬಗ್ಗೆ ಮಾತನಾಡಿದ್ದೀರಿ, ಲಾ ಅಂಡ್ ಆರ್ಡರ್ ಬಗ್ಗೆ ಏನು ಅಡ್ಜರ್ನ್‌ಮೆಂಟ್ ಮೋಷನ್ ಇದೆ, ಅದನ್ನು ತೆಗೆದುಕೊಳ್ಳಲಿಕ್ಕೆ ಆಗುವುದಿಲ್ಲವೆಂಬ ಬಗ್ಗೆ ಬೇಕಾದಷ್ಟು ರೂಲಿಂಗ್ಸ್ ಇವೆ. ಅದನ್ನು ನಾನು 69 ರಡಿಯಲ್ಲಿ ಕನ್‌ವರ್ಟ್ ಮಾಡಿ ಅದಕ್ಕೆ ನಾನು ಟೈಮ್‌ಫಿಕ್ಸ್ ಮಾಡುತ್ತೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ : ಆಗಬಹುದು ಅಧ್ಯಕ್ಷರೆ, ಯಾವುದೇ ನಿಯಮಾವಳಿಯಡಿ ತಾವು ಟೈಮ್‌ಫಿಕ್ಸ್ ಮಾಡಿ.

ಅಧ್ಯಕ್ಷರು : ನಾನು ನಿಮಗೆ ಮಾತನಾಡಲಿಕ್ಕೆ ಟೈಮ್ ಕೊಡುತ್ತೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ : ನೋ, ನೋ, ಹಾಗಾಗುವುದಿಲ್ಲ. ಚರ್ಚೆಯಾಗಬೇಕು.

ಶ್ರೀ ವಾಟಾಳ್ ನಾಗರಾಜ್ : ಚರ್ಚೆ ಈಗಲೇ ಆಗಬೇಕು.

ಅಧ್ಯಕ್ಷರು : ಆಯಿತು, ನಿಯಮ 69 ರಡಿ ಚರ್ಚೆಗೆ ಅವಕಾಶ ಮಾಡಿ ಕೊಟ್ಟಿದ್ದೇನೆ. ಸರ್ಕಾರದವರು ಇದಕ್ಕೆ ಒಪ್ಪಿದ್ದಾರೆ, ಸಂಕ್ಷಿಪ್ತವಾಗಿ ಮಾತನಾಡಬೇಕು.

ಶ್ರೀ ವಾಟಾಳ್ ನಾಗರಾಜ್ : ನಿಯಮ 69 ರಡಿ ಚರ್ಚೆ ಈಗಲೇ ಆಗಬೇಕು.

ಅಧ್ಯಕ್ಷರು : ಆಯಿತು, ಆದರೆ ಒಂದು ಗಂಟೆಯೊಳಗಾಗಿ ಮಾತನಾಡಬೇಕು.

ಶ್ರೀ ಅರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೆ, ಸಿಗ್ನಟರೀಸ್‌ಗಳೆಲ್ಲಾ ಇದ್ದೇವೆ. ಅನೇಕ ವಿಚಾರಗಳು ಇವೆ, ಯಾರ್‍ಯಾರೂ ಸಿಗ್ನಟರೀಸ್ ಇದ್ದಾರೆ ಅವರಿಗೆಲ್ಲಾ ಮಾತನಾಡಲಿಕ್ಕೆ ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು : ಈಗ ನಿಯಮ 69 ರ ಅಡಿ ಅವಕಾಶ ಮಾಡಿಕೊಡಲಾಗಿದೆ. ಬೇರೆಯವರಿಗೂ ಅದರಲ್ಲಿ ಅವಕಾಶವಿದೆ, ಆದ್ದರಿಂದ ಆದಷ್ಟು ಬೇಗ ಚರ್ಚೆ ಮಾಡಿ ಮುಗಿಸಬೇಕು.

ಶ್ರೀ ಅರಗ ಜ್ಞಾನೇಂದ್ರ : ಒಂದು ಗಂಟೆ ಸಮಯ ನಿಗದಿ ಮಾಡಿದರೆ ಆಗುವುದಿಲ್ಲ.

ಶ್ರೀ ಬಿ.ಎಸ್.ಯಡಿಯೂರಪ್ಪ : ಮಾನ್ಯ ಜ್ಞಾನೇಂದ್ರ ಅವರೆ ಒಂದು ನಿಮಿಷ. ಇವತ್ತು ಮುಖ್ಯಮಂತ್ರಿಗಳು ಇರುವ ಸಂದರ್ಭದಲ್ಲಿ ತಮಗೆ ಒಂದು ಮಾತನ್ನು ಹೇಳಲಿಕ್ಕೆ ಇಚ್ಛೆಪಡುತ್ತೇನೆ. ನಾವು ವಿರೋಧಪಕ್ಷದವರೆಲ್ಲಾ ಕುಳಿತು ಮಾತನಾಡಿದ್ದೇವೆ, ಏನೆಂದರೆ ಈ ಬಾರಿ ಯಾವುದಕ್ಕೂ ಸಮಯವನ್ನು ನಿಗದಿ ಮಾಡಬೇಡಿ. ಏಕೆಂದರೆ, ನಾವು ಏಪ್ರಿಲ್ 15 ರಿಂದ 20ನೇ ತಾರೀಖಿನವರೆಗೂ ಸಹ ಇವತ್ತು ರಾಜ್ಯದ ಆಗುಹೋಗುಗಳ ಬಗ್ಗೆ, ರಾಜ್ಯದ ಅಭಿವೃದ್ಧಿ ಕಾರ್ಯಗಳು ನೆನೆಗುದಿಗೆ ಬಿದ್ದಿರುವ ಬಗ್ಗೆ, ಅನೇಕ ಜ್ವಲಂತ ಸಮಸ್ಯೆಗಳ ಬಗ್ಗೆ ಸಮಯ ಕೊಟ್ಟು ಶಾಂತವಾಗಿ ಕುಳಿತು ಚರ್ಚೆ ಮಾಡಬೇಕೆಂದು ನಮ್ಮ ಅಪೇಕ್ಷೆಯಾಗಿದೆ. ನಿನ್ನೆ ಬಜೆಟ್ ಭಾಷಣದ ಸಂದರ್ಭದಲ್ಲಿ ಹಿರಿಯ ಸದಸ್ಯರಾದ ಮಾನ್ಯ ವಾಟಾಳ್ ನಾಗರಾಜ್ ಅವರು ಈ ಸದನ ಎಷ್ಟು ದಿವಸ ನಡೆಯಬೇಕೋ ಅಷ್ಟು ದಿವಸ ನಡೆಯದೆ ಚರ್ಚೆಗೆ ಅವಕಾಶವಾಗುತ್ತಿಲ್ಲ ಎಂದು ಹೇಳಿ ಬಜೆಟ್ ಮಂಡನೆ ಸಂದರ್ಭದಲ್ಲಿ ಪ್ರತಿಭಟನೆ ಮಾಡಿ ಅವರು ವಾಕ್‌ಔಟ್ ಮಾಡಿದರು. ಅದರ ಹಿನ್ನೆಲೆ, ಉದ್ದೇಶ ಏನೆಂದರೆ, ಈ ಮನೆಯಲ್ಲಿ, ಈ ನಾಡಿನ ಜನತೆಯ ಬಗ್ಗೆ ವ್ಯಾಪಕವಾದ ಚರ್ಚೆ ಆಗಲಿಕ್ಕೆ ಅವಕಾಶ ಸಿಗುತ್ತಿಲ್ಲ, ಅವಕಾಶ ಸಿಗಬೇಕು ಎನ್ನುವುದೇ ಹಿರಿಯ ಸದಸ್ಯರ ಅಪೇಕ್ಷೆಯಾಗಿದೆ. ಹಾಗಾಗಿ ಕಾನೂನು ಸುವ್ಯವಸ್ಥೆ ಹದಗೆಟ್ಟಿರುವ ಬಗ್ಗೆ ಈ ಬಗ್ಗೆ ನಮ್ಮ ಈ ಭಾಗದ ಎಲ್ಲಾ ಸದಸ್ಯರು ಮಾಹಿತಿ ಕೊಟ್ಟ ಮೇಲೆ, ಆ ಭಾಗದ ಆಡಳಿತ ಪಕ್ಷದ ಸದಸ್ಯರು ಮಾಹಿತಿಯನ್ನು ಕೊಡುವುದರ ಮೂಲಕ ಸರ್ಕಾರವನ್ನು

ಸರಿದಾರಿಯಲ್ಲಿ ತಂದು ಈ ಜನತೆಗೆ ರಕ್ಷಣೆ ಕೊಡಬೇಕು ಎನ್ನುವ ದೃಷ್ಟಿಯಿಂದ ಇವತ್ತು ಇದಕ್ಕೆ ಸಮಯವನ್ನು ನಿಗದಿ ಮಾಡದೆ, ಇವತ್ತು ನಿಯಮ 69 ರಡಿ ಕನ್‌ವರ್ಟ್ ಮಾಡಿದ್ದೀರಿ. ಹಾಗಾಗಿ ನಮ್ಮ ಚಿಕ್ಕಮಗಳೂರು, ಶಿವಮೊಗ್ಗ ಜಿಲ್ಲೆ ಬೇರೆ ಬೇರೆ ಜಿಲ್ಲೆಯ ಅನೇಕ ಶಾಸಕರು ಸಹ ಅವರಲ್ಲಿರುವ ಮಾಹಿತಿಯನ್ನು ಸರ್ಕಾರಕ್ಕೆ ಕೊಡಬೇಕೆಂದು ಅಪೇಕ್ಷಿಸಿರುವುದರಿಂದ ತಾವು ಎಲ್ಲರಿಗೂ ಸಹ ಮಾತನಾಡಲಿಕ್ಕೆ ಅವಕಾಶವನ್ನು ಕೊಡಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತಾ, ಇವತ್ತು ಈ ರಾಜ್ಯದಲ್ಲಿ ಅರಾಜಕತೆ, ಆಂತರಿಕ ಕಲಹ ಉಂಟು ಮಾಡುವುದು ಈ ನಕ್ಸಲೀಯರ ಮೂಲ ಉದ್ದೇಶ. ಇದು ಒಂದು ರೀತಿಯ ಭಯೋತ್ಪಾದಕತೆ ಪ್ರಾರಂಭವಾಗಿದೆ. ಫೆಬ್ರವರಿ 8 ರಂದು ಬೆಂಗಳೂರಿಗೆ ಬಂದಂತಹ ಕೇಂದ್ರ ಸರ್ಕಾರದ ರಕ್ಷಣಾ ಸಚಿವರಾದ ಮಾನ್ಯ ಪ್ರಣಬ್ ಮುಖರ್ಜಿಯವರು ನೇಪಾಳದಲ್ಲಿ ಈ ಮಾವೋವಾದಿಗಳಿಂದ ಆಂತರಿಕ ಭದ್ರತೆಗೆ ಯಾವ ರೀತಿ ಧಕ್ಕೆ ಆಗುತ್ತಿದೆ, ಮಾವೋವಾದಿಗಳ ಪ್ರಭಾವ ಹೇಗೆ ಹೆಚ್ಚಾಗುತ್ತಿದೆ ನೇಪಾಳದಲ್ಲಿ ಈ ಮಾವೋವಾದಿಗಳ ಪ್ರಭಾವ ಹೆಚ್ಚಾಗಿ ರಕ್ಷಣಾ ವ್ಯವಸ್ಥೆಗೆ ಧಕ್ಕೆಯುಂಟಾಗಿ ಕುಸಿದು ಹೋಗುತ್ತಿದೆ. ಇದು ಭಾರತದ ಆಂತರಿಕ ಭದ್ರತೆಯ ಮೇಲೆ ನೇರವಾಗಿ ಯಾವ ರೀತಿ ಪರಿಣಾಮ ಬೀರುತ್ತಿದೆ ಎನ್ನುವಂತಹ ಅನೇಕ ವಿಷಯಗಳನ್ನು ಅವರು ಇಲ್ಲಿ ಬಂದಾಗ ಹೇಳಿದ್ದಾರೆ. ನೇಪಾಳ ಮತ್ತು ಭಾರತದ ಮಾವೋವಾದಿಗಳು ನಕ್ಸಲೀಯರ ಜೊತೆ ನೇರವಾದ ಸಂಪರ್ಕವನ್ನು ಅವರು ಇಟ್ಟುಕೊಂಡಿದ್ದಾರೆ ಇದರ ಬಗ್ಗೆ ರಾಜ್ಯಗಳು ಕಟ್ಟೆಚ್ಚರ ವಹಿಸಬೇಕೆಂದು ಅವರು ಹೇಳಿದ ಮಾತು ನಮಗೆ ಒಂದು ಎಚ್ಚರಿಕೆಯ ಗಂಟೆಯೆಂದು ನಾನು ತಿಳಿದುಕೊಂಡಿದ್ದೇನೆ. ಅಂದರೆ ನೇಪಾಳದ ನಕ್ಸಲೀಯರು ನೇಪಾಳದಲ್ಲಿ ಈ ಆಂತರಿಕ ಕ್ಷೋಭೆ ನಿರ್ಮಾಣ ಮಾಡುವುದರಲ್ಲಿ ಯಶಸ್ವಿಯಾಗಿದ್ದಾರೆ. ಭಾರತದಲ್ಲಿರುವಂಥ ಶಾಂತಿಯನ್ನು ಕದಡುವಂಥ ಕೆಲಸ, ನಮ್ಮ ರಕ್ಷಣಾ ವ್ಯವಸ್ಥೆಯ ಮಾನಸಿಕ ಸ್ಥೈರ್ಯವನ್ನು ಕುಗ್ಗಿಸುವಂಥ ಕೆಲಸ, ಈ ನಕ್ಸಲೀಯರ ಉದ್ದಶ್ಯ ಆಗಿರುವಂಥಾದ್ದು. ನಮ್ಮ ರಾಜ್ಯದ ಈ ಪಶ್ಚಿಮ ಘಟ್ಟಗಳಲ್ಲಿ ಶಾಶ್ವತವಾಗಿ ನೆಲೆ ಊರಿರುವಂಥ ನಕ್ಸಲೀಯರು ಏನು ಸಿದ್ಧತೆ ನಡೆಸಿದ್ದಾರೆ. ಶ್ರೀಮಂತ ರೈತರನ್ನು ಬೆದರಿಸಿ ದೇಣಿಗೆ ಪಡೆಯುವಂಥಾದ್ದು, ಕೃಷಿಕರ ವಿರುದ್ಧ ಕೃಷಿ ಕಾರ್ಮಿಕರನ್ನು ಎತ್ತಿಕಟ್ಟುವಂಥಾದ್ದು, ಈ ಎಲ್ಲಾ ವಿಚಾರಗಳನ್ನು ಗುಪ್ತಚರ ಇಲಾಖೆಯವರು ಈಗಾಗಲೇ ವರದಿ ಮಾಡಿದ್ದಾರೆ. ಆಧುನಿಕ ಶಸ್ತ್ರಾಸ್ತ್ರಗಳು ಅವರಲ್ಲಿದೆ ಎನ್ನುವಂಥಾದ್ದು ಮಾಹಿತಿಗಳು ನಮಗೆ ಸಿಕ್ಕಿವೆ. ಎ.ಕೆ.47 ಆರ್.ಡಿ.ಎಕ್ಸ್. ಅವರು ಹೊಂದಿರಬೇಕಾದರೆ ನಮ್ಮ ಪೊಲೀಸ್ ಅಧಿಕಾರಿಗಳ ಕೈಗೆ ನೀವು ಏನು ಕೊಟ್ಟಿದ್ದೀರಿ? ಅವರು ಹೇಗೆ ಈ ವಾತಾವರಣವನ್ನು ಎದುರಿಸಬೇಕು? ಇವತ್ತು ಪತ್ರಿಕೆಯಲ್ಲೂ ಸಹ ಬಂದಿದೆ. ಯಾವ ರೀತಿ ನಕ್ಸಲೀಯರು, ಎಲ್.ಟಿ.ಟಿ.ಇ. ಜೊತೆಗೆ, ಐ.ಎಸ್.ಐ. ಜೊತೆಗೆ ಲಷ್ಕರ್ ತೋಯಿಬಾರಂಥ ಭಯೋತ್ಪಾದಕ ಸಂಘಟನೆಗಳ ಜೊತೆ ಇವರ ಸಂಪರ್ಕ ಇದೆಯೆನ್ನುವಂಥಾದ್ದು ಪ್ರತಿನಿತ್ಯ ಪತ್ರಿಕೆಗಳಲ್ಲಿ ಬರುತ್ತಾ ಇದೆ. ರಾಯಚೂರು, ಬಳ್ಳಾರಿ, ತುಮಕೂರು ಈ ಜಿಲ್ಲೆಗಳಲ್ಲಿ ಕಳೆದ 6–7 ವರ್ಷಗಳಿಂದ ನಕ್ಸಲೀಯ ಚಟುವಟಿಕೆ ನಡೆಯುತ್ತಾ ಇದೆಯೆನ್ನುವ ವರದಿ ಇದ್ದರೂ ಸಹ, ಅದನ್ನು ಹದ್ದುಬಸ್ತಿನಲ್ಲಿ ತರುವಂಥ, ಅದನ್ನು ಮೊಟಕು ಮಾಡುವಂಥ, ಅವರ ಮೇಲೆ ಕ್ರಮ ತೆಗೆದುಕೊಳ್ಳುವಂಥ ಯಾವುದೇ ಪ್ರಾಮಾಣಿಕ ಪ್ರಯತ್ನ ಈ ಸರ್ಕಾರ ಮಾಡಲಿಲ್ಲ. ಕರ್ನಾಟಕದಲ್ಲಿ ಮೊದಲ ಈ ಎನ್ ಕೌಂಟರ್ 1998ರಲ್ಲಿ ರಾಯಚೂರು ಜಿಲ್ಲೆ ಇಬ್ರಾಹಿಂ ದೊಡ್ಡಿಯಲ್ಲಿ ನಡೆಯಿತು. ಆ ಕಾರ್ಯಾಚರಣೆಯಲ್ಲಿ ಪೊಲೀಸರು ನಕ್ಸಲ್‌ವಾದಿ ಭಾಸ್ಕರನನ್ನು ಕೊಂದರು.

ಅವತ್ತಿನಿಂದ ಇವತ್ತಿನವರೆಗೆ ಸರ್ಕಾರ ಜಾಗೃತವಾಗಬೇಕಾಗಿತ್ತು. ಪಕ್ಕದ ರಾಜ್ಯವಾದ ಆಂಧ್ರದಲ್ಲಿ ನಡೆಯುತ್ತಾ ಇದ್ದಂಥ ನಕ್ಸಲೀಯ ಚಟುವಟಿಕೆ, ಅದರ ದುಷ್ಪರಿಣಾಮ ಏನಾಯಿತು? ಇದರ ಬಗ್ಗೆ ನಾವು ಎಚ್ಚರ ವಹಿಸುವಂಥ ಕೆಲಸ ಮಾಡಬೇಕಾಗಿತ್ತು. ಬಹುಶಃ ಸರ್ಕಾರದ ನಿರ್ಲಕ್ಷ್ಯ, ನಾನು ನೇರವಾಗಿ ಆರೋಪ ಮಾಡುವುದಕ್ಕೆ ಇಚ್ಛೆಪಡುತ್ತೇನೆ, ಸರ್ಕಾರದ ನಿರ್ಲಕ್ಷ್ಯದಿಂದ ಈ ನಕ್ಸಲೀಯ ಚಟುವಟಿಕೆ ಕರ್ನಾಟಕದಲ್ಲಿ ಉಲ್ಬಣಗೊಂಡಿದೆ. ಅದಕ್ಕೆ ಸರ್ಕಾರವೇ ಜವಾಬ್ದಾರಿ ಹೊರಬೇಕಾಗುತ್ತದೆ. ಆಗಸ್ಟ್ 6, 2003ರಲ್ಲಿ ಕುದುರೆಮುಖ ಬಳಿ ಶಿಂಸಾಗರದಲ್ಲಿ ಅರಣ್ಯ ಇಲಾಖೆ ಮತ್ತು ನಕ್ಸಲೀಯರ ನಡುವೆ ಗುಂಡಿನ ಚಕಮಕಿ ನಡೆಯಿತು. ಆಗಲಾದರೂ ಸಹ ಸರ್ಕಾರ ಎಚ್ಚರ ವಹಿಸಬೇಕಾಗಿತ್ತು. ಆದರೆ, ಆ ರೀತಿಯ ಎಚ್ಚರ ವಹಿಸಲಿಲ್ಲ. 2003ರ ನವೆಂಬರ್‌ನಲ್ಲಿ ಕಾರ್ಕಳ ತಾಲ್ಲೂಕಿನ ಈದು ಗ್ರಾಮದಲ್ಲಿ ಪಾರ್ವತಿ ಮತ್ತು ಹಾಜಿಗಳ ಹತ್ಯೆ ಈ ನಕ್ಸಲೀಯ ಚಟುವಟಿಕೆಯ ತೀವ್ರತೆಯನ್ನು ಬಯಲು ಮಾಡಿತ್ತು. ಆಗಲೂ ಸಹ ತಾವು ಏನೂ ಕ್ರಮ ತೆಗೆದುಕೊಳ್ಳಲಿಲ್ಲ. ಮೆಣಸಿನ ಹಾಡ್ಯದಲ್ಲಿ ನಡೆದ ಎನ್ ಕೌಂಟರ್‌ನಲ್ಲಿ ಪ್ರೇಮ್ ಮತ್ತು ಶಿವಲಿಂಗು ಹತ್ಯೆಯಾದ ನಂತರ ಬಂದ ಗದ್ದರ್ ಮತ್ತು ವರವರರಾವ್ ಮುಖ್ಯಮಂತ್ರಿ ಮನೆ ಮುಂದೆಯೇ ಬಂದೂಕಿಗೆ ಬಂದೂಕಿನಿಂದಲೇ ಉತ್ತರ ಕೊಡುತ್ತೇನೆ ಎನ್ನುವಂಥ ಉದ್ದಟತನದ ಮಾತನಾಡಿದರು. ಇದೊಂದು ಜೀವಂತ ಉದಾಹರಣೆ. ಸರ್ಕಾರ ಬದುಕಿದ್ದಿದ್ದರೆ, ಜವಾಬ್ದಾರಿ ಇದ್ದರೆ ತಕ್ಷಣ ಅಲ್ಲಿಯೇ ಅವರನ್ನು ಬಂಧಿಸಬೇಕಾಗಿತ್ತು ; ಆ ಕೆಲಸ ನಿಮ್ಮಿಂದ ಆಗಲಿಲ್ಲ. ಧೈರ್ಯವಾಗಿ ಮಾತನಾಡಿ ಸರ್ಕಾರವನ್ನು ಬೆದರಿಸಿ, ಆನಂದವಾಗಿ ಅವರು ವಾಪಸ್ ಹೋದರು. ಮತ್ತೆ ಶಾಂತಿಗಾಗಿ ನಾಗರೀಕ ವೇದಿಕೆ. ಆ ಸಂದರ್ಭದಲ್ಲಿ ಬುದ್ಧಿಜೀವಿಗಳು ಎನ್ನುವವರು ನಡೆದುಕೊಂಡಂಥ ರೀತಿ, ಮೊನ್ನೆ ಮೈಸೂರು ಯೂನಿವರ್ಸಿಟಿಯಲ್ಲಿ ಮುಖ್ಯಮಂತ್ರಿಗಳು ವಾರನ್ ಮಾಡಿದರೆ, ಆ ಬುದ್ಧಿಜೀವಿಗಳೆಂದು ಕರೆಸಿಕೊಂಡವರು ಮುಖ್ಯಮಂತ್ರಿಗಳ ಬಗ್ಗೆ ಮಾತನಾಡುವಂಥ ಉದ್ಧಟತನದ ಮಾತು ಪತ್ರಿಕೆಗಳಲ್ಲಿ ಮುಖಪುಟದಲ್ಲಿ ಬಂದಿದೆ. ಯಾರು ಯಾರು ಈ ನಕ್ಸಲೀಯರ ಜೊತೆಗೆ ಅವರ ಚಟುವಟಿಕೆಯಲ್ಲಿ ಪಾಲುದಾರರಿದ್ದಾರೆ, ಅವರಿಗೆ ರಕ್ಷಣೆ ಕೊಡುತ್ತಿದ್ದಾರೆ, ಬೆಂಬಲ ಕೊಡುತ್ತಿದ್ದಾರೆ ಇವರ ಮೇಲೆ ನಾವು ಕ್ರಮ ತೆಗೆದುಕೊಳ್ಳದೇ ಇದ್ದರೆ ಏನಾಗಬಹುದು? ನಮ್ಮ ಈ ಗೌರಿಲಂಕೇಶ್‌ರವರು, ಪ್ರೊಫೆಸರ್ ಶ್ರೀಧರ್, ನಗರೀಬಾಬಯ್ಯ ಇವರನ್ನು ತಕ್ಷಣ ಬಂಧಿಸಿ ಕ್ರಮ ತೆಗೆದುಕೊಳ್ಳಬೇಕಾಗಿತ್ತು. ಕೇಸ್ ಹಾಕಿದ್ದೇವೆಂಬ ಕುಂಟು ನೆಪ ಹೇಳುತ್ತಾ ಇದ್ದೀರಿ. ಆದರೆ, ಕೇಸೂ ಹಾಕಲಿಲ್ಲ ಮತ್ತು ಅವರನ್ನು ಬಂಧಿಸಲೂ ಇಲ್ಲ. ಮುಖ್ಯಮಂತ್ರಿಗಳ ಮನೆ ಮುಂದೆ ಬಂದೂಕಿಗೆ ಬಂದೂಕಿನಿಂದಲೇ ಉತ್ತರ ಕೊಡುತ್ತೇನೆಂದು ಹೇಳಿದ ಐದೇ ದಿವಸದಲ್ಲಿ ವೆಂಕಟಮ್ಮನಹಳ್ಳಿಯಲ್ಲಿ ಏಳು ಜನ ಪೋಲೀಸರ ಬರ್ಬರ ಹತ್ಯೆ ಆಯಿತು. ಗದ್ದರ ಅವತ್ತೇನು ಸವಾಲು ಹಾಕಿದ್ದರು, ಅದನ್ನು ಸತ್ಯ ಮಾಡಿ ತೋರಿಸಿದ. ಅಮಾಯಕ ಪೋಲೀಸಿನವರು ಬಲಿಯಾದರು. ಅದಾದ ಮೇಲೆ ಮುಖ್ಯಮಂತ್ರಿಗಳು ಪ್ರತಿಪಕ್ಷದ ನಾಯಕರ ಸಭೆಯಲ್ಲಿ ಎಸ್.ಟಿ.ಎಫ್. ಕಳುಹಿಸುತ್ತೇನೆಂದು ಹೇಳಿದರು. ಏಕೆ ಕಳುಹಿಸಲಿಲ್ಲ? ವೆಂಕಟಮ್ಮನಹಳ್ಳಿಯ ಘಟನೆ ನಂತರ, ಅವರು ಏಕೆ ಹಿಂದೆ ಸರಿದರು? ಮುಖ್ಯಮಂತ್ರಿಗಳು, ಉಪ ಮುಖ್ಯಮಂತ್ರಿಗಳು ಈ ಬಗ್ಗೆ ದ್ವಂದ್ವ ಹೇಳಿಕೆಯನ್ನು ಕೊಡಲು ಶುರು ಮಾಡಿದರು. ಇದರಿಂದ ಜನರು ಗೊಂದಲದಲ್ಲಿ ಸಿಕ್ಕಿಹಾಕಿಕೊಂಡರು. ಈ ತರಹ ಹೇಳಿಕೆಯನ್ನು ಮುಖ್ಯಮಂತ್ರಿಗಳು, ಉಪ ಮುಖ್ಯಮಂತ್ರಿಗಳು ಕೊಡುವುದಕ್ಕೆ ಶುರುಮಾಡಿದರೆ ಎಲ್ಲಿಯವರೆಗೆ ಅಂದರೆ, ಡೈರೆಕ್ಟರ್ ಆಫ್ ಜನರಲ್ ಪೋಲೀಸ್‌ನವರ ಬಗ್ಗೆಯೂ ತನಿಖೆ ಆಗಬೇಕೇನೂ ಎನ್ನುವಂಥ ವಾತಾವರಣ ಸೃಷ್ಟಿಯಾಯಿತು. ಆ ರೀತಿಯ

ವಾತಾವರಣ ಸೃಷ್ಟಿ ಮಾಡುವುದಕ್ಕೆ ಆಡಳಿತ ನಡೆಸುವಂಥ ಪ್ರಮುಖರೇ ಕಾರಣಕರ್ತರಾದಿರಿ. ಯಾವುದೇ ಉನ್ನತ ಪೊಲೀಸ್ ಅಧಿಕಾರಿ ನಿರ್ಭೀತಿಯಿಂದ ಈ ರೀತಿ ತೀರ್ಮಾನಗಳನ್ನು ಕೈಗೊಳ್ಳುವುದಕ್ಕಾಗುವುದಿಲ್ಲವೆನ್ನುವ ವಾತಾವರಣವನ್ನು, ಒಂದು ಮೆಸೇಜನ್ನು ತಾವು ಕಳುಹಿಸುವಂಥ ಪ್ರಯತ್ನ ಮಾಡಿದಿರಿ. ಈ ನಕ್ಸಲೀಯ ಚಟುವಟಿಕೆಗಳಿಗೆ ವಿಶ್ವವಿದ್ಯಾನಿಲಯದ ಪ್ರೊಫೆಸರುಗಳೇ ಕೆಲವರು ಕುಮ್ಮಕ್ಕು ಕೊಡುತ್ತಾ ಇದ್ದಾರೆಂಬ ಮಾಹಿತಿ ನಿಮಗೆ ಸಿಕ್ಕಿದೆ. ಗುಪ್ತ ವರದಿ ನಿಮಗೆ ಇದೆ. ಅವರು ಯಾರು ಎಂದು ನಿಮಗೆ ಗೊತ್ತಿದೆ. ಅವರ ಬಗ್ಗೆ ಕ್ರಮ ತೆಗೆದುಕೊಳ್ಳುವಂಥ ತಾಕತ್ತು, ಧೈರ್ಯವನ್ನು ನೀವು ತೋರಿಸುತ್ತಾ ಇಲ್ಲ. ಯಾವ ಯಾವ ವಿಶ್ವವಿದ್ಯಾನಿಲಯದಲ್ಲಿ ಯಾರು ಯಾರು ಈ ಚಟುವಟಿಕೆಗಳಲ್ಲಿ ಭಾಗವಹಿಸಿದ್ದಾರೆ, ಇದಕ್ಕೆ ಕುಮ್ಮಕ್ಕು ಕೊಡುತ್ತಾ ಇದ್ದಾರೆ ಈ ಬಗ್ಗೆ ಕ್ರಮ ತೆಗೆದುಕೊಳ್ಳದೇ ಇದ್ದರೆ ಸರ್ಕಾರ ಬದುಕಿದೆಯೇ ಎನ್ನುವಂಥ ಪ್ರಶ್ನೆ ಎದ್ದೇಳುತ್ತೆ. ನಾವು ಬಹಳ ವರ್ಷಗಳಿಂದ ಹೇಳುತ್ತಾ ಇದ್ದೇವೆ, ಮಾಹಿತಿಗಳನ್ನು ಕೊಟ್ಟಿದ್ದೇವೆ. ಬೆಂಗಳೂರು ಒಂದುರೀತಿ ಈ ಚಟುವಟಿಕೆಗಳಿಗೆ ಕೇಂದ್ರಸ್ಥಾನ, ತಂಗುದಾಣ ಆಗಿದೆ. ಇದನ್ನು ನಾನು ಹೇಳುತ್ತಾ ಇಲ್ಲ. ಉನ್ನತ ಪೊಲೀಸ್ ಅಧಿಕಾರಿಗಳು, ನಿಮಗೆ ಗೊತ್ತಿರಬಹುದು ಕೇಂದ್ರದ ಗೃಹ ಇಲಾಖೆ, ಕರ್ನಾಟಕದಲ್ಲಿ ನಾಲ್ಕು ನೂರಕ್ಕೂ ಹೆಚ್ಚು ಜನ ಐ.ಎಸ್.ಐ. ಏಜೆಂಟ್ ಇದ್ದಾರೆಂದು ನಿಮಗೆ ವರದಿ ಕಳುಹಿಸಿದ್ದಾರೆ. ಬೇಕಿದ್ದರೆ ನಾನು ನಿಮಗೆ ಕಳುಹಿಸಿಕೊಡುತ್ತೇನೆ. ಆದ್ದರಿಂದ, ನಿಮ್ಮ ಹತ್ತಿರ ಗುಪ್ತ ವರದಿ ಇದೆ. ಆದರೆ, ರಾಜ್ಯದ ಗುಪ್ತಚರ ಇಲಾಖೆ ಗಮನ ಕೊಡಲಿಲ್ಲ. ಬೆಂಗಳೂರು, ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ವೀಸಾ ಮತ್ತು ಪಾಸ್‌ಪೋರ್ಟ್ ಇಲ್ಲದೇ ನೂರಾರು ಪಾಕಿಸ್ತಾನ ಮತ್ತು ಬಾಂಗ್ಲಾದ ಪ್ರಜೆಗಳು ನುಸುಳಿ ಬರುತ್ತಾ ಇದ್ದಾರೆನ್ನುವಂಥ ಮಾಹಿತಿಗಳು ನಿಮ್ಮಲ್ಲಿದೆ. ಅವರು ರಾಜ್ಯದಲ್ಲಿ ಕ್ರಿಮಿನಲ್ ಚಟುವಟಿಕೆಗಳಲ್ಲಿ ಭಾಗವಹಿಸುತ್ತಿದ್ದಾರೆಂಬುದು ನಿಮಗೆ ಗೊತ್ತಿದೆ. ನೈಜೀರಿಯಾ, ಕೀನ್ಯಾ, ವಿಯೆಟ್ನಾಮ್‌ಗಳಂಥ ಹೊರದೇಶಗಳಿಂದ ನಕಲಿ ಪಾಸ್‌ಪೋರ್ಟಿನ ಮೂಲಕ ಭಾರತಕ್ಕೆ ಬಂದಿದ್ದಾರೆಂಬ ಮಾಹಿತಿ ನಿಮ್ಮಲ್ಲಿದೆ. ಅವರು ಬೆಂಗಳೂರು, ಬಳ್ಳಾರಿ, ಮೈಸೂರು ಮತ್ತು ಕೊಡಗು ಜಿಲ್ಲೆಗಳಲ್ಲಿ ಬೀಡು ಬಿಟ್ಟಿದ್ದಾರೆಂಬ ಮಾಹಿತಿ ನಿಮ್ಮಲ್ಲಿದೆ. ಬೆಂಗಳೂರಿನ ಸುತ್ತಮುತ್ತ ಇರುವಂಥ ಸ್ಲಮ್‌ಗಳಲ್ಲಿ ಐದು ಸಾವಿರಕ್ಕೂ ಹೆಚ್ಚು ಜನ ವಿದೇಶಿಯರು ಇದ್ದಾರೆನ್ನುವಂಥ ಮಾಹಿತಿ ಗುಪ್ತಚಾರ ಇಲಾಖೆಯಿಂದ ನಿಮಗೆ ಸಿಕ್ಕಿದೆ. ನೈಜೀರಿಯಾ ಮೂಲಕ ಇಬ್ಬರು ವಿದ್ಯಾರ್ಥಿಗಳು, ಆಭರಣ ವ್ಯಾಪಾರಿಯೊಬ್ಬರನ್ನು ವಂಚಿಸಿ ನಾಲ್ಕು ಲಕ್ಷ ಲೂಟಿ ಮಾಡಿದಾಗ ಕಬ್ಬನ್‌ಪಾರ್ಕ್ ಪೊಲೀಸ್ ಸ್ಟೇಷನ್‌ಗೆ ಸಿಕ್ಕಿ ಬಿದ್ದರು. ಇದಕ್ಕೆ ಇವೆಲ್ಲಾ ಉದಾಹರಣೆ ಎಂದು ನಾನು ತಿಳಿದುಕೊಂಡಿದ್ದೇನೆ. ಇವರು ಯಾರು, ಎಲ್ಲಿದ್ದಾರೆ, ಇವರಿಗೆ ಯಾರು ರಕ್ಷಣೆ ಕೊಡುತ್ತಿದ್ದಾರೆ, ಇವರ ಮೇಲೆ ಯಾವ ರೀತಿಯ ಕ್ರಮ ತೆಗೆದುಕೊಳ್ಳುತ್ತಾ ಇದ್ದೀರಿ? ಇದು ಯಾವುದರ ಬಗ್ಗೆಯೂ ಏನೂ ಗೊತ್ತಾಗುತ್ತಾ ಇಲ್ಲ. ಭೂಗತ ದೊರೆಗಳಿಗೆ ರಕ್ಷಣೆ ಕೊಡುವಂಥ, ದೇಶದ್ರೋಹಿ ಚಟುವಟಿಕೆಗೆ ಕುಮ್ಮಕ್ಕು ಕೊಡುವಂಥ, ಈ ನಕಲಿ ಛಾಪಾ ಕಾಗದದ ಸಾವಿರಾರು ಕೋಟಿ ರೂಪಾಯಿಗಳು ಇದಕ್ಕೆ ವಿನಿಯೋಗವಾಗುತ್ತಾ ಇದೆಯೆನ್ನುವುದನ್ನು ಇಲ್ಲಿ ಸಾಕ್ಷ್ಯಾಧಾರಗಳೊಂದಿಗೆ ನಾವು ಕೊಟ್ಟೆವು.

ಶ್ರೀ ಕೆ.ಆರ್.ರಮೇಶ್ ಕುಮಾರ್ : ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರ ನೋಟೀಸ್ ನನ್ನ ಕೈಯಲ್ಲಿದೆ. ಅಧ್ಯಕ್ಷರು ಈ ವಿಷಯವನ್ನು ನಿಯಮ 69ಕ್ಕೆ ಕನ್‌ವರ್ಟ್ ಮಾಡಿದ್ದೇನೆಂದು ಹೇಳಿದರು. ಆಗ ನಾನೂ ಕೂಡ ಸದನದಲ್ಲಿದ್ದೆ. ತಾವು ಈ ರಾಜ್ಯದ ಲಾ ಅಂಡ್

ಆರ್ಡರ್ ಚರ್ಚೆ ಮಾಡುತ್ತಿದ್ದೀರೋ ಅಥವಾ ವೆಂಕಟಮ್ಮನಹಳ್ಳಿ ಮತ್ತು ಅದಕ್ಕೆ ಸೀಮಿತವಾದುದನ್ನು ಮಾತನಾಡುತ್ತಿದ್ದೀರೋ ಏಕೆಂದರೆ, ಅವರು ನೈಜೀರಿಯಾ, ಐ.ಎಸ್.ಐ ಇತ್ಯಾದಿ . . . .

ಶ್ರೀ ವಾಟಾಳ್ ನಾಗರಾಜ್ : ತಾವು ಏನೂ ತಪ್ಪು ತಿಳಿದುಕೊಳ್ಳಬೇಡಿ. ಸ್ವಲ್ಪ ಆಜುಬಾಜು ಮಾತನಾಡುತ್ತಿದ್ದಾರೆ. ಏಕೆಂದರೆ, ಪೊಲೀಸ್ ಸ್ಟೇಷನ್ ಎಂದರೆ, ಪಕ್ಕದಲ್ಲಿ ಏನೇನು ಇದೆ ಎಂಬುದನ್ನು ಸ್ವಲ್ಪ ಹೇಳಬೇಕಲ್ಲಾ. ತಾವು ಕೂಡ ಅಧ್ಯಕ್ಷರಾಗಿದ್ದವರು, ಈ ತರಹ ಆಗಿಬಿಟ್ಟರೆ ಹೇಗೆ?

ಶ್ರೀ ಜೆ.ಸಿ. ಮಾಧುಸ್ವಾಮಿ : ಕರ್ನಾಟಕ ರಾಜ್ಯ ನಕ್ಸಲೀಯ ಚಟುವಟಿಕೆಗಳಿಗೆ ಕೇಂದ್ರ ಸ್ಥಾನವಾಗಿರುತ್ತದೆ. ಇದರಿಂದ ರಾಜ್ಯದ ಜನತೆ ಭಯಭೀತರಾಗಿದ್ದಾರೆ ಎಂಬುದಾಗಿಯೇ ನೋಟೀಸ್ ಕಳುಹಿಸಿಕೊಡಲಾಗಿದೆ.

ಶ್ರೀ ಕೆ.ಆರ್.ರಮೇಶ್ ಕುಮಾರ್ : ಮಾನ್ಯ ಅಧ್ಯಕ್ಷರೆ, ನಕ್ಸಲೈಟ್ಸ್ ಪ್ರಾಬ್ಲಂ ಅದು ಪೊಲಿಟಿಕಲ್ ಪ್ರಾಬ್ಲಂ ಅದರಿಂದಾಗಿ ಅವರ ವಿಭಿನ್ನವಾದಂತಹ ರಾಜಕೀಯ ನಿಲುವಿನಿಂದ ಲಾ ಅಂಡ್ ಆರ್ಡರ್ ಪ್ರಾಬ್ಲಂ ಉದ್ಭವವಾಗಿದೆ, ಲಾ ಅಂಡ್ ಆರ್ಡರ್ ಪ್ರಾಬ್ಲಂ ಅನ್ನು ಚರ್ಚೆ ಮಾಡೋಣ. ಐ.ಎಸ್.ಐ.ನವರು ಅಥವಾ Lashkar-E-Toiba ಅವರು They are coming as international . . . .

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ರಮೇಶ್‌ಕುಮಾರ್‌ರವರೇ, ಒಂದೇ ಒಂದು ನಿಮಿಷ. ರೂಲ್ 69 ರ ಮೇರೆಗೆ ಅಧ್ಯಕ್ಷರು ಚರ್ಚೆಗೆ ಅವಕಾಶ ಮಾಡಿಕೊಟ್ಟಿದ್ದಾರೆ. ಆಮೇಲೆ ತಾವೂ ಸಹ ಭಾಗವಹಿಸಿ ಮಾತನಾಡಬಹುದು, ಅನುಕೂಲವಾಗುತ್ತದೆ.

Sri K.R. Ramesh kumar : It is not that. you will agree with me they are totally two different things. ಹೇಗೆ ಸಾಧ್ಯವಾಗುತ್ತದೆ ನಾನು ಏನು ಹೇಳುತ್ತೇನೆಂದರೆ, with due respect to the Leader of the Opposition, ಅವರನ್ನು ಡಿಸ್ಟರ್ಬ್ ಮಾಡಬೇಕು ಎನ್ನುವ ಉದ್ದೇಶ ನನಗಿಲ್ಲ. ನಕ್ಸಲೈಟ್ಸ್ ಪ್ರಾಬ್ಲಂ ಅನ್ನು ಏನು ನೀವು ಚರ್ಚೆ ಮಾಡುತ್ತಿದ್ದೀರಿ, ಅದರ ದಿಕ್ಕೇ ಬೇರೆಯಾಗುತ್ತಿದೆ. ಐ.ಎಸ್.ಐ. ಅಥವಾ ಉಳಿದವರು ಯಾರು ಇದ್ದಾರೆ ಪರದೇಶಗಳಿಂದ ಬರತಕ್ಕಂಥವರು ಸ್ಪೈಸ್ ಆಗಿ ಬರತಕ್ಕಂಥವರು ಅವರ ಕಾರ್ಯಕ್ಷೇತ್ರ, ಅವರ ಆಲೋಚನೆ, ಇದೇ ಬೇರೆ ಆಗುತ್ತದೆ. ಅದೂ ಇದೂ ಎಲ್ಲಾ ಕ್ಲಬ್ ಮಾಡುತ್ತಿದ್ದೀರಿ, ಈಗ ತಾವು ಎಕ್ಸ್‌ಕ್ಲೂಸೀವ್ ಆಗಿ ರಾಜ್ಯದಲ್ಲಿ ಉದ್ಭವವಾಗಿರತಕ್ಕಂಥ ಲಾ ಅಂಡ್ ಆರ್ಡರ್ ಪ್ರಾಬ್ಲಂ ಅನ್ನು ಸೆಟ್‌ರೈಟ್ ಮಾಡಬೇಕು ಎನ್ನತಕ್ಕಂಥ ಉದ್ದೇಶದಿಂದ ಈ ವಿಚಾರವನ್ನು ಚರ್ಚೆಗೆ ತೆಗೆದುಕೊಂಡಿದ್ದೀರಾ, ಅಥವಾ ನಕ್ಸಲ್ ವಾದದಲ್ಲಿ ನಂಬಿಕೆ ಇರತಕ್ಕಂಥವರು ರಾಜಕೀಯವಾಗಿ ವಿಭಿನ್ನವಾದಂತಹ ನಿಲುವನ್ನು ತಳೆದಿದ್ದಾರೆ ಸಂಸದೀಯ ಪ್ರಜಾಪ್ರಭುತ್ವಕ್ಕೆ ಅದು ತಕ್ಕದಾದುದು ಅಲ್ಲ ಅವರು ಹಿಂಸೆಯನ್ನು ನಂಬುತ್ತಾರೆ, ನಾವು ಅಹಿಂಸೆಯಲ್ಲಿ ನಂಬಿಕೆ ಇರತಕ್ಕಂಥವರು ಆದ್ದರಿಂದ ತಾವು ನಾವು ಎಲ್ಲರೂ ಈ ಸದನದ ಮುಖಾಂತರ ಇದಕ್ಕೆ ರಾಜಕೀಯವಾದ ಉತ್ತರ ಕೊಡಬೇಕು ಎನ್ನತಕ್ಕಂಥ ಪ್ರಯತ್ನ ಮಾಡುತ್ತಿದ್ದೀರಾ ಎನ್ನುವ ಬಗ್ಗೆ ನನಗೆ ಕ್ಲಾರಿಫಿಕೇಶನ್ ಮಾಡಿದರೆ I will be grateful to you.

ಶ್ರೀ ಅರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೆ, ಇದೆಲ್ಲದ್ದಕ್ಕೂ ಕೂಡ ಒಂದಕ್ಕೊಂದು ಲಿಂಕ್

ಇದೆ. ಐ.ಎಸ್.ಐ. ನಕ್ಸಲ್‌ವಾದಿಗಳು ಯಾರಿದ್ದಾರೆ ಇವರ ಕೈಯಲ್ಲಿ ಇವತ್ತು ಆಧುನಿಕ ವಿದೇಶಿ ಶಸ್ತ್ರಾಸ್ತ್ರಗಳು ಎಲ್ಲಿಂದ ಬರಬೇಕು? ಇವೆಲ್ಲವೂ ಕೂಡ ಒಂದು ರೀತಿಯಿಂದ ಚೈನ್ ಇದೆ. ಪೊಲೀಸ್ ವರದಿಗಳು ಇವೆ. ಮಾಧ್ಯಮಗಳಲ್ಲಿ ಪ್ರತಿನಿತ್ಯ ಬರುತ್ತಿವೆ. ಇವೆಲ್ಲವನ್ನೂ ಕೂಡ ಕ್ರೋಢೀಕರಿಸಿಕೊಂಡೆ ಇವತ್ತು ಚರ್ಚೆ ಮಾಡಬೇಕಾಗುತ್ತದೆ. ಅದನ್ನು ಬಿಡಿ, ಇದನ್ನು ಬಿಡಿ, ವಿಭಿನ್ನ ನಿಲುವುಗಳು ರಾಜಕೀಯದ್ದು, ರಾಜಕೀಯದ್ದು ಏನಾದರೂ ಇದ್ದರೆ ನೇರವಾಗಿ ಬರಬೇಕು ಅವರು. ಅವರು ಬಂದೂಕು ಇಟ್ಟುಕೊಂಡು, ಕಾಡಿನಲ್ಲಿದ್ದುಕೊಂಡು, ನಾವು ಗುಂಡು ಹೊಡೆಯುತ್ತೇವೆ, ಯಾರನ್ನು ಬೇಕಾದರೂ ಕುತ್ತಿಗೆ ಹಿಡಿದುಕೊಂಡು ಹತ್ತು ಸಾವಿರ ಇಪ್ಪತ್ತು ಸಾವಿರ, ಲಕ್ಷ ಕೋಟಿ ರೂಪಾಯಿ ವಸೂಲಿ ಮಾಡಿಕೊಂಡು ಹೋಗುತ್ತೇವೆಂದರೆ ಹೇಗೆ? ಮಲೆನಾಡಿನಂತಹ ಭಾಗದಲ್ಲಿ ತಾವು ಇವತ್ತು ನೋಡಬೇಕು, ಅವರ ಹತ್ತಿರ ಇದ್ದಂತಹ ಶಸ್ತ್ರಾಸ್ತ್ರಗಳನ್ನು ಪೊಲೀಸಿನವರು ಮೊನ್ನೆ ಶೃಂಗೇರಿ ಪೊಲೀಸ್ ಸ್ಟೇಷನ್‌ನಲ್ಲಿ ಎಗ್ಸಿಬಿಟ್ ಮಾಡಿದ್ದರು, ನೋಡಿದರೆ ಭಯಾನಕವಾದಂತಹ ವಾತಾವರಣ ಇತ್ತು. ಈ ರೀತಿಯಲ್ಲಿ ನಾವು ಎಲ್ಲೋ ಒಂದು ಕಡೆ ಅದನ್ನು ಮಾತನಾಡದೆ ಹಾಗೆ, ಇದನ್ನು ಮಾತನಾಡದಿದ್ದ ಹಾಗೆ ಎಲ್ಲೋ ಡಿಲೀಂಗ್ಸ್ ಮಾಡುತ್ತಾ ಹೋದರೆ, ಖಂಡಿತವಾಗಿ ಈ ಚರ್ಚೆ ಪರಿಪೂರ್ಣವಾಗುವುದಿಲ್ಲ ಮತ್ತೆ ಪಕ್ಷಭೇದವನ್ನು ಮರೆತು ಎಲ್ಲವನ್ನೂ ಮೀರಿ ನಿಂತು ಚರ್ಚೆಯಾಗಬೇಕಾಗುತ್ತದೆ. ಆದ್ದರಿಂದ ಇದನ್ನು ಎಲ್ಲೋ ಒಂದು ಕಡೆ ಡಿಸ್ಟರ್ಬ್ ಮಾಡುವುದು ಒಳ್ಳೆಯದಾಗುವುದಿಲ್ಲ.

ಶ್ರೀ ಕೆ. ಆರ್. ರಮೇಶ್ ಕುಮಾರ್ : ಮಾನ್ಯ ಅಧ್ಯಕ್ಷರೆ, ರಾಜಕೀಯದ ಇತಿಹಾಸ ಪರಿಚಯವು ಬೇಕಾಗುತ್ತದೆ. ಯಾವುದನ್ನೋ ನಿಲ್ಲಿಸಿ, ಮೊಟಕು ಮಾಡಿ, ಸಪರೇಟ್ ಮಾಡಿ ಅಂತ ನಾನು ಅಡ್ವೈಸ್ ಮಾಡುತ್ತಿಲ್ಲ. ನಕ್ಸಲ್‌ವಾದ ಎನ್ನತಕ್ಕಂಥಾದ್ದು ಈ ದೇಶದಲ್ಲಿ ಎಲ್ಲಿ ಪ್ರಾರಂಭವಾಯಿತು? ಯಾವಾಗ ಪ್ರಾರಂಭವಾಯಿತು? ಯಾರಿಂದ ಪ್ರಾರಂಭವಾಯಿತು? ಅದು ಬೇಕಾದರೆ ಒಂದು ದಿನ ವಿಶೇಷವಾಗಿ ಚರ್ಚೆಗೆ ತೆಗೆದುಕೊಳ್ಳೋಣ. ನಾನು ತಮ್ಮಲ್ಲಿ ಕೇಳತಕ್ಕಂಥಾದ್ದು ಇಷ್ಟೆ. ಅವರ ಒಂದು ಸಿದ್ಧಾಂತ ಅವರ ಒಂದು ಆಲೋಚನೆ ಬೇರೆ ಇದೆ. ಇವರದ್ದೇ ಬೇರೆ ಇದೆ. ನಾವು ಆಡಳಿತಾತ್ಮಕವಾಗಿ ಇಲ್ಲಿ ಉದ್ಭವವಾಗಿರತಕ್ಕಂಥ ಲಾ ಅಂಡ್ ಆರ್ಡರ್ ಪ್ರಾಬ್ಲಂ ಅನ್ನು ಚರ್ಚೆ ಮಾಡುತ್ತಿದ್ದೇವೆಯೇ ಅಥವಾ ಐಡಿಯಾಲಾಜಿಕಲ್ ಆಗಿ ಅವರು ತೆಗೆದುಕೊಂಡಿರತಕ್ಕಂಥ ಸ್ಟ್ಯಾಂಡ್‌ಗೆ as a House having faith in parliamentary democracy.....

ಶ್ರೀ ಬಿ.ಎಸ್.ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ಹಿರಿಯ ಸದಸ್ಯರಾದಂತಹ ಮಾನ್ಯ ರಮೇಶ್‌ಕುಮಾರ್‌ರವರ ಮಾತನ್ನು ನಾನು ಒಪ್ಪುತ್ತೇನೆ. ಇಲ್ಲಿ ಇವತ್ತು ಕಾನೂನು ಸುವ್ಯವಸ್ಥೆ ಸಂಪೂರ್ಣ ಹದಗೆಡುವುದಕ್ಕೋಸ್ಕರ ಕೇವಲ ಈ ನಕ್ಸಲೀಯರ ಇತ್ತೀಚಿನ ಚಟುವಟಿಕೆಗಳು ಕಾರಣ ಮಾತ್ರವಲ್ಲ, ಆ ಕರೀಂ ಲಾಲನಿಂದ ಇವತ್ತಿನವರೆಗೆ ಹತ್ತಾರು ಸಾವಿರ ಕೋಟಿ ರೂಪಾಯಿಯನ್ನು ಈ ರಾಜ್ಯದಲ್ಲಿ, ಈ ದೇಶದಲ್ಲಿ ಅಭದ್ರತೆಯನ್ನು ಉಂಟು ಮಾಡುವುದಕ್ಕೆ ಏನು ಹಣವನ್ನು ವಿನಿಯೋಗ ಮಾಡುವಂತಾದ್ದು ಆಯಿತು ಅವನ್ನು ನೋಡಿಕೊಂಡು ನಾವು ಕಣ್ಣುಮುಚ್ಚಿಕೊಂಡು ಕುಳಿತುಕೊಂಡಿದ್ದೆವು. ಎಲ್ಲಾ ಪತ್ರಿಕೆಗಳಲ್ಲಿ " ಉಲ್ಫ್ ಮೂಲಕ ನಕ್ಸಲೀಯರಿಗೆ ಶಸ್ತ್ರಾಸ್ತ್ರ" ಎನ್ನುವ ಡೆಲ್ಲಿ ರಿಪೋರ್ಟ್‌ನಲ್ಲಿ ನಕ್ಸಲೀಸ್‌ಗೂ ಐ.ಎಸ್.ಐ.ಗೆ ಇರುವ ಚಟುವಟಿಕೆಗೆ ಇರುವಂತಹ ಸಂಬಂಧದಿಂದ ಶಸ್ತ್ರಾಸ್ತ್ರ ಒದಗಿಸುವಂತಹ ಪ್ರಸ್ತಾಪ ಇವತ್ತು ಡಿಟೇಲ್ಸ್ ಇದೆ. ಅಂದರೆ ನಮಗೆ

ಎಲ್ಲಾ ಮಾಹಿತಿಗಳು ಇದ್ದರೂ ಸಹ ನಾವು ಕೈ ಕಟ್ಟಿಕೊಂಡು ಕುಳಿತುಕೊಂಡು ಬಿಗಿಯಾದಂತಹ ಕ್ರಮವನ್ನು ತೆಗೆದುಕೊಳ್ಳದೇ ಇದ್ದಂತಹ ಪರಿಣಾಮ ಇವತ್ತು ಆಂಧ್ರ ಪ್ರದೇಶವನ್ನು ಮೀರಿಸುವಂತಹ ರೀತಿಯಲ್ಲಿ ನಕ್ಸಲ್ ಚಟುವಟಿಕೆಯ ಕೇಂದ್ರವಾಗಿ ಕರ್ನಾಟಕ ಪರಿವರ್ತನೆಯಾಗಿ ಕಾನೂನು ಸುವ್ಯವಸ್ಥೆಗೆ ಅಡ್ಡಿಯಾಗಿ ಚುನಾಯಿತ ಪ್ರತಿನಿಧಿಗಳು ತಮ್ಮ ಕರ್ತವ್ಯವನ್ನು ನಿರ್ವಹಿಸುವುದಕ್ಕೆ ಆಗದೇ ಇರುವಂತಹ, ಶ್ರೀ ಸಾಮಾನ್ಯರು ರಸ್ತೆಯಲ್ಲಿ ಓಡಾಡುವುದಕ್ಕೆ ಆಗದೇ ಇರುವಂತಹ ಪರಿಸ್ಥಿತಿ ಬಂದಿದೆ ಎನ್ನುವಂತಹ ವಿವರವನ್ನು ಕೊಡುವಂತಹ ಒಂದು ಪ್ರಯತ್ನವನ್ನು ನಾನು ಮಾಡುತ್ತಿದ್ದೇನೆ, ವಿನಹ ಇದರ ಮೂಲಕ ಸರ್ಕಾರ ಯಾವುದೋ ಒಂದು ಘಟನೆಯನ್ನು ಅಲ್ಲಿರುವಂತಹ ಅಪರಾಧಿಯನ್ನು ಹಿಡಿಯುವುದರಿಂದ ಈ ಸಮಸ್ಯೆಗೆ ಪರಿಹಾರ ಸಿಗುವುದಿಲ್ಲ. ನಾನು ಏನು ಹೇಳುವುದಕ್ಕೆ ಹೊರಟಿದ್ದೇನೆಂದರೆ ಮಾನ್ಯ ರಮೇಶ್‌ಕುಮಾರ್ ಅವರು ಹಿರಿಯ ಸದಸ್ಯರಿದ್ದಾರೆ, ಅವರು ಸಭಾಧ್ಯಕ್ಷರಾಗಿ ಕೆಲಸ ಮಾಡಿ ನಮಗೆ ಮಾರ್ಗದರ್ಶನ ಮಾಡಿದ್ದೀರಿ, ಯಾವ ಟಾಪ್ ಪೋಲೀಸ್ ಅಧಿಕಾರಿಗಳು ತಮ್ಮದೇ ಆದಂತಹ ಒಂದು ರೀತಿಯಲ್ಲಿ ಈ ರೀತಿ ದೇಶದ್ರೋಹ ಚಟುವಟಿಕೆ ಮಾಡುತ್ತಿದ್ದಾರೆ ಎನ್ನುವುದರ ಜೊತೆಗೆ ಕೈ ಜೋಡಿಸಿದರ ಪರಿಣಾಮ ಇವತ್ತು ಅವರು ನಿರ್ಭೀತಿಯಿಂದ ಅದೇ ಉನ್ನತ ಸ್ಥಾನದಲ್ಲಿದ್ದು ಅವರು ಕೆಲಸ ಮಾಡುವುದಕ್ಕೆ ಆಗದೇ ಇರುವಂತಹ ಪರಿಸ್ಥಿತಿ ಇದೆ. ಸುಪ್ರೀಂಕೋರ್ಟ್ ಡೈರೆಕ್ಷನ್ ಕೊಡಬೇಕಾಯಿತು ಅವನನ್ನು ಪ್ರಾಸಿಕ್ಯೂಷನ್ ಮಾಡಿ ಅಂತ. ಅದು ಮುಚ್ಚಿ ಹಾಕುವಂತಾದ್ದು ಆಗುತ್ತಿದೆ. ಅಂದರೆ ಎಲ್ಲೋ ಒಂದು ಕಡೆ ಟಾಪ್ ಪೋಲೀಸ್ ಅಧಿಕಾರಿಗಳೇ ಈ ರೀತಿಯಾದ ಚಟುವಟಿಕೆಗೆ ಕುಮ್ಮಕ್ಕು ಕೊಡುವಂತಹ ಅಪರಾಧಿ ಸ್ಥಾನದಲ್ಲಿ ನಿಂತಿದ್ದಾರೆ ಎನ್ನುವುದಾದರೆ ಈ ರಾಜ್ಯದ ಜನತೆಯನ್ನು ಯಾರು ರಕ್ಷಣೆ ಮಾಡಬೇಕು ಎನ್ನುವಂತಹ ಮೂಲ ಪ್ರಶ್ನೆ ಇಲ್ಲಿದೆ. ಅದು ಹೌದೋ ಇಲ್ಲವೋ ಎನ್ನುವಂತಾದ್ದನ್ನು ಉತ್ತರ ಕೊಡುವಂತಹ ಸಂದರ್ಭದಲ್ಲಿ ಕೊಡಿ ನಾನು ಸಹ ಮಾಹಿತಿಯನ್ನು ಕೊಡುವಂತಹ ಪ್ರಯತ್ನ ಮಾಡುತ್ತಿದ್ದೇನೆ. ಅಂದರೆ ಕಳೆದ ನಾಲ್ಕಾರು ವರ್ಷಗಳಲ್ಲಿ ಈ ರಾಜ್ಯದಲ್ಲಿ ನಡೆದಂತಹ ಘಟನೆಗಳು, ಇದರ ಪರಿಣಾಮಗಳು ಎಲ್ಲಿಗೆ ಬಂದು ಮುಟ್ಟಿದೆ ಎನ್ನುವಂತಾದ್ದನ್ನು, ನಾನು ಒಂದು ಮಾತು ತಮಗೆ ಹೇಳುತ್ತೇನೆ. ಇವತ್ತು ನಕ್ಸಲೀಯ ಚಟುವಟಿಕೆಗಳನ್ನು ನಿಗ್ರಹಿಸುವುದಕ್ಕೋಸ್ಕರ ನಾವು ಮಲೆನಾಡು ಪ್ರದೇಶದಲ್ಲಿ ನಾವು ಏನು ಮಾಡಬೇಕೋ ಅದನ್ನು ಮಾಡುತ್ತೇವೆ. ಅದಕ್ಕಾಗಿ ನಾವು ಈ ಕುದುರೆಮುಖ ರಾಷ್ಟ್ರೀಯ ಉದ್ಯಾನವನಕ್ಕೆ 60 ಕೋಟಿ ರೂಪಾಯಿಗಳನ್ನು ನಾವು ಬಿಡುಗಡೆ ಮಾಡಿದ್ದೇವೆಂದು ಹೇಳಿದರು. ಇವತ್ತು ಆಶ್ಚರ್ಯವಾಗುತ್ತದೆ ಮಾನ್ಯ ಮುಖ್ಯಮಂತ್ರಿಗಳೇ ತಾವು ನೋಡಿ. ಇಲ್ಲಿ ಸರ್ಕಾರ ಕೊಟ್ಟಂತಹ ಭರವಸೆ, ನಿಮ್ಮ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಮುಖ್ಯ ವನ್ಯಜೀವಿ ಪರಿಪಾಲಕರು, ಲಿಖಿತ ಮೂಲಕ ಉತ್ತರ ಕೊಟ್ಟಿದ್ದಾರೆ, ಕರ್ನಾಟಕ ಮಾಹಿತಿ ಪಡೆದ ಹಕ್ಕು ಕಾಯ್ದೆ 2000, ಅರಣ್ಯ ಇಲಾಖೆಗೆ ಸಂಬಂಧಪಟ್ಟ ಹಾಗೆ ಮಾಹಿತಿಯನ್ನು ಒದಗಿಸುವ ಬಗ್ಗೆ, ದಿನಾಂಕ 24-2-2005 ರಂದು ಶ್ರೀ ಗಿರೀಶ್ ಮಟ್ಟಣ್ಣನವರಿಗೆ ಕೊಟ್ಟಂತಹ ಉತ್ತರ. ಏನು ಉತ್ತರ ಕೊಟ್ಟಿದ್ದಾರೆ ? ತಮ್ಮ ಪತ್ರ 24-2-2005 ಕ್ಕೆ ಸಂಬಂಧಿಸಿದಂತೆ ತಿಳಿಸುವುದೇನೆಂದರೆ ಕುದುರೆಮುಖ ರಾಷ್ಟ್ರೀಯ ಉದ್ಯಾನವನಕ್ಕೆ 60 ಕೋಟಿ ರೂಪಾಯಿಗಳ ಯೋಜನೆಯ ಪ್ರಸ್ತಾಪಿತ ಮಾಹಿತಿ ಈ ಕಛೇರಿಗೆ ಸರ್ಕಾರದಿಂದ ಬಂದಿಲ್ಲ ಮತ್ತು ಇದರ ಬಗ್ಗೆ ನಾವು ಯಾವುದೇ ಹಣವನ್ನು ಬಿಡುಗಡೆ ಮಾಡಿಲ್ಲ. ಅಂದರೆ ಅಲ್ಲಿ ಈ ಅಭಯಾರಣ್ಯದಲ್ಲಿ ಕುದುರೆಮುಖ ರಾಷ್ಟ್ರೀಯ ಉದ್ಯಾನವನದ ಅಭಿವೃದ್ಧಿಗಾಗಿ ನಾವು 60

ಕೋಟಿ ರೂಪಾಯಿಗಳನ್ನು ಕೊಡುತ್ತೇವೆಂದು ಈ ಸದನದಲ್ಲಿ ಹೇಳಿ ಇವತ್ತು ಒಂದು ರೂಪಾಯಿ ಬಿಡುಗಡೆ ಮಾಡಿಲ್ಲ ಎನ್ನುವುದಾದರೆ ನೀವು ಏಕೆ ಈ ಭರವಸೆಯನ್ನು ಕೊಡುತ್ತೀರಿ? ಈ ಚಟುವಟಿಕೆಯನ್ನು ಹತ್ತಿಕ್ಕುವುದಕ್ಕೋಸ್ಕರ ಅಲ್ಲಿ ಬೇಕಾದಂತಹ ವ್ಯವಸ್ಥೆಯನ್ನು ಮಾಡುತ್ತೇವೆ ಅಲ್ಲಿನ ಜನರಿಗೆ ರಕ್ಷಣೆ ಕೊಡುತ್ತೇವೆ ಎನ್ನುವಂತಹ ದಿಟ್ಟ ನಿಲುವನ್ನು ನೀವು ತೆಗೆದುಕೊಂಡ ಮೇಲೆ ಈ ಸದನದಲ್ಲಿ 60 ಕೋಟಿ ರೂ. ಬಿಡುಗಡೆ ಮಾಡುತ್ತೇವೆಂದು ಹೇಳಿ ಇದುವರೆಗೂ ನೀವು ಒಂದು ಪೈಸೆ ಬಿಡುಗಡೆ ಮಾಡಿಲ್ಲವೆಂದು ಹೇಳುವುದಾದರೆ ನೀವು ಎಲ್ಲಿದ್ದೀರಾ ಅಂತ. ನಿಮಗೆ ಯಾವುದರ ಬಗ್ಗೆಯೂ ಆಸಕ್ತಿ ಇಲ್ಲ. ಈ ರೀತಿ ಒಂದು ಗೊಂದಲದ ವಾತಾವರಣ ಇವತ್ತು ರಾಜ್ಯದಲ್ಲಿದೆ. 2000ದ ಜುಲೈ-ಆಗಸ್ಟ್ ತಿಂಗಳಲ್ಲಿ ಗುಲ್ಬರ್ಗಾ ವಾಡಿ ಚರ್ಚ್‌ನಲ್ಲಿ ಬಾಂಬೆ ಸ್ಫೋಟವಾಯಿತು. ಹುಬ್ಬಳ್ಳಿ ಚರ್ಚ್‌ನಲ್ಲಿ ಬಾಂಬ್ ಸ್ಫೋಟ ಮಾಡುವಂತಹ ಪ್ರಯತ್ನವಾಯಿತು. ಅಂದರೆ ಆವೊತ್ತಿನ ಆರೋಪವನ್ನು ಸಂಘ ಪರಿವಾರದ ಮೇಲೆ, ವಿಶ್ವ ಹಿಂದೂ ಪರಿಷತ್ತಿನ ಮೇಲೆ ಹಾಕುವಂತಹ ಪ್ರಯತ್ನ ಅವತ್ತು ಸರ್ಕಾರ ಮಾಡಿತು. ಆದರೆ ಅವತ್ತು ಕಾರು ಸ್ಫೋಟವಾದಾಗ ಇದರ ಸತ್ಯಾಸತ್ಯತೆ ಹೊರಗಡೆ ಬಂತು, ದೀನ್‌ದಾರ್ ಅಂಜುಮಾಮ್ ಸಂಸ್ಥೆಗೆ ಸೇರಿದವರು ಈ ಕಾರ್ಯ ಮಾಡಿದ್ದಾರೆ ಅಂತ ವಿವರ ಸಿಕ್ಕಿತು, ಇಲ್ಲದಿದ್ದರೆ ಪೊಲೀಸ್ ಅಧಿಕಾರಿಗಳು ಗೊಂದಲದಲ್ಲಿ ಈ ನಾಡಿನ 5 ಕೋಟಿ ಜನ ಯಾರನ್ನು ಅಪನಂಬಿಕೆಯಿಂದ ನೋಡುವಂತಹ ಪರಿಸ್ಥಿತಿ ಹಿಂದೆ ಬಂದಿತ್ತು. ಆ ಕಾರು ಸ್ಫೋಟವಾದ ಮೇಲೆ ಸಿಕ್ಕಿದಂತಹ ವರದಿ ಆಧಾರದ ಮೇಲೆ ಇದಕ್ಕೆ ಯಾರು ಸಂಬಂಧ ಇದೆ ಎನ್ನುವಂತಾದ್ದು ಗೊತ್ತಾಯಿತು. ಅದಾದ ಮೇಲೆ ನೀವು ವಿವರಕ್ಕೆ ಹೋದಾಗ ಇದಕ್ಕೆ ಐ.ಎಸ್.ಐ. ಸಂಬಂಧ ಇದೆ ಎನ್ನುವ ವಿವರ ಗೊತ್ತಾಯಿತು. ಅಂದರೆ ಎಲ್ಲೋ ಒಂದು ಕಡೆ ಇವತ್ತು ನಮ್ಮ ಸರ್ಕಾರ ಇವೆಲ್ಲವನ್ನೂ ನೋಡಿಕೊಂಡು ಕೈಕಟ್ಟಿಕೊಂಡು ಕುಳಿತುಕೊಳ್ಳುವಂತಹ ಒಂದು ಪ್ರಯತ್ನ ಮಾಡುತ್ತಿದೆ. ಬೆಂಗಳೂರಿನಲ್ಲಿ ಹತ್ತಾರು ಸಾವಿರಕ್ಕೂ ಹೆಚ್ಚು ಹಣವನ್ನು ಕೊಟ್ಟು ಬಾಡಿಗೆ ಕೊಟ್ಟು ಬಹಳ ಜನನಿಬಿಡ ಪ್ರದೇಶದಲ್ಲಿ ಈ ಚಟುವಟಿಕೆಗಳನ್ನು ನಡೆಸುವಂತಹವರು ಇದ್ದಾರೆ ಎನ್ನುವಂತಹ ಮಾಹಿತಿ ತಮಗೆ ಗೊತ್ತಿದೆ. 2003ರಲ್ಲಿ ಲಷ್ಕರ್ ತೋಹಿಬಾದ ನಾಯಕ ಫೈಜಲ್‌ಖಾನ್ ಈ ಮುಂಬೈ ಪೊಲೀಸ್ ಗುಂಡಿಗೆ ಬಲಿಯಾದಾಗ ಅವನಿಗೆ ಬೆಂಗಳೂರಿನ ಸಂಪರ್ಕ ಇತ್ತು ಎನ್ನುವಂತಾದ್ದು ತನಿಖೆಯಿಂದ ಗೊತ್ತಾಗಿದೆ. ಬೆಂಗಳೂರಿನ ಯುವಕರನ್ನು ಈ ಭಯೋತ್ಪಾದಕ ಚಟುವಟಿಕೆಗೆ ತೊಡಗಿಸುತ್ತಿರುವಂತಾದ್ದು, ಪ್ರೇರಣೆ ನೀಡುತ್ತಿರುವಂತಾದ್ದು ಮಾಹಿತಿಗಳು ಸಿಗುತ್ತಿದೆ. 2002ರಲ್ಲಿ ತಮಿಳುನಾಡಿಗೆ ಸೇರಿದ 13 ಜನ ಉಗ್ರರನ್ನು ಬೆಂಗಳೂರಿನಲ್ಲಿ ಬಂಧನ ಆಯಿತು, ಆ ಸಮಯದಲ್ಲಿ ಎಂ.ಎಸ್.ರಾಮಯ್ಯ ಲೇ ಔಟ್‌ನಲ್ಲಿ ಹಿಮಾಮ್ ಆಲಿ ಮತ್ತು ಇತರ ನಾಲ್ವರು ಪೊಲೀಸ್ ಧಾಳಿಯಲ್ಲಿ ಹತ್ಯೆಯಾದರು. ಆದ್ದರಿಂದ ಇವತ್ತು ಬೆಂಗಳೂರು ಕರಾವಳಿ ಪ್ರದೇಶ ರಕ್ಷಣೆ ಇಲ್ಲದೇ ಇರುವಂತಹ ಒಂದು ಪರಿಸ್ಥಿತಿಯಲ್ಲಿ ಬಂದಿದೆ. ಮೊನ್ನೆ ನಗರಕ್ಕೆ ಬಂದಂತಹ ರೈಲಿನಲ್ಲಿ ಶಸ್ತ್ರಾಸ್ತ್ರದ ಒಂದು ಸೂಟ್‌ಕೇಸ್ ಸಿಕ್ಕಿತು. ಅಂದರೆ ಇದೆಲ್ಲವೂ ಬೆಂಗಳೂರು ಒಂದು ದೇಶದ್ರೋಹಿ ಚಟುವಟಿಕೆಗೆ ಒಂದು ಸುರಕ್ಷಿತ ತಾಣವಾಗಿದೆ ಎನ್ನುವುದು ಸ್ಪಷ್ಟವಾಗುತ್ತಿದೆ. ಗೂಡಾಚಾರ ಇಲಾಖೆ ಬಿಗಿ ಮಾಡಲಿಲ್ಲ. ಬೆಂಗಳೂರಿಗೆ ಬರುವಂತಹ ಅಪರಿಚಿತರ ಮೇಲೆ ನಿಗಾ ಇಡುತ್ತಿಲ್ಲ. ಐಟಿ ಸಂಸ್ಥೆಗಳನ್ನು ಸ್ಫೋಟ ಮಾಡುವಂತಹ ವಾತಾವರಣದ ಗುರಿ ಇದೆ ಎನ್ನುವ ಮಾಹಿತಿಗಳು ಸಿಕ್ಕಿದೆ. ನಮ್ಮ ಪೊಲೀಸ್‌ನವರು ಈ ಉಗ್ರರನ್ನು, ದೇಶದ್ರೋಹಿಗಳನ್ನು ಬಂಧಿಸುವುದಕ್ಕೆ ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ

ಎಷ್ಟು ಶಕ್ತರಿದ್ದಾರೆ, ಎಷ್ಟೊಂದು ಕಳಕಳಿ ಇದೆ, ಆ ಪೊಲಿಟಿಕಲ್ ವಿಲ್ ಇದೆ ಎನ್ನುವುದು ಅನುಮಾನಕ್ಕೆ ಆಸ್ಪದವಾಗಿದೆ ಕಾನೂನು ಸುವ್ಯವಸ್ಥೆ ರಾಜ್ಯದಲ್ಲಿ ಸಂಪೂರ್ಣ ಹದಗೆಟ್ಟಿದೆ. ಇಂತಹ ಒಂದು ಪರಿಸ್ಥಿತಿ ನಮ್ಮ ರಾಜ್ಯದಲ್ಲಿರುವ ಸಂದರ್ಭದಲ್ಲಿ, ನಮ್ಮ ಇತರೆ ಎಲ್ಲಾ ಸದಸ್ಯರು ಮಾತನಾಡುತ್ತಾರೆ. ನಾನು ಒಂದನ್ನು ಮಾನ್ಯ ಮುಖ್ಯಮಂತ್ರಿಗಳಲ್ಲಿ ನಾನು ಕೇಳುವುದಕ್ಕೆ ಇಚ್ಛೆ ಪಡುತ್ತೇನೆ, ನೀವು ಟಾಪ್ ಪೊಲೀಸ್ ಆಫೀಸರ್ಸ್ ಮೇಲೆ ಈ ಜವಾಬ್ದಾರಿಯನ್ನು ತಾವು ಹೊರಿಸುತ್ತೀರಾ? ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೀರಾ? ಅವರು ಡಿಜಿ ಇರಬಹುದು, ಪೊಲೀಸ್ ಕಮೀಷನರ್ ಇರಬಹುದು, ಐಜಿ ಇರಬಹುದು, ಇಂತಹ ಘಟನಾವಳಿಗಳನ್ನು ಬಂದೋಬಸ್ತಿನಲ್ಲಿಡಬೇಕಾದ ಟಾಪ್ ಪೋಸ್ಟ್ ಪೊಲೀಸ್ ಅಧಿಕಾರಿಗಳು ಬೇರೆ ರಾಜಕೀಯ ಚಟುವಟಿಕೆಗಳಲ್ಲಿ ತೊಡಗಿದ್ದಾರಾ? ಪಕ್ಷದ ಕಾರ್ಯಕರ್ತರನ್ನು ಬೆಳೆಸುವುದಕ್ಕೆ ಉಪಯೋಗ ಮಾಡಿಕೊಳ್ಳುತ್ತಿದ್ದೀರಾ? ಒಂದು ರೀತಿಯಾಗಿ ನಿಮ್ಮ ಪೊಲೀಸ್ ಇಲಾಖೆ ಸಂಪೂರ್ಣವಾಗಿ ಫೇಲ್ ಆಗಿರುವ ಈ ಸಂದರ್ಭದಲ್ಲಿ, ಈ ರಾಜ್ಯದಲ್ಲಿ ಆತಂಕಕಾರಿಯಾದ ಬೆಳವಣಿಗೆಯಾಗಿರುವಂತಹ ಈ ಸಂದರ್ಭದಲ್ಲಿ, ಆ ಟಾಪ್‌ಮೋಸ್ಟ್ ಪೊಲೀಸ್ ಆಫೀಸರ್ಸ್ ಮೇಲೆ ರೆಸ್ಪಾನ್ಸಿಬಲಿಟಿ ಫಿಕ್ಸ್ ಮಾಡಿ ಕ್ರಮ ತೆಗೆದುಕೊಳ್ಳದೆ ಇದ್ದರೆ, ಬಹುಶಃ ಕೆಳಗಡೆ ಇರುವ ಸಾಮಾನ್ಯ ಪೊಲೀಸ್ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಂಡು, ಇದನ್ನು ಸರಿಪಡಿಸಬಹುದೆಂದು ನನಗೇನೂ ಅನಿಸುವುದಿಲ್ಲ. ನೂರಾರು ಘಟನೆಗಳಿವೆ ಬಹುಶಃ ಎರಡು ದಿವಸ ಚರ್ಚೆ ಮಾಡುವಷ್ಟು ಮಾಹಿತಿ ಇದೆ, ನಿಮ್ಮ ಇಲಾಖೆಯವರಿಗೂ ಅದು ಗೊತ್ತಿದೆ. ಆದರೆ ಆ ಪೊಲಿಟಿಕಲ್ ವಿಲ್ ಇದೆಯಾ? ಇವತ್ತು ನಿಮಗೇನು ಅನಿಸುವುದಿಲ್ಲವೇನೂ? ಬೆಂಗಳೂರಿನ ಸುತ್ತಮುತ್ತ ಭಯಾನಕ ವಾತಾವರಣ, ವಿಧಾನಮಂಡಲದ ಅಧಿವೇಶನ ಪ್ರಾರಂಭವಾದ ಎರಡನೇ ದಿವಸ ಇಲ್ಲಿಗೆ ಕಾರ್ಯಕಲಾಪಗಳಿಗೆ ನಾವು ಬರಬೇಕಾದರೆ ಬರುವಂತಹ ಜನ ಆತಂಕದಿಂದ, ಭಯದಿಂದ ಇಲ್ಲಿಗೆ ಬರುವಂತಹ ಒಂದು ಪರಿಸ್ಥಿತಿ, ನಾವು ಶಾಸಕರು, ಪೊಲೀಸರ ಬಂದೋಬಸ್ತಿನಲ್ಲಿ, ರಕ್ಷಣೆಯಲ್ಲಿ ಓಡಾಡುವಂತಹ ಪರಿಸ್ಥಿತಿ, ಮೊನ್ನೆ ನಾನು ಮಂಗಳೂರಿನಿಂದ ಶಿವಮೊಗ್ಗಕ್ಕೆ ಬರಬೇಕಾದರೆ, ಚಿಕ್ಕಮಗಳೂರು ಜಿಲ್ಲೆಯ ಆ ಭಾಗದಲ್ಲಿ ನಕ್ಸಲೀಯ ಚಟುವಟಿಕೆ ಇದೆ ರಾತ್ರಿ ಪ್ರಯಾಣ ಮಾಡಬಾರದೆಂದು 150 ಕಿಲೋಮೀಟರ್ ಬಳಸಿಕೊಂಡು ಕದ್ದು ನಾನು ಪೊಲೀಸ್ ರಕ್ಷಣೆಯಲ್ಲಿ ನಾನು ಶಿವಮೊಗ್ಗ ಜಿಲ್ಲೆಯ ಶಿಕಾರಿಪುರಕ್ಕೆ ಹೋಗಬೇಕಾಯಿತು. ಈ ರೀತಿಯ ಒಂದು ವಾತಾವರಣ ಇರಬೇಕಾದರೆ, ನಿಮ್ಮ ಸರ್ಕಾರ ಕೈಕಟ್ಟಿಕೊಂಡು ಕುಳಿತಿದೆ, ಪೊಲೀಸ್ ಇಲಾಖೆ ಸಂಪೂರ್ಣವಾಗಿ ವಿಫಲವಾಗಿದೆ, ಗೃಹ ಇಲಾಖೆ ಸಂಪೂರ್ಣ ವಿಫಲವಾಗಿದೆ ಮುಖ್ಯಮಂತ್ರಿಗಳಿಗೆ ಈ ಕಡೆಗೆ ಗಮನಕೊಡಲು ಬಿಡುವಿಲ್ಲ. ಈ ರೀತಿಯ ಒಂದು ಪರಿಸ್ಥಿತಿ ಇದ್ದರೆ ಬಹುಶಃ, ಕಾನೂನು ಸುವ್ಯವಸ್ಥೆಯನ್ನು ಕಾಪಾಡುವ ಒಂದು ಸರ್ಕಾರದ ಕರ್ತವ್ಯವೇನಿದೆ ಅದನ್ನು ಬಿಟ್ಟು, ಉಳಿದೆಲ್ಲಾ ಕೆಲಸವನ್ನು ಗೃಹ ಇಲಾಖೆಯ ಪೊಲೀಸ್ ಅಧಿಕಾರಿಗಳು ಮಾಡುತ್ತಿದ್ದಾರೆ ಇದಕ್ಕೆ ನೀವೇ ಜವಾಬ್ದಾರರು ಎಂದು ನಾನು ನೇರ ಆರೋಪ ಮಾಡಿ, ಇದನ್ನು ಸರಿಪಡಿಸುವುದರ ಕಡೆಗೆ ಗಮನ ಕೊಡಿ, ನಮ್ಮ ಟಾಪ್‌ಮೋಸ್ಟ್ ಪೊಲೀಸ್ ಅಧಿಕಾರಿಗಳ ಹಿಂದಿನ ಮಾಹಿತಿಯನ್ನು ತೆಗೆದು ನೋಡಿದರೆ, ಅನೇಕ ವಿವರಗಳು ನಿಮಗೆ ಸಿಗುತ್ತದೆ ಏಕೋ ಏನೋ ಯಾವುದೋ ಮುಲಾಜಿಗೆ ಸಿಲುಕಿ ಕೈಕಟ್ಟಿಕೊಂಡು ನೀವು ಕುಳಿತ್ತಿದ್ದೀರಿ. ಸರ್ಕಾರಗಳು ಬರುತ್ತವೆ ಹೋಗುತ್ತವೆ ಆದರೆ ಅಧಿಕಾರಿಗಳು ಶಾಶ್ವತವಾಗಿ ಸರ್ವೀಸ್ ಪೂರ್ಣ ಅಲ್ಲಿ ಕುಳಿತಿರುವಂತಹ ಸಂದರ್ಭದಲ್ಲಿ ಈ ರೀತಿಯ ಚಟುವಟಿಕೆಗೆ ಪರೋಕ್ಷವಾಗಿ ಅಪರಾಧಿಗಳಿಗೆ ಕುಮ್ಮಕ್ಕು ಕೊಟ್ಟು, ಅಪರಾಧಿಗಳು ನಿಮ್ಮ ಸುತ್ತಮುತ್ತ ಇದ್ದಾರೆ. ಟಾಪ್ ಪೊಲೀಸ್

ಅಧಿಕಾರಿಗಳೆ ಇವರ ಜೊತೆ ಶಾಮೀಲಾಗಿದ್ದಾರೆ. ಯುನಿವರ್ಸಿಟಿಯ ಪ್ರೊಫೆಸರ್ಸ್‌ಗಳೇ ಇವರ ಜೊತೆ ಕೈ ಜೋಡಿಸಿದ್ದಾರೆ ಇದೆಲ್ಲಾ ಗೊತ್ತಿದ್ದು ನೀವು ಕೈಕಟ್ಟಿಕೊಂಡು ಕುಳಿತುಕೊಳ್ಳುವುದು ಅಕ್ಷಮ್ಯ ಅಪರಾಧ, ಈ ನಾಡಿನ ಜನತೆಗೆ ಮಾಡುತ್ತಿರುವ ದ್ರೋಹ ಎಂದು ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಈಗಲಾದರೂ ಬಿಗಿ ಕ್ರಮ ತೆಗೆದುಕೊಂಡು ಇದನ್ನು ಹತ್ತಿಕ್ಕುವಂತಹ, ರಾಜ್ಯದಲ್ಲಿ ಹದಗೆಟ್ಟಿರುವ ಕಾನೂನು ಸುವ್ಯವಸ್ಥೆಯನ್ನು ಸರಿಪಡಿಸುವ ಕಡೆ ಸರ್ಕಾರ ತೀವ್ರವಾದ ಗಮನವನ್ನು ಕೊಡಬೇಕೆಂದು ಒತ್ತಾಯ ಮಾಡಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) : ಮಾನ್ಯ ಅಧ್ಯಕ್ಷರೆ, ಸರ್ಕಾರದ ಮೇಲೆ ವಿಶ್ವಾಸವಿಲ್ಲವೆಂದು ಸೂಚನೆಯನ್ನು ಕೊಟ್ಟು ಈ ಚರ್ಚೆಯನ್ನು ಆರಂಭ ಮಾಡಬೇಕಾಗಿತ್ತು ಎಂಬುದು ನನ್ನ ಭಾವನೆ. ಆದರೆ ಅದು ಬಹಳ ಪ್ರಿ ಮೆಚ್ಯುರ್ ಆಗುತ್ತದೆ, ಹಾಗಾಗಿ ಅದನ್ನು ಒಂದು ಅಡ್ಜರ್ನ್‌ಮೆಂಟ್ ಮೋಷನ್‌ನಲ್ಲಿ ರೈಸ್ ಮಾಡೋಣವೆಂದು ಮಾತನಾಡಿ ಇದನ್ನು ಇಲ್ಲಿ ಎತ್ತಿಕೊಳ್ಳುವುದಕ್ಕೆ ಪ್ರಯತ್ನ ಮಾಡಿದ್ದೇವೆ, ಅವಕಾಶ ಕೊಟ್ಟಿದ್ದಕ್ಕೆ ತಮಗೆ ವಂದಿಸುತ್ತೇನೆ. ನಾನು ಮತ್ತು ನಮ್ಮ ಪಕ್ಷದವರು ವೆಂಕಟಮ್ಮನಹಳ್ಳಿಗೆ ಹೋಗಿ ಬಂದಿದ್ದೇವೆ. ವೆಂಕಟಮ್ಮನಹಳ್ಳಿಯಲ್ಲಿ ಏನು ನಡೆಯಿತೆಂಬುದನ್ನು ಸರ್ಕಾರದ ಮಟ್ಟದಲ್ಲಿ ಎಲ್ಲೂ ವಿಶ್ಲೇಷಣೆ ಮಾಡಿದ್ದು ನನಗೆ ಕಾಣಲಿಲ್ಲ. ತುಮಕೂರು ಜಿಲ್ಲೆಯ ಗಡಿಭಾಗದ ಆಂಧ್ರ ಪ್ರದೇಶದ ಆ ಭಾಗದಲ್ಲಿ ರೆಡ್ಡಿ ಮುತ್ತೆಲ್ಲಪ್ಪನವರ ಕಾಲದಿಂದ ಹಿಡಿದು, ಈವರೆಗೆ ಇಂತಹ ಆತಂಕಕಾರಿ ಘಟನೆಗಳು ನಡೆಯುತ್ತಲೇ ಇವೆ. ಅದು ನಕ್ಸಲರ, ಮಾವೋವಾದಿಗಳ, ಎಲ್‌ಟಿಟಿಗಳ ನಾನು ಆಳಕ್ಕೆ ಹೋಗಿ ಮಾತನಾಡುವುದಕ್ಕೆ ಇಚ್ಛೆ ಪಡುವುದಿಲ್ಲ. ಈ ಘಟನೆಗೆ ಮಾವೋವಾದಿ ಪಕ್ಷದವರು ಕಾರಣರೆಂದು ಅವರು ಕಾಗದ ಬರೆದಿದ್ದಾರೆ, ದುರ್ದೈವವೆಂದರೆ ಅವರು ಬೆಂಗಳೂರಿನಲ್ಲಿ ಬೇಸ್ ಆಗಿದ್ದಾರೆ. ನಿಮ್ಮ ಯಾವುದೇ ಘಟನೆಯನ್ನು ಒಪ್ಪಿಕೊಂಡು ಇದನ್ನು ಮಾಡಿದವರು ನಾವೇ ಎಂದು ಹೇಳುವ ಜನ ಬೆಂಗಳೂರಿನಿಂದಲೇ ಪತ್ರವ್ಯವಹಾರವನ್ನು ಮಾಡುತ್ತಿದ್ದಾರೆ. ರಾಜೀವ್ ಗಾಂಧಿಯುವರನ್ನು ಕೊಂದವರನ್ನು ಹಿಡಿಯಬೇಕಾದರೆ ಬೆಂಗಳೂರಿಗೆ ಬಂದು ಹಿಡಿಯಬೇಕಾಗುತ್ತದೆ. ವೆಂಕಟಮ್ಮನಹಳ್ಳಿಯಲ್ಲಿ ಪೊಲೀಸ್‌ನವರನ್ನು ಹತ್ಯೆ ಮಾಡಿದ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬೇಕಾಗುತ್ತದೆ. ಅದು ಧಾರುಣವಾದ ಹತ್ಯೆ. ಚೈನಾ ಗಡಿಯಲ್ಲಿ ನಮ್ಮ ಸೈನಿಕರನ್ನು ನಿಲ್ಲಿಸಿಬಿಟ್ಟು, ಚೀನದವರ ಕೈಯಲ್ಲಿ ಗನ್ ಕೊಟ್ಟು ಹೇಗೆ ಹೊಡಿಸಿದರು, ಅದೇ ರೀತಿಯಾಗಿ ಪೊಲೀಸ್‌ನವರನ್ನು, ಆ ಗಡಿಯಲ್ಲಿ ನಿಲ್ಲಿಸಿ ಸರ್ಕಾರದವರು ಹೊಡಿಸಿದರು. ಅವರ ಮನೆಯ ಹೆಣ್ಣುಮಕ್ಕಳ ಕತೆ ಕೇಳಿದರೆ, ಯಾರೂ ಶಾಸಕರಾಗಿರುವುದಕ್ಕೆ ಗೌರವ ಬರುವುದಿಲ್ಲ, ಹೊಟ್ಟೆಪಾಡಿಗೆ ನೌಕರಿಗೆ ಸೇರಿಕೊಂಡು ಗಂಡನನ್ನು ಕಳೆದುಕೊಂಡವಲ್ಲಾ ಸ್ವಾಮಿ ಎಂದು ಅವರು ಹೇಳುತ್ತಾರೆ. ನೀವು 3 ಲಕ್ಷ 5 ಲಕ್ಷ ರೂಪಾಯಿ ಪರಿಹಾರವನ್ನು ಅವರಿಗೆ ಕೊಡಬಹುದು, ನೀವು ಯಾವ ಸ್ಥಿತಿಯಲ್ಲಿ ಅಲ್ಲಿ ಪೊಲೀಸ್‌ನವರನ್ನು ನಿಲ್ಲಿಸಿದ್ದೀರೆಂಬುದು ಬಹಳ ಮುಖ್ಯ. ನಾಗರೀಕ ಜಗತ್ತು ಇವತ್ತು ಬಳಸುತ್ತಿರುವ ಯಾವುದೇ ಶಸ್ತ್ರಾಸ್ತ್ರ ಇಲ್ಲ. ಒಂದೇ ಒಂದು ಎಕೆ 47 ಗನ್ ಬಿಟ್ಟರೆ, ಇನ್ನು ಮ್ಯೂಸಿಯಂನಲ್ಲಿಡಬೇಕಾದ ಎಲ್ಲಾ ಶಸ್ತ್ರಾಸ್ತ್ರಗಳನ್ನು ಕೊಟ್ಟು, ಒಂದು ಸಾರ್ವಜನಿಕವಾಗಿರುವ ಶಾಲೆಯಲ್ಲಿ, 30–32 ಜನ ಪೊಲೀಸ್‌ರನ್ನು ನೀವು ಬೀದಿಯಲ್ಲಿ ನಿಲ್ಲಿಸಿದ್ದೀರಿ, ಬ್ಯಾರಕೇಡ್ ಇಲ್ಲ, ಅವರು ಒಳಗಡೆ ನಿಂತುಕೊಂಡು ಅವರ ರಕ್ಷಣೆ ಮಾಡಿಕೊಂಡು ಯಾರು ಬರುತ್ತಾರೆ ಏನು ಮಾಡುತ್ತಾರೆಂದು ಕಾಯುವಂತಿಲ್ಲ, ಇಂಟಲಿಜೆನ್ಸ್

ಶೇಕಡ 100 ಇಲ್ಲವೇ ಇಲ್ಲ. ಅಲ್ಲಿ ಜನ ಎಷ್ಟು ನಿಸ್ತೇಜರಾಗಿದ್ದಾರೆಂದರೆ, ನಾವು ಊರಿನೊಳಗೆಲ್ಲಾ ಹೋದೆವು ಸರ್, ಏನ್ರಿ ಇಷ್ಟೆಲ್ಲಾ ನಡೆಯುತ್ತಿದ್ದರು, ಮಾನವೀಯತೆ ಅಲ್ಲವೇ, ಹೊರಗೆ ನೀವು ಬರಬೇಕಾಗಿತ್ತಲ್ಲವಾ, ರಕ್ಷಣೆ ಕೊಡಬಾರದಿತ್ತಾ ಪೊಲೀಸ್‌ನವರು ಮನುಷ್ಯರಲ್ಲವೇ ನಮಗೋಸ್ಕರ ಸೇವೆ ಮಾಡುತ್ತಿಲ್ಲವೇ ಎಂದು ಕೇಳಿದರೆ ಏನು ಹೇಳುತ್ತಾರೆಂದರೆ, 6.30 ರಿಂದ 8.30 ರವರೆಗೆ ನಕ್ಸಲೆಟ್ಸ್ ಟಾಮ್ ಟಾಮ್ ಹಾಕಿದರು. ನಿಮಗೂ ನಮಗೂ ಯಾವುದೇ ದ್ವೇಷವಿಲ್ಲ. ದಯಮಾಡಿ ಯಾರೂ ಆಚೆ ಬರಬೇಡಿ, ನಮಗೇನು ಬೇಕೋ ಅದನ್ನು ಮಾಡಿಕೊಂಡು ಹೋಗುತ್ತೇವೆಂದರು. ಆ ಟಾಮ್ ಟಾಮ್ ಸದ್ದು ಕೇಳಿಸಿತು. ಮತ್ತೆ ಕೇಳಿದ್ದು, ದೀಪಾವಳಿ ಹಬ್ಬದ ಸಮಯದಲ್ಲಿ ಪಟಾಕಿ ಹೊಡೆಯುತ್ತಾರಲ್ಲಾ ಆ ತರಹ ಸದ್ದು ಕೇಳಿಸಿದ್ದು ಬಿಟ್ಟರೆ, ನಾವು ಬೆಳಿಗ್ಗೆ 6.00 ಗಂಟೆವರೆಗೆ ಆಚೆಗೆ ಬರಲಿಲ್ಲ. ಆಳಕ್ಕೆ ಇಳಿದು ಏತಕ್ಕೆ ಈ ಸ್ಥಿತಿ ನಿರ್ಮಾಣವಾಗಿದೆ ಎಂದು ನಾವು ಕೇಳಿದೆವು ಸರ್ ಅಲ್ಲಿ ಒಂದು ಸಣ್ಣ ಸಮಸ್ಯೆ ಇತ್ತು. ಅರ್ರ್ಯಾಕ್ ಅನ್ನು ನಮ್ಮ ಊರಿನಲ್ಲಿ ಮಾರಬೇಡಿ ಎಂದು ಅವರು ಕೇಳಿದ್ದರು. ಅರ್ರ್ಯಾಕ್ ಮಾರಬೇಡಿ ಎನ್ನುವವರಿಗೆ, ಬಂದೂಕುಗಳನ್ನು ಪೊಲೀಸ್‌ನವರಿಗೆ ಕೊಟ್ಟು, ಒಬ್ಬ ಎಕ್ಸೈಸ್ ಕಂಟ್ರಾಕ್ಟರ್ ಪರವಾಗಿ ಪೊಲೀಸ್‌ನವರನ್ನು ಜೀಪ್‌ನಲ್ಲಿ ಕಳುಹಿಸಿ ಅರ್ರ್ಯಾಕ್ ಅನ್ನು ಇವರು ಮಾರಿಸಿದರು. ಅವರು ಅಲ್ಲಿ ಪೊಲೀಸ್‌ನವರು ರಕ್ಷಣೆ ಕೊಡುವುದು ಅರ್ರ್ಯಾಕ್‌ನವನಿಗಲ್ಲ, ನಮಗೆ ಕೊಡುವುದಕ್ಕಿರುವುದು ಎಂದು ಅರ್ರ್ಯಾಕನ್ನು ಕಿತ್ತುಕೊಂಡರು. ಬಂದೂಕು ಕಿತ್ತುಕೊಂಡು ನಾವು ಈ ದೇಶದ ಜನರೆಂದು ಹೇಳಿ ಕಳುಹಿಸಿಬಿಟ್ಟರು. ಪೊಲೀಸ್ ಇನ್‌ಸ್ಪೆಕ್ಟರ್ ಹೋಗಿಬಿಟ್ಟು ಮನೆ ಮನೆಯಲ್ಲಿರುವವರನ್ನೆಲ್ಲಾ ಎಬ್ಬಿಸಿ ಹೊಡೆದಿದ್ದಾರೆ. ಮನೆ ಮನೆಯಲ್ಲಿರುವವರನ್ನು ಎಳೆದುಕೊಂಡು ಬಂದು ಬಂದೂಕು ಕಿತ್ತುಕೊಂಡವರ್ಯಾರು ಹೇಳಿ ಎಂದು ಹೊಡೆದಿದ್ದಾರೆ. ಈ ದುಸ್ಸಾಹಸಕ್ಕೆ ಅವರು ಕೈ ಹಾಕಿದ್ದಕ್ಕೆ, ಇವತ್ತು ಪೊಲೀಸ್‌ನವರು ನಗ್ನರಾಗಿ ಸಾಯುತ್ತಿದ್ದರೂ ಅಳುವ ಸಾರ್ವಜನಿಕರೊಬ್ಬರೂ ಇಲ್ಲ. ಒಬ್ಬರಿಗೂ ಅವರ ಸಹವಾಸ ಬೇಕಾಗಿಲ್ಲ. ಏಕೆಂದರೆ ಎಲ್ಲರ ಮನೆಯವರನ್ನು ಹೊಡೆದರು. ಈ ಚಟುವಟಿಕೆಯಲ್ಲಿ ಯಾರಿದ್ದಾರೆ ಎಂದು ತಿಳಿದುಕೊಳ್ಳಲು ನಾವು ಪ್ರಯತ್ನ ಮಾಡಿದೆವು. ಆ ಊರಿನಿಂದ ಹೊರಗೆ ಹೋಗಿರುವವರು ಮೂರು ಜನರಿದ್ದಾರೆ. ಒಂದೇ ಕುಟುಂಬದ ಇಬ್ಬರು ಗಂಡಸರು ಒಬ್ಬರು ಹೆಂಗಸರು ಇದ್ದಾರೆ. ಏಕೆ ಹೋದರೆಂದರೆ? ಒಬ್ಬ ಹುಡುಗನನ್ನು ಚೆನ್ನಾಗಿ ಹೊಡೆದು ಎಳೆದುಕೊಂಡು ಹೋದರು. ನೀನು ನಕ್ಸಲೀಯರ ಗುಂಪಿಗೆ ಸೇರಿದ್ದೀಯಾ ನಿನ್ನಿಂದಲೇ ಇದೆಲ್ಲಾ ಆಗಿರುವುದೆಂದು. ಅವನು ಹೋದ ಮೇಲೆ ಅವನ ಹೆಂಡತಿ ಗಂಡನನ್ನು ಅನುಸರಿಸಿ ಹೋಗಲೇಬೇಕಾಯಿತು. ಅದೊಂದು ಪರಿಶಿಷ್ಟ ಜಾತಿಯ ಕುಟುಂಬ. ಪಿ.ಯು.ಸಿ. ಓದುತ್ತಿದ್ದ ಅವನ ತಮ್ಮನು, ಏನೂ ಕಾಣದವನನ್ನು ನಿನಗೆಲ್ಲಾ ಗೊತ್ತು ಹೇಳೆಂದು ಯದ್ವಾ ತದ್ವಾ ಹೊಡೆದುಬಿಟ್ಟರು ಅನಿವಾರ್ಯವಾಗಿ ಇವತ್ತು ಆ ಗುಂಪನ್ನು ಅವನು ಹೋಗಿ ಸೇರಿಕೊಂಡಿದ್ದಾನೆ. ಅನಿವಾರ್ಯವಾಗಿ, ಬೇರೆ ಏನೂ ಕಾರಣವಿಲ್ಲ. ಇದು ಬಿಟ್ಟರೆ ವೆಂಕಟಮ್ಮನಹಳ್ಳಿಗೂ, ಈ ನಕ್ಸಲ್ ಚಟುವಟಿಕೆಗೂ ಯಾವುದೇ ರೀತಿಯ ಸಂಬಂಧವಿಲ್ಲ. ಆ ಊರಿನಲ್ಲಿ ನಕ್ಸಲೈಟ್ಸ್ ಇಲ್ಲ, ಮಾವೋವಾದಿಗಳೂ ಇಲ್ಲ, ಟೆರರಿಸ್ಟೂ ಇಲ್ಲ, ಎಲ್‌ಟಿಟಿಇಗಳು ಇಲ್ಲ, ಆ ಊರಿನಲ್ಲಿರುವವರು ಅತ್ಯಂತ ಬಡತನದಲ್ಲಿ ಬದುಕಿರುವಂತಹ ದಟ್ಟದಾರಿದ್ರ್ಯದ ಹಿಂದೂಸ್ಥಾನದ ಜನಗಳು. ಇದು ನೋವಿನ ಸಂಗತಿ. ಆ ಊರಿನಲ್ಲಿ ಶೋಷಣೆ ಹೇಗೆ ನಡೆದಿದೆ? ನಿಮ್ಮ ಆಡಳಿತದಲ್ಲಿ ಎಲ್ಲಾ ಊರಿನಲ್ಲಿ ನಡೆದಿದೆ ಬಿಡಿ ನಿಮ್ಮ ಆಡಳಿತದಲ್ಲಿ ಆದರೆ ಆ ಊರಿನ ಬಗ್ಗೆ ಹೇಳಬೇಕೆಂದರೆ, ಯಾರೋ ಹೆಸರಿಗೆ ಮನೆ ಕೊಟ್ಟರೆ, ಆ ಮನೆ ಕೊಡಿಸಿದ ದಳ್ಳಾಳಿ ಅವನೇ ಮನೆಗಳನ್ನು

ಇಟ್ಟುಕೊಂಡಿದ್ದಾನೆ ಪಲಾನುಭವಿ ಆ ಮನೆಗೆ ಬಾಡಿಗೆ ಕೊಟ್ಟುಕೊಂಡು ಇವತ್ತು ವಾಸ ಮಾಡುತ್ತಿದ್ದಾನೆ. ನಾನು ವೆಂಕಟಮ್ಮನಹಳ್ಳಿಗೆ ಪ್ರಸ್ತುತವಾಗಿ ಒಂದು ಸೂಕ್ಷ್ಮವಾದ ವಿಷಯವನ್ನು ನಾನು ಈ ಸಂದರ್ಭದಲ್ಲಿ ಮಾತನಾಡುವುದಕ್ಕೆ ಇಚ್ಛೆಪಡುತ್ತೇನೆ, ವೆಂಕಟಮ್ಮನಹಳ್ಳಿ ಕರ್ನಾಟಕದಲ್ಲಿರುವುದಾದರೆ, ಒಂದು ನೂರು ಮೀಟರ್ ಧಾಟಿದರೆ ಆಂಧ್ರಪ್ರದೇಶ ಆರಂಭವಾಗುತ್ತದೆ. ಈ ಬಗ್ಗೆ ಮುಖ್ಯಮಂತ್ರಿಗಳು ಗಮನ ಕೊಡಬೇಕು. ವೆಂಕಟಮ್ಮನಹಳ್ಳಿಗೆ ಸೇರಿದ ಸುಮಾರು ಜಮೀನು ಕೃಷಿ ಒಡೆತನಕ್ಕೆ ಸೇರಿದ ಜಮೀನು ಆಂಧ್ರಪ್ರದೇಶದಲ್ಲಿದೆ. ಅದು ಆಂಧ್ರಪ್ರದೇಶದಲ್ಲಿರುವ ಒಂದೇ ಕಾರಣಕ್ಕೆ ಇವರು ಅಲ್ಲಿ ಸಾಲ ತೆಗೆದುಕೊಳ್ಳುವಂತಿಲ್ಲ. ಆ ಜಮೀನನ್ನು ಅಭಿವೃದ್ಧಿ ಮಾಡುವಂತಿಲ್ಲ, ಯಾರೇ ಒಬ್ಬ ಆಫೀಸರ್ ಕೂತು ಇವತ್ತು ಅವರಿಗೆ ಇವರಿಗೆ ಲಯಸನ್ ಮಾಡಿ ಈ ಸ್ಥಿತಿಯನ್ನು ನಿಭಾಯಿಸುವುದಕ್ಕೆ ಪ್ರಯತ್ನ ಮಾಡಲೇ ಇಲ್ಲ. ಪೋಲೀಸ್‌ನವರು ಏತಕ್ಕೆ ಇಡುತ್ತೇವೆಂದರೆ ಬಾರ್ಡರ್‌ನಿಂದ ನಕ್ಸಲೇಟ್ಸ್ ನಮ್ಮ ರಾಜ್ಯದೊಳಗೆ ಬರಬಾರದೆಂದು. ಏಕೆ? ಅದು ನಮಗೆ ಗೊತ್ತು, ಪಕ್ಕದಲ್ಲಿ, ಇವತ್ತು ಆಂಧ್ರಪ್ರದೇಶದ ಪೆನುಗೊಂಡ ಕ್ಷೇತ್ರದ ಶಾಸಕರಾದ ಪೆರಿಟಾಲ್ ರವಿಯವರು ಏನು ಕೊಲೆಯಾದರು, ಅವರ ಸ್ವಂತ ಊರು ಅಲ್ಲಿಂದ 3 ಕಿಲೋ ಮೀಟರ್ ದೂರದಲ್ಲಿದೆ. ಆ ಬಾರ್ಡರ್ ಧಾಟಿದರೆ, ನಂತರದ ಊರೇ ಅವರದು. ಪೆನುಗೊಂಡ ಕ್ಷೇತ್ರ, ಅನಂತಪುರ ಜಿಲ್ಲೆ ನಕ್ಸಲೇಟ್ ಚಟುವಟಿಕೆಗೆ ಬಹಳ ಹೆಸರುವಾಸಿಯಾದ ಜಿಲ್ಲೆ ಮತ್ತೆ ಅವರು ಪೆನುಗೊಂಡ ಕ್ಷೇತ್ರದಿಂದ ಮಡಕಸಿರಾಕ್ಕೆ ಬರಬೇಕೆಂದರೆ ನಮ್ಮ ಪಾವಗಡವನ್ನು ಧಾಟಿ ಬರಬೇಕು. ಅವರು ಎಲ್ಲಾ ಚಟುವಟಿಕೆಗಳಿಗೆ ಪಾವಗಡವನ್ನು ಇವತ್ತು ಬಳಸಲೇಬೇಕಾದಂತಹ ಪರಿಸ್ಥಿತಿ ಇದೆ. ಹಿಂದೆ ಒಂದ್ಸಲ ಪಾವಗಡದಲ್ಲಿ ಏನಾಗಿತ್ತು? ಮುತ್ತು ರತ್ನ ಸಿಗುತ್ತವೆ, ಗುಡ್ಡಗಳಲ್ಲೆಲ್ಲ ಏನೇನೋ ಬಹಳ ಬಾಚಿಕೊಂಡು ಹೋಗುತ್ತಾ ಇದ್ದಾರೆ ಅಂತ ಅಡಗುತಾಣಗಳನ್ನು ಮಾಡಿಕೊಂಡಿದ್ದರು ಅಲ್ಲಿ. ಜನವೆಲ್ಲಾ ನುಗ್ಗುವರು ಅಲ್ಲಿಗೆ. ಜಾತ್ರೆ ಸಾರ್ ಮಣ್ಣು ಬಾಚುವುದಕ್ಕೆ, ಇಲ್ಲೇನೋ ಇದೆ ಅಂತ ಹೇಳಿ ಆಗಿನಿಂದ ಪಾವಗಡದಲ್ಲಿ ಒಂದು ದೊಡ್ಡ ಹುನ್ನಾರ ಸ್ಟಾರ್ಟಾಯಿತು. ಅಲ್ಲಿ ಕೂಡ ಎರಡು ವರ್ಗ. ಜಾಸ್ತಿ ಜಮೀನಿರುವವರ ಒಂದು ವರ್ಗ, ಜಮೀನಿಲ್ಲದಿದ್ದವರದೊಂದು ವರ್ಗ. ಹೇಗೆ ಆಂಧ್ರ ಪ್ರದೇಶದಲ್ಲಿ ಕಮ್ಮರೆಡ್ಡಿ ಅಂತ ನಾವು ಕರೆಯುತ್ತೇವೆ ಹಾಗೆ ಆ ಭಾಗದಲ್ಲಿ ಅದೇ ಸ್ಥಿತಿ ನಿರ್ಮಾಣವಾಗಿದೆ. ಇಲ್ಲಿ ಅಂತಹ ವೈಷಮ್ಯ, ಅಥವಾ ಕರ್ನಾಟಕ ಸರ್ಕಾರಕ್ಕೆ ಆಘಾತಕಾರಿ ಸ್ಥಿತಿ ನಿರ್ಮಾಣ ಮಾಡಬೇಕು ಅಂತ ಆ ಭಾಗದ ಜನಗಳಿಗಿಲ್ಲ. ಅಲ್ಲಿ ನಡೆಯುವ ಪ್ರತಿಯೊಂದು ಚಟುವಟಿಕೆಗಳ ಪ್ರತಿಬಿಂಬ ಅಲ್ಲಿ ಇಲ್ಲ. ಅಲ್ಲಿ ನಡೆಯುವುದರ ಪರಿಣಾಮ ಇಲ್ಲಿ ರಿಫ್ಲೆಕ್ಟ್ ಆಗುತ್ತದೆ. ಇದನ್ನು ತಡೆಯುವುದಕ್ಕೆ ಅಂತ ಇವರೊಂದು ಪೋಲೀಸ್ ಚಾಕಿಯನ್ನು ಅಲ್ಲಿ ಹಾಕಿದರು. 31, 32 ಜನ ಪೋಲೀಸರನ್ನು ಹಾಕಿ ಬೇರೆ ಎಲ್ಲೂ ಪೋಸ್ಟಿಂಗ್ ಕೊಡಲಾರದವರನ್ನು ತೆಗೆದುಕೊಂಡು ಹೋಗಿ ಅಲ್ಲಿ ಕೂರಿಸಿಬಿಟ್ಟು, ಸಾರ್ ಈಗೇನಾದರೂ ನೀವು ಸೈರನ್ ಕೊಟ್ಟು ಓಡು ಅಂದರೆ ಅವರ ಜೀಪ್ ಜೊತೆ ನಾವು ಓಡಬಹುದು. ಖಂಡಿತ ಓಡಬಹುದು ಸ್ವಲ್ಪ ಚೆನ್ನಾಗಿ ಪ್ರಾಕ್ಟೀಸ್ ಇರುವವರು ಆ ಪೋಲೀಸ್ ಜೀಪ್‌ಗಳ ಜೊತೆ ಓಡಬಹುದು. ಅಂಥಾ ಸ್ಥಿತಿಯಲ್ಲಿರುವ ಜೀಪ್‌ಗಳು, ಎತ್ತಿಕೊಂಡು ಅವನ್ನೆಲ್ಲಾ ಮಾಲಿಶ್ ಮಾಡಿ ನಾನು ಟ್ರಿಗರ್ ಆನ್ ಮಾಡುತ್ತೇನೆ ಅನ್ನುವುದರೊಳಗೆ ಸತ್ತುಹೋಗುವಂತಹ ಬಂದೂಕುಗಳು ಇಂಥ ವ್ಯವಸ್ಥೆಯನ್ನು ನೀವು ಅಲ್ಲಿಗೆ ಕೊಟ್ಟು ಕೊಂದಿರಿ ಪೋಲೀಸರನ್ನು. ಅಮಾಯಕರನ್ನು ನಿಲ್ಲಿಸಿಕೊಂಡು ಕೊಂದಿದ್ದಾರೆ ಸಾರ್. ಬಯಲಲ್ಲಿ ನಿಲ್ಲಿಸಿಕೊಂಡು ಹೊಡೆದಿದ್ದಾರೆ 300 ಜನ, ನಾಚಿಕೆಗೇಡಿನ ಸಂಗತಿ ಇವತ್ತು ಸರ್ಕಾರಕ್ಕೆ ಇದು. ಒಬ್ಬ ಮಂತ್ರಿ ಹೋಗಿಲ್ಲ. ವೆಂಕಟಮ್ಮನಹಳ್ಳಿಗೆ

ಇದುವರೆಗೆ. ಉಸ್ತುವಾರಿ ಸಚಿವರು ಪಾವಗಡಕ್ಕೆ ಹೋಗಿ ವಾಪಸ್ ಬಂದರು. ಅಥವಾ ಹೋಗಿದ್ದಕ್ಕೆ ದಾಖಲೆ ಇದ್ದರೆ ಹೇಳಿ ನಾನು ನನ್ನ ಮಾತನ್ನು ಹಿಂದಕ್ಕೆ ತೆಗೆದುಕೊಳ್ಳುತ್ತೇನೆ, ಪಾವಗಡ ಐಬಿಯಲ್ಲಿ ಕೂತುಕೊಂಡು ಒಂದು ಪ್ರೆಸ್‌ಮೀಟ್ ಆಯಿತು, ಆ ಊರಿಗೆ ಸರ್ಕಾರದ ಪರವಾಗಿ ಯಾರಾದರೂ ಹೋಗಿದ್ದಾರಾ ಅಂದರೆ ಸೊನ್ನೆ. ಎರಡನೆಯದು ಈ ಪೊಲೀಸರಿಗೆ ಯಾರಾದರೂ ಇವತ್ತು ಸಮಾಧಾನದ ಮಾತು ಆಡಿದ್ದಾರಾ ಅಂತ ಕೇಳಬೇಕಾಗುತ್ತದೆ. ಆ ಕುಟುಂಬಗಳು ಎಲ್ಲೆಲ್ಲಿವೆ ಒಬ್ಬರನ್ನೂ ನಾವು ಗುರ್ತಿಸಲಿಲ್ಲ. ಪರಿಹಾರ ಘೋಷಣೆ ಮಾಡಿರುವುದು ಬಿಟ್ಟರೆ ಕರೆದು ನಾವು ಎರಡು ಒಳ್ಳೆ ಮಾತು ಆಡಲೇ ಇಲ್ಲ ನಾಳೆ ಈ ಪೊಲೀಸರಿಂದ ನೀವು ರಾಜ್ಯದ ರಕ್ಷಣೆ ಹೇಗೆ ನಿರೀಕ್ಷಿಸುತ್ತೀರಿ? ನಾಳೆ ಇದೇ ಪೊಲೀಸ್ ಫೋರ್ಸ್ ನಾನು ಈ ರಾಜ್ಯಕ್ಕೋಸ್ಕರ ತ್ಯಾಗ ಮಾಡಬೇಕು ಅಂತ ಫೈಟ್ ಮಾಡುವುದಕ್ಕೆ ನೀವೇನು ಸ್ಥಿತಿಯನ್ನು ನಿರ್ಮಾಣ ಮಾಡಿದ್ದೀರಿ? ಮತ್ತೆ ಇಂತಹ ಕಡೆ ಒಂದು ಶಸ್ತ್ರಸಜ್ಜಿತ ಪ್ಲೆಟೂನ್ ಹಾಕಬೇಕಾದರೆ ಟ್ರೈನಿಂಗ್ ಕೊಟ್ಟಿದ್ದೀರಾ? ಅವರಿಗೇನಾದರೂ ಇನ್‌ಫರ್ಮೆಂಟ್ಸ್ ಇಟ್ಟಿದ್ದೀರಾ? ಅವರಿಗೇನಾದರೂ ಇಂಟೆಲಿಜೆನ್ಸ್ ವ್ಯವಸ್ಥೆ ಕೊಟ್ಟಿದ್ದೀರಾ? ಸುಮ್ಮನೆ ನಿಂತುಕೊಳ್ಳುವುದು ಹೊಡೆಸಿಕೊಳ್ಳುವುದು ಸಾಯುವುದು ಪುಣ್ಯ ಸಾರ್, ಒಂದೇ ಒಂದು ಟ್ರೈನಿಂಗ್ ಇತ್ತು ಅವರು ಕದ್ದು ಓಡಿ ಹೋಗುವುದು ಹೆಂಚು ತಕ್ಕೊಂಡು ಬಂದೂಕ ಹೊಡೆದರೆ ಆ ಆರ್‌ಸಿಸಿ ಬಿಲ್ಡಿಂಗಿನಿಂದ ಬಂದು ಬುಲೆಟ್ ಇವರಿಗೆ ತಗಲುತ್ತದೆ ಎಂಬ ಸ್ಥಿತಿಯಲ್ಲಿರುವ ಕಟ್ಟಡವದು, ನಾನು ಫೋಟೋನೆಲ್ಲಾ ಇಟ್ಟುಕೊಂಡಿದ್ದೆ ಅಕಸ್ಮಾತ್ ಮರೆತುಬಂದೆ ಅಧ್ಯಕ್ಷರೇ, ನಿಮಗೆ ಕಳುಹಿಸಿ ಕೊಡುತ್ತೇನೆ. ಇಂಥ ಹೀನ ಸ್ಥಿತಿಗೆ ನಮ್ಮ ಪೊಲೀಸರನ್ನು ಅವರ ಕಾರ್ಯಪಡೆಯನ್ನು ತಳ್ಳಿದ್ದಕ್ಕೆ ಸರ್ಕಾರ ಬಿಟ್ಟು ಇನ್ಯಾರೂ ಕಾರಣ ಅಲ್ಲ ಅಧ್ಯಕ್ಷರೇ You have created the whole mess in Venkatammanahally. ಸರ್ಕಾರವೇ ಒಂದು ಸೃಷ್ಟಿ ಮಾಡಿದಂತಹ ಸ್ಥಿತಿ ಬಿಟ್ಟರೆ ಸತ್ಯವಾಗಿಯೂ ಕರ್ನಾಟಕದ ಜನಗಳಲ್ಲಾಗಲಿ ಆಂಧ್ರ ಪ್ರದೇಶದ ಜನಗಳಲ್ಲಾಗಲಿ ಅಲ್ಲಿ ನಕ್ಸಲ್‌ಸ್ಥಿತಿ ಆಗುವಂತಹ ಸ್ಥಿತೀನೇ ಇಲ್ಲ. ಎರಡನೆಯದು ಸಿದ್ಧಾಂತ, ನಾನು ಅದಕ್ಕೆ ಹೋಗುವುದಿಲ್ಲ. ಮಾನ್ಯ ಶ್ರೀರಾಮರೆಡ್ಡಿಯವರು ಹೇಳುತ್ತಿದ್ದರು, ನಕ್ಸಲೈಟ್ಸ್ ಬೇರೆ, ಮಾವೋವಾದಿಗಳೇ ಬೇರೆ, ನಕ್ಸಲೈಟ್ ಅಂತ ಹೇಳಿಕೊಂಡು ಬೇರೆಯವರು ಮಾಡುವ ಎಲ್ಲಾ ಕೃತ್ಯಗಳನ್ನು ನಕ್ಸಲ್ ಗುಂಪಿಗೆ ಹಾಕುವುದು ಗೌರವವಲ್ಲ ಅಂತ. ನಾನೂ ಕೂಡ ಒಪ್ಪುತ್ತೇನೆ. ಇದೆಲ್ಲ ತಾತ್ವಿಕ ಸಿದ್ಧಾಂತ. ನಕ್ಸಲೈಟ್ಸ್ ಯಾರದೋ ಪ್ರಾಣ ಕೊಡುವುದಕ್ಕೆ ಆಗಿರುವ ಗುಂಪು ಅಂತ ನಾವೆಲ್ಲೂ ಓದಲಿಲ್ಲ. ಶೋಷಣೆ ತಪ್ಪಿಸಬೇಕು. ದಬ್ಬಾಳಿಕೆ ತಪ್ಪಿಸಬೇಕು, ಯಾರ್ಯಾರು ಇನ್ನೂ ರಾಜಮಹರಾಜರ ಹಾಗೆ ವರ್ತಿಸುತ್ತಾ ಇನ್ಯಾರನ್ನೋ ಗುಲಾಮರಂತೆ ಇಟ್ಟುಕೊಂಡಿರುವವರ ಸ್ವಲ್ಪ ಅಂತರ ಕಡಿಮೆ ಮಾಡಬೇಕು ಅಂತ ಹೊರಟ್ಟಂಥ ಒಂದು ಸಿದ್ಧಾಂತ ಅಂತ ನಾನು ತಿಳಿದುಕೊಂಡಿದ್ದೇನೆ. ಈಗ ನಡೆಯುತ್ತಿರುವ ಕೃತ್ಯ ಎಲ್ಲಾ anti-social elements in the State, ಯಾರದೋ ಹೆಸರಲ್ಲಿ ಮಾಡಬಾರದ ಕೆಲಸ ಮಾಡಿ ಏನೋ ಒಂದು ಲೇಬಲ್ ಹಾಕಿಕೊಂಡು ಬಿಡುವುದು. ಇದರ ಫರಿಣಾಮ ಏನಾಗಿದೆ ಸಾರ್ ಇವತ್ತು ಜನಗಳು ಆಚೆ ಬರುವುದಕ್ಕೆ ಆಗುತ್ತಾ ಇಲ್ಲ. ಪೊಲೀಸರೇ ಹೇಳುತ್ತಾರೆ ನೀವು ಅಲ್ಲಿಗೆ ಹೋಗಬೇಡಿ, ಅಲ್ಲಿ ರಕ್ಷಣೆ ಇಲ್ಲ, ನೆಲಬಾಂಬ್ ಇಟ್ಟಿದ್ದಾರೆ, ಎಲ್ಲೋ ಕೂತುಕೊಂಡು ಹಚ್ಚುತ್ತಾರೆ, ರಿಮೋಟ್ ಕಂಟ್ರೋಲಿದೆ. ಯಾವುದೇ ಕಾರಣಕ್ಕೆ ಕರ್ನಾಟಕ ಪೊಲೀಸ್ ವೆಂಕಟಮ್ಮನಹಳ್ಳಿ ಧಾಟಿ ಪಕ್ಕದ ಗಡಿ ಒಳಕ್ಕೆ ಹೋಗುವ ಸ್ಥಿತಿ ಇಲ್ಲ ಅಧ್ಯಕ್ಷರೇ. ಪೊಲೀಸರನ್ನು ಕಂಡರೆ ಯಾವತ್ತು ಮುಗಿಸಿ ಬಿಡುತ್ತಾರೋ ಜನ ಎಂಬ ಪರಿಸ್ಥಿತಿಯನ್ನು ನಾವು ನಿರ್ಮಾಣ ಮಾಡಿಕೊಂಡಿದ್ದೇವೆ ಎನ್ನುವ ಭಾವನೆ

ಬಂದಿದೆ. ನನಗೆ ಕೂಡ ಹೋಗಕೂಡದು ಅಂದರು, ನಾನು ಹೋಗಿದ್ದೆ ಸನ್ಮಾನ್ಯ ಪರಿಟಾಲ ರವಿ ಮನೆಗೆ ನಾನು ಹೋಗಿಬಂದೆ, ಅವರು ಶಾಸಕರು, ಸತ್ತು ಹೋಗಿದ್ದಾರೆ ಅಲ್ಲಿ ಹೋದ ಮೇಲೆ ಹೋಗಬೇಕು ಅಂತ. ನನಗೆ ಬಹಳ ಹೇಳಿದರು, ಹೋಗಬೇಡಿ ಹೋಗಬೇಡಿ ಅಲ್ಲಿ ಬಹಳ ಏನೋ ಆಗಬಾರದ್ದು ಆಗಿಬಿಡುತ್ತದೆ ನಿಮಗೆ ಅಂತ. ಏನು ಆಗುತ್ತ ರೀ ಅಂದೆ, ಅಲ್ಲಿನ ಜನ ನನಗೆ ಬಂದು ಹೇಳಿದರು ನೀವು ಹೋಗಿ ಸಾರ್, ಏನೂ ಆಗುವುದಿಲ್ಲ ಈ ಸ್ಥಿತೀನ ನಿರ್ಮಾಣ ಮಾಡಿಕೊಂಡು ಕೂತುಬಿಟ್ಟಿದ್ದಾರೆ ಇಲ್ಲಿ. ನೂರಾರು ಜನ ಹೇಳಿದರು, ನೀವು ಹೋಗಿ ಸಾರ್, ನಾವು ಬರುತ್ತೇವೆ ನಿಮಗೇನಾದರೂ ಆದರೆ ಅಂದರು. ಏನೂ ಆಗಲಿಲ್ಲ. ಅವರ ಮನೆಗೆ ಹೋಗಿ ಫಸ್ಟ್‌ಕ್ಲಾಸಾಗಿ ಕಾಫಿ ಕುಡಿದುಕೊಂಡು ಬಂದೆ. ಅಲ್ಲೇನಾಗಿದೆ? ಆ ರಾಜ್ಯದ ವಿಷಯ ಮಾತನಾಡುವುದು ಬೇಡ. ಅಲ್ಲಿ ನಡೆದ ಘಟನೆಗೆ ಪೋಲೀಸರ ಮೇಲೆ ಅಲ್ಲಿ ಜನರಿಗೆ ರೋಷ ಬಂದುಬಿಟ್ಟಿದೆ. ಅದನ್ನೇ ನಮ್ಮ ರಾಜ್ಯದ ಪೋಲೀಸರು ದೊಡ್ಡದು ಮಾಡಿಕೊಂಡು ನೀವು ಹೋಗುವ ಹಾಗಿಲ್ಲ ಹೊಡೆದು ಹಾಕುತ್ತಾರೆ ಅನ್ನುತ್ತಾರೆ. ಒಬ್ಬ ಸರ್ಕಲ್ ಇನ್‌ಸ್ಪೆಕ್ಟರ್ ಮಾಡಬಾರದ ರೀತಿಯಲ್ಲಿ ಆ ಊರಲ್ಲಿ ವರ್ತಿಸಿದ್ದಾರೆ, ಸಿಕ್ಕಸಿಕ್ಕ ಹುಡುಗರನ್ನು ಹಿಡಿದುಕೊಂಡು ಹೋಗಿ ಹೊಡೆದ ಅವನ್ನ ಎಳೆದುಕೊಂಡು ಹೋಗಿ ಹೊಡೆದಿದ್ದಾರೆ, ಹೀಗಾದರೆ ನಾವು ಹೇಗೆ ಸಹಕರಿಸುವುದು ಎಂದು ಜನ ಕೇಳುತ್ತಾರೆ ಪಾಪ ಈಗ ಬಂದಿರುವ ಸರ್ಕಲ್ ಇನ್‌ಸ್ಪೆಕ್ಟರನ್ನು ಅಷ್ಟೇ ಪ್ರಮಾಣದಲ್ಲಿ ಜನ ಒಪ್ಪುತ್ತಾರೆ. ಇಲ್ಲ, ಇಲ್ಲ, ಕಲ್ಲಪ್ಪ ಅಂತ ಇನ್‌ಸ್ಪೆಕ್ಟರ್ ಬಂದಿದ್ದಾರೆ, ಆತನಂಥವರೇ ಇದ್ದರೆ ನಮಗೆ ಯಾವ ಬಾಧೇನೂ ಇರ್ಲಿಲ್ಲ. ಹಿಂದಿದ್ದ ಇನ್‌ಸ್ಪೆಕ್ಟರ್ ನಮಗೆ ಕೊಟ್ಟಿರುವ ಕಿರುಕುಳ ಸಹಿಸಿಕೊಂಡು ನಾವು ಯಾವ ರೀತಿ ಪೋಲೀಸರಿಗೆ ಸಪೋರ್ಟ್ ಮಾಡಲಿ ಅಂತ. ಇದನ್ನು ಸರ್ಕಾರ ಚಿಂತನೆ ಮಾಡಲಿ. ಸಾರ್ ಇದಕ್ಕೆ ಎರಡನ್ನು ನಾನು ಸಜೆಸ್ಟ್ ಮಾಡುತ್ತೇನೆ. ಒಂದು, ಜನಗಳ ಮೂಲಭೂತ ಸಮಸ್ಯೆ ಅರ್ಥ ಮಾಡಿಕೊಂಡು ಪರಿಹಾರ ಕಂಡುಹಿಡಿಯಬೇಕು. ಹೇಗಾದರೂ ಕಂಡುಹಿಡಿಯಬೇಕು. ಸಾರ್ ಆ ಭಾಗದಲ್ಲಿ ವಾಸ ಮಾಡುವವರ ಬಗ್ಗೆ ನಿಮಗೆ ಕಲ್ಪನೆ ಇರಬೇಕು. ಒಂದು ಬ್ಯಾಂಕ್‌ನಲ್ಲಿ ಇವತ್ತು ಅವರು ಸಾಲ ತೆಗೆದುಕೊಳ್ಳುವ ಹಾಗಿಲ್ಲ. ಸಿಗುವುದಿಲ್ಲ. ನಿನ್ನ ಹೋಲ್ಡಿಂಗ್ ಆಂಧ್ರದಲ್ಲಿದೆ ಮನೆ ಕರ್ನಾಟಕದಲ್ಲಿದೆ, ಸಹಕಾರ ಬ್ಯಾಂಕ್ ವ್ಯಾಪ್ತಿಗೇ ಬರುವುದಿಲ್ಲ, ಕಮರ್ಶಿಯಲ್ ಬ್ಯಾಂಕಿನವರು ನಿಮ್ಮದು ಗ್ಯಾರಂಟಿ ಇಲ್ಲ, ಲಿಟಿಗೇಶನ್ ಪ್ರಾಬ್ಲಂ ಆಗುತ್ತದೆ. ಯಾವ ಕೋರ್ಟಿನಲ್ಲಿ ಕೇಸ್ ಹಾಕುವುದು ಅಂತ ಲೋನೇ ಕೊಡುವುದಿಲ್ಲ. ಲೋನ್ ತೆಗೆದುಕೊಳ್ಳುವುದಕ್ಕೆ ಶಕ್ತಿ ಇಲ್ಲ, ಇನ್ನು ಬಯಲು ಪ್ರದೇಶ ಮಳೆ ಬೀಳುವುದಿಲ್ಲ. ಶೇಂಗಾ ಬಿಟ್ಟು ಬೇರೆ ಬೆಳೆ ಹಾಕುವುದಕ್ಕೆ ಆಗುವುದಿಲ್ಲ. ಅವರಿಗೆ ವರ್ಷದಲ್ಲಿ ಎರಡರಿಂದ ಮೂರು ಒಳ್ಳೆ ಬೆಳೆ ಬರಲೇ ಇಲ್ಲ ಶಾಲೆಯನ್ನು ಇವತ್ತು ಪೋಲೀಸರಿಗೆ ವಹಿಸಿಕೊಟ್ಟ ಘನತೆವೆತ್ತ ಸರ್ಕಾರದವರು ಇಡೀ ಶಾಲೆಯನ್ನು ಒಂದು ದೇವಸ್ಥಾನದಲ್ಲಿ ನಡೆಸುತ್ತಿದ್ದಾರೆ. ಅಲ್ಲಿ ಕೂಡ ಇಂಥವರು ಬರಬೇಕು ಇಂಥವರು ಬರಬಾರದು ಅನ್ನುವ ಸ್ಥಿತಿ ನಿರ್ಮಾಣ ಮಾಡಿದ್ದಾರೆ. ಶಾಲೆಯನ್ನು ದೇವಸ್ಥಾನದಲ್ಲಿ ನಡೆಸಿದರೆ ಎಲ್ಲಾ ಜನಾಂಗದವರು ಹೋಗುವುದಕ್ಕೆ ಆಗುತ್ತದಾ ಅಂತ ತಾವೇ ತೀರ್ಮಾನಿಸಿ. ಅವರು ಹೇಳಿದರು, ನೋಡಿ ಶಾಲೆ ಎಲ್ಲಿ ನಡೆಯುತ್ತಿದೆ, ಅಲ್ಲಿದ್ದ ಟೀಚರನ್ನು ಕರೆದು ನಿಲ್ಲಿಸಿಕೊಂಡು ಫೋಟೋ ತೆಗೆಸಿದ್ದಾಯ್ತು. ಇದು ವೆಂಕಟಮ್ಮನಹಳ್ಳಿಯಲ್ಲಿ ನಾವೇ ಮಾಡಿದಂತಹ ಸೃಷ್ಟಿ. ನಾನು ಒತ್ತಿ ಹೇಳಲಿಕ್ಕೆ ಇಷ್ಟಪಡುತ್ತೇನೆ. ವೆಂಕಟಮ್ಮನಹಳ್ಳಿ ಜನಕ್ಕೂ ಈ ಘಟನೆಗೂ ಯಾವುದೇ ರೀತಿ ನೇರ ಸಂಬಂಧ ಇಲ್ಲ ನೀವೇನು ಪೋಲೀಸ್ ಚೌಕಿ ಹಾಕಿದ್ದಿರಿ ನೀವು ಎಲ್ಲೋ ಯಾರನ್ನೋ ಇಬ್ಬರನ್ನು ಚಟುವಟಿಕೆ ಮಾಡುತ್ತಾ ಇದ್ದಾರೆ ಅಂತ ಹೊಡೆದಿರಿ ಆ ಸೇಡಿಗೆ

ಸಾರಾಸಗಟು ಬಯಲಲ್ಲಿ ನಿಂತಿದ್ದವರನ್ನು 200-300 ಜನ ಬಂದು ಹೊಡೆದುಹೋದರು. ಇನ್ನೊಂದು ಮಾಹಿತಿ ಪ್ರಕಾರ ವೆಪನ್ಸ್ ಕದಿಯುವುದು, ಯಾವುದೋ ಸಿಕ್ಕಲಿ ಹೊತ್ತುಕೊಂಡು ಹೋಗಬೇಕು ಒಂದು ಕಾರಣ, ಬಂದೂಕ ಎತ್ತಿಕೊಳ್ಳಿ ಅಂತ ಅವರು ಸಿಕ್ಕಿ ಸಿಕ್ಕಿದ್ದನ್ನೆಲ್ಲಾ ಬಾಚಿಕೊಂಡು ಹೋಗಿ ಬಿಟ್ಟಿದ್ದಾರೆ ಅಧ್ಯಕ್ಷರೇ ಏಳೆಂಟು ವ್ಯಾನಿನಲ್ಲಿ ಬಂದು. ದಾರಿಯಲ್ಲಿ ಹೋಗುತ್ತಿದ್ದವರನ್ನು ನಿಲ್ಲಿಸಿ ವ್ಯಾನನ್ನು ಕಿತ್ತುಕೊಂಡು ಬಂದು. ಈ ಎಲ್ಲಾ ಇಂಟೆಲಿಜೆನ್ಸ್ ನಿಮಗಿರಲಿಲ್ಲವಾ? ಯಾಕೆ ಅಲ್ಲಿದ್ದ ಇಬ್ಬರು ಜವಾಬ್ದಾರಿಯುತ ಪೊಲೀಸ್ ಆಫೀಸರು ರಜೆ ಮೇಲೆ ಏಕೆ ಹೋಗಿದ್ದರು? ಈ ತನಿಖೆ ಆಗಬೇಕಾಗಿತ್ತು. ಇದರ ವರದಿ ಇಲ್ಲಿ ಬರಬೇಕಾಗಿತ್ತು, ಬರಲಿಲ್ಲ. ನಮ್ಮ ಮಾಹಿತಿ ಪ್ರಕಾರ ಎರಡು ದಿವಸ ಮೊದಲೇ ಅಲ್ಲಿ ಏನೋ ಒಂದು ಟೆನ್ಷನ್ ಕ್ರಿಯೇಟಾಗುತ್ತದೆ ಎಂಬ ವರದಿ ಇತ್ತು. ಎರಡು ದಿವಸ ಮೊದಲೇ ಅಲ್ಲಿನ ಜನ ನಮ್ಮ ಊರಿನಲ್ಲಿ ಏನೋ ಆಗಬಾರದು ಆಗುತ್ತದೆ ಎಂಬ ಭೀತಿಯಲ್ಲಿದ್ದರು. ಗಾಬರಿಯಲ್ಲಿದ್ದರು. ಬಾಗಿಲು ತೆರೆದು ಆಚೆ ಬರುವ ಸ್ಥಿತಿಯಲ್ಲೇ ಇರಲಿಲ್ಲ ಯಾರಿಗೆ ಏನಾಗುತ್ತದೋ ಅಂತ. ಇಷ್ಟೆಲ್ಲ ಇದ್ದೂ ಇಂಟೆಲಿಜೆನ್ಸನ್ನು ನೂರಕ್ಕೆ ನೂರು ನಿಷ್ಕ್ರಿಯೆ ಮಾಡಿಸಿ ಇವತ್ತೊಂದು ಧಾರುಣ ಕೃತ್ಯ ನನ್ನ ಜಿಲ್ಲೆಯಲ್ಲಿ ನಡೆದಿರುವುದಕ್ಕೆ ನಾನು ನಿಜವಾಗಿಯೂ ತಲೆಬಾಗಿಸಬೇಕಾಗುತ್ತದೆ, ಇದು ಇಡೀ ವೆಂಕಟಮ್ಮನಹಳ್ಳಿ ಜನಗಳು ತಲೆತಗ್ಗಿಸುತ್ತಿದ್ದಾರೆ ಇವತ್ತು. ನಮ್ಮೂರಿಗೆ ಇದ್ಯಾಕೆ ಈ ಸ್ಥಿತಿ ಬಂತು, ನಾವು ಯಾವ ಪಾಪ ಮಾಡಿದ್ದೇವೆ ನಮಗೂ ನಕ್ಸಲ್ ಚಟುವಟಿಕೆಗೂ ಏನು ಸಂಬಂಧ ಅಂತ ಜನ ಕೇಳುತ್ತಾರೆ, ಏನೂ ಸಂಬಂಧವೇ ಇಲ್ಲ ಯಾವುದೋ ಸಮಸ್ಯೆಯನ್ನು ಕೊಂಡುತಂದು ಇವತ್ತು ಅಲ್ಲಿ ಹಾಕಿಕೊಂಡಿದ್ದೇವೆ, ನನ್ನದು ಸರ್ಕಾರಕ್ಕೆ ಒಂದು ಭಿನ್ನಹ. ದಯಮಾಡಿ ಪೊಲೀಸರನ್ನು ಏನು ಹಾಕಿದ್ದೀರಿ ಅವರ ಹೆಂಡತಿ ಮಕ್ಕಳಿಗೆ 60, 70 ವರ್ಷದ ತನಕ ಗಂಡಂದಿರು ಬದುಕುತ್ತಾರೆ ಅನ್ನುವ ಗ್ಯಾರಂಟಿ ಸೃಷ್ಟಿ ಮಾಡಿರಿ. ಅವರೂ ಮನುಷ್ಯರು, ಅವರೇನು ಮೃಗಗಳಾ? ಏನು ಬೇಕಾದರೂ ಆಗಲಿ, ಬೆಂಕಿಗೆ ನೂಕಿ ಬಂದೂಕಿನೆದುರು ನಿಂತುಕೊಳ್ಳಿ ನಿಮಗೆ ನಾವು ಪರಿಹಾರ ಕೊಡುತ್ತೇವೆ ಎಂಬ ಹೀನ ಸ್ಥಿತಿಗೆ ಸರ್ಕಾರಗಳು ಬರಬಾರದು. ಇಷ್ಟಾದರೂ ಸುಸಜ್ಜಿತ ವೆಹಿಕಲ್ ಇಲ್ಲ, ಇಷ್ಟಾದರೂ ಇವತ್ತಿನ ಕಾಲಕ್ಕೆ ತಕ್ಕ ವೆಪನ್ಸ್ ಇಲ್ಲ ಇಷ್ಟಾದರೂ ಅವರು ಮರೆಯಲ್ಲಿ ನಿಂತು ಯಾರು ಬರುತ್ತಾರೆ ಹೋಗುತ್ತಾರೆ ಅಂತ ನೋಡುವಂತಹ ಸ್ಥಿತಿ ವೆಂಕಟಮ್ಮನ ಹಳ್ಳಿಯಲ್ಲಿ ಅಥವಾ ಆಂಧ್ರ ಗಡಿಯಲ್ಲಿ ಸರ್ಕಾರದವರು ನಿರ್ಮಾಣ ಮಾಡಿಲ್ಲ. ಇಷ್ಟಾದರೂ ನಕ್ಸಲೈಟ್ ಯಾರು? ಮಾವೋವಾದಿ ಯಾರು? ಎಂಎಲ್ಎ ಯಾರು? ಮಂತ್ರಿ ಯಾರು? ಅಂತ ಯಾರಿಗೂ ಅಲ್ಲಿ ಗೊತ್ತಾಗುತ್ತಿಲ್ಲ. ಬಸ್ ನಿಲ್ಲಿಸಿ ಎಳೆದುಕೊಂಡು ಬಂದು ಕೊಚ್ಚಿದಾಗಲೇ ನಾವು ಹುಷಾರಾಗಬೇಕಾಗಿತ್ತು. ಪಾವಗಡದಲ್ಲಿ ಒಂದು ಅಂಗಡಿಯಲ್ಲಿ ಬಾಗಿಲು ಹಾಕಿ ಕೊಂದಾಗಲೇ ನಾವು ಹುಷಾರಾಗಬೇಕಾಗಿತ್ತು. ಇದರ ವ್ಯಾಪಕ ವಿಸ್ತೀರ್ಣ ಹೇಗಾಗಿದೆ ಅಂದರೆ ಅಧ್ಯಕ್ಷರೇ, ಐದು ವರ್ಷದ ಹಿಂದೆ ಚಿಕ್ಕನಾಯ್ಕನಹಳ್ಳಿಯಲ್ಲಿ ಒಬ್ಬರು ಅರೆಸ್ಟಾದರು. ಎರಡು ವರ್ಷ ಅಲ್ಲಿ ಅವರು ಮನೆ ಮಾಡಿಕೊಂಡು ಪಾವಗಡದಲ್ಲಿನ ನಕ್ಸಲ್ ಚಟುವಟಿಕೆಯನ್ನು ಮಾನಿಟರ್ ಮಾಡಿದ್ದಾರೆ. ನನ್ನ ಗಮನಕ್ಕೆ ಬಂತು. ಇಲ್ಲಿ ಯಾರೋ ನಕ್ಸಲೈಟಿದ್ದಾನೆ ಇಲ್ಲಿಂದ ಭಾರಿ ಮದ್ದನ್ನು ತಯಾರು ಮಾಡಿ ಕಳುಹಿಸುತ್ತಿದ್ದಾರೆ ಸಿಡಿಮದ್ದು ಇದೆಲ್ಲಾ ನಡೀತಿದೆ ಅಂತ, ನನಗೇ ಗೊತ್ತಿಲ್ಲ, ಅಕಸ್ಮಾತ್ ನಮ್ಮ ಪೊಲೀಸರು ಅವನನ್ನು ಹಿಡಿದರು. ಅವತ್ತಿಂದ ನಾವು ಕಾಯ ಬೇಕಾಗಿದೆ. ಚಿಕ್ಕನಾಯ್ಕನಹಳ್ಳಿಯಲ್ಲಿ ಯಾರಿದ್ದಾರೆ ಸಿರಾದಲ್ಲಿ ಯಾರಿದ್ದಾರೆ ಮಧುಗಿರಿಯಲ್ಲಿ ಯಾರಿದ್ದಾರೆ ತುಮಕೂರು ಟೌನ್‌ನಲ್ಲಿ ಯಾರಿದ್ದಾರೆ ಅಂತ. ಮತ್ತೆ ಇದರ ಆಪರೇಷನ್ ಬೆಂಗಳೂರಿನಿಂದ ನಡೀತಾ ಇತ್ತು. ಇದು

ಹುಡುಗಾಟದ ಪ್ರಶ್ನೆಯಲ್ಲ, ಏನು ಅರಣ್ಯದಲ್ಲಿ ವೀರಪ್ಪನ್ ಅಂತ ಸೃಷ್ಟಿ ಮಾಡಿಕೊಂಡಿದ್ದೆವು ಇವತ್ತು ಬಯಲುಸೀಮೆ ಜನ ನಾವು ಬದುಕಲಾರದ ಸ್ಥಿತಿಗೆ ಬಂದುಬಿಟ್ಟಿದ್ದೇವೆ. ದಯಮಾಡಿ ನಾನು ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದೇನೆ, ಪಾವಗಡದ ವೆಂಕಟಮ್ಮನಹಳ್ಳಿಯ ಬಗ್ಗೆ ಒಂದು ಸದನದ ಸಮಿತಿಯನ್ನು ತಾವು ನೇಮಕ ಮಾಡಬೇಕು. ವೆಂಕಟಮ್ಮನಹಳ್ಳಿಯಲ್ಲಿ ಆದ ಘಟನೆಗೆ ಯಾರ್‍ಯಾರು ಕಾರಣ, ಆ ಪೊಲೀಸರನ್ನು ನಿಷ್ಕ್ರಿಯ ಮಾಡುವುದಕ್ಕೆ ಯಾರ್‍ಯಾರು ಕಾರಣ ಎನ್ನುವ ಒಂದು ವರದಿ ಇಲ್ಲಿಗೆ ಬರಬೇಕು. ಪೊಲೀಸರೂ ಕೂಡ ಮನುಷ್ಯರು. ಆ ಒಂದು ಮಾನವೀಯ ದೃಷ್ಟಿಯಿಂದ ನಾವು ಅವರನ್ನು ನೋಡಬೇಕು. ಇನ್ನು ಇದನ್ನು ಬಿಟ್ಟು ಆಚೆಗೆ ಬಂದರೆ ಕರ್ನಾಟಕದಲ್ಲೇನಾದರೂ ಕೈಗಾರಿಕೆಗಳು prosper ಆಗುವುದಿದ್ದರೆ ಕರ್ನಾಟಕಕ್ಕೆ ಯಾರಾದರೂ ಇನ್‌ವೆಸ್ಟರ್ಸ್ ಬರುತ್ತಿದ್ದರೆ, ಕರ್ನಾಟಕಕ್ಕೆ ಯಾರಾದರೂ ಇಲ್ಲಿ ಬಂದು ಜೀವನ ಮಾಡಬಹುದು ಎಂದು ಆಸೆಯನ್ನು ಇಟ್ಟುಕೊಂಡು ಬರುತ್ತಿದ್ದರೆ, ಇಲ್ಲಿ ಕಾನೂನು ವ್ಯವಸ್ಥೆ ಚೆನ್ನಾಗಿತ್ತು ಎಂದು ಹೇಳಿ ಬರುತ್ತಿದ್ದರು. ಆದರೆ ಈಗ ಆ ಸ್ಥಿತಿ ಇಲ್ಲ. ಯಾರೇ ಪ್ರಮುಖ ಉದ್ಯಮಿ ಇಲ್ಲಿ ಬಂದು ಬಂಡವಾಳ ಉಪಯೋಗ ಮಾಡಬೇಕು, ಬಳಸಬೇಕು ಅಥವಾ ವಿನಿಯೋಗ ಮಾಡಬೇಕೆಂದರೆ ಇವತ್ತು ಸೆಕ್ಯೂರಿಟಿ ಬಗ್ಗೆ ಯೋಚನೆ ಮಾಡುವ ಸ್ಥಿತಿಗೆ ಬಂದಿದೆ. ನಾವೇ ಇದನ್ನು ನಿರ್ಮಾಣ ಮಾಡಿದ್ದೇವೆ. ಒಂದು, ಬೆಂಗಳೂರನ್ನು ಕಾರ್ಯಸ್ಥಾನ ಮಾಡಿದ್ದೇವೆ. ಒಂದು ಕಾಲದಲ್ಲಿ ಬೆಂಗಳೂರು ನಾರ್ಕಾಟಿಕ್ ಆಕ್ಟಿವಿಟೀಸ್ ಸೆಂಟರ್ ಆಗಿತ್ತು. ಇವತ್ತು 'ಬೆಂಗಳೂರು ಟೆರ್ರರಿಸಂ ಆಕ್ಟಿವಿಟೀಸ್ ಸೆಂಟರ್ ಆಗಿದೆ ಇವತ್ತು ಹದ್ದುಮೀರಿ ಹೋಗಿದೆ. ಯಾವುದೇ ಸರ್ಕಾರದ ಇಂಟೆಲಿಜೆನ್ಸ್‌ನ್ನು ಧಾಟಿ ಬೆಂಗಳೂರಿನಲ್ಲಿ ರೆಸಿಡೆನ್ಸಿಯಲ್ ಏರಿಯಾಗಳಲ್ಲಿ ಹಲವಾರು ಕೇಂದ್ರಗಳಲ್ಲಿ ಇಂಥ ಕಾರ್ಯಗಳು ನಡೆಯುತ್ತಿವೆ. ಬೆಂಗಳೂರಿನ ಯಾವ ಭಾಗದಲ್ಲಿ ಆಗುತ್ತಿದೆ, ಯಾವ ಭಾಗದಲ್ಲಿ ಆಗುತ್ತಿಲ್ಲ ಎಂದು ಸರ್ಕಾರದ ಬಗ್ಗೆ ಗುಪ್ತ ದಳದವರು ಹೇಳುವುದಕ್ಕೆ ಸಮರ್ಥರಾಗಿಲ್ಲ. ಬೆಂಗಳೂರು ಎಲ್ಲದಕ್ಕೂ ಸೆಂಟರ್ ಆಗಿದೆ. ಬೆಂಗಳೂರನ್ನು ಎಲ್ಲರೂ ಯಾವುದಕ್ಕೂ ಬೇಕಾದರೂ ಬಳಸಬಹುದು ಎನ್ನುವ ಸ್ಥಿತಿಯಾಗಿದೆ. ಬೆಂಗಳೂರು ಬೆಳೆಯುತ್ತಿರುವುದು ಬಿಟ್ಟರೆ ಬೆಂಗಳೂರಿನಲ್ಲಿ ಆಡಳಿತ ಬೆಳೆಯಿತು ಎಂದು ಹೇಳಿ ನಾವು ನಂಬುವುದಕ್ಕಾಗುವುದಿಲ್ಲ. ಇದು ಇಡೀ ದಕ್ಷಿಣ ಭಾರತಕ್ಕೆ ನಾಳೆ ಪಿಡುಗಾಗುತ್ತದೆ. ಇಲ್ಲಿಂದ ಎಲ್ಲಾ ಕಡೆಗೆ ಹೋಗಬಹುದು. ಇಲ್ಲಿಂದ ಚೆನ್ನೈಗೆ ಹೋಗುತ್ತದೆ. ಆಂಧ್ರಪ್ರದೇಶದ ಹೈದರಾಬಾದ್‌ಗೆ ಹೋಗುವುದಕ್ಕೆ ಇಲ್ಲಿಂದ ಟ್ರಿವೆಂಡ್ರಮ್‌ಗೆ ಹೋಗುವುದಕ್ಕೆ ಇಲ್ಲಿಂದ ಗೋವಾಕ್ಕೆ ಹೋಗುವುದಕ್ಕೆ access ಇರುವುದರಿಂದ ಮತ್ತೆ ಮತ್ತೆ ನಿರ್ಭೀತವಾಗಿ ಪ್ರಯಾಣ ಮಾಡಬಹುದು ಎನ್ನುವ ಸ್ಥಿತಿಯನ್ನು ನಿರ್ಮಾಣ ಮಾಡಿಕೊಟ್ಟಿರುವುದರಿಂದ ಇವತ್ತಲ್ಲ ನಾಳೆ ಕರ್ನಾಟಕ ಒಂದು ಟೆರ್ರರಿಸ್ಟ್ ಸ್ಟೇಟ್ ಆಗುತ್ತದೆ. ಇದರಲ್ಲಿ ಎರಡು ಮಾತೇ ಇಲ್ಲ. ಎಲ್ಲಾ ಕಡೆಯವರು ಬಂದು ಇಲ್ಲಿ ವಸಾಹತುಗಳನ್ನು ಸ್ಥಾಪನೆ ಮಾಡಿಕೊಂಡು ಇಲ್ಲಿಂದ ಆಪರೇಟ್ ಮಾಡುವ ಸ್ಥಿತಿಯನ್ನು ನಾವು ನಿರ್ಮಾಣ ಮಾಡುತ್ತೇವೆ. ಖಂಡಿತವಾಗಿ ಈ ಸರ್ಕಾರ ನಿರ್ಮಾಣ ಮಾಡುತ್ತಿದೆ. ಇದಕ್ಕೆ ಮೊದಲೇ ತಾವು ಎಚ್ಚರಿಕೆಯನ್ನು ವಹಿಸಬೇಕಾಗಿತ್ತು. ಇದರ ಜೊತೆಗೆ ಅಧಿಕಾರಿಗಳು ಬಹಳ ಅವರಿಗೆ ಬೇಕಾದ ರೀತಿಯಲ್ಲಿ ವರ್ತನೆ ಮಾಡುವ ಸ್ಥಿತಿ ಕರ್ನಾಟಕದಲ್ಲಿ ಪ್ರಾರಂಭವಾಗಿದೆ. ನಾನು ಕೇಳಿದೆ, ಪಾವಗಡದಲ್ಲಿ ಇಂಥ ಸ್ಥಿತಿ ಇದೆ, ಅಡಿಷನಲ್ ಎಸ್.ಪಿ. ತುಮಕೂರಿಗೆ ಒಬ್ಬರು ಇದ್ದೀರಿ, ಏಕೆ ಅಲ್ಲಿ ಮೊಕ್ಕಾಂ ಮಾಡಬಾರದು ಎಂದು. ಯಾರೋ ಸಬ್ ಇನ್ಸ್‌ಪೆಕ್ಟರ್, ಸರ್ಕಲ್ ಇನ್ಸ್‌ಪೆಕ್ಟರ್‌ನ್ನೋ ಕಳುಹಿಸಿ ನೀವು ಕುಳಿತುಕೊಳ್ಳುವ ಬದಲು ಸ್ಪಾಟ್‌ಗೆ ಹೋಗಿ ಡಿಷಿಷನನ್ನು ತೆಗೆದುಕೊಳ್ಳಬಾರದೇ ಎಂದು

ಕೇಳಿದೆ. ನಾನು ಮುಖ್ಯಮಂತ್ರಿಗಳನ್ನು ತಮ್ಮ ಮೂಲಕ ಕೇಳುತ್ತಿದ್ದೇನೆ, ತುಮಕೂರಿನಲ್ಲಿರುವ ಅಡಿಷನಲ್ ಎಸ್‌ಪಿ ಅವರಿಗೆ ಎಕ್ಸ್‌ಟ್ರಾ ಫೋರ್ಸ್ ಕೊಡುವುದಿದ್ದರೆ ಬೇಡ. ಏಕೆ ನೀವು ಪಾವಗಡಕ್ಕೆ shift ಮಾಡುವುದಿಲ್ಲ. What is the job chart for the Additional Superintendent of Police in Tumkur? ಏನೂ ತೊಂದರೆ ಇಲ್ಲ ಸಾರ್. ಅಲ್ಲಿ ಮಾಡಿ. ಪಾವಗಡದಲ್ಲಿ ಮೊಕ್ಕಾಂ ಮಾಡಿಸಿ. ಅವರಿಗೊಂದಷ್ಟು ಫೋರ್ಸ್ ಕೊಡಿ. ಅವರಿಗೊಂದಿಷ್ಟು ಡಿಷಿಷನ್‌ಗಳನ್ನು ತೆಗೆದುಕೊಳ್ಳುವಂಥ ಪವರ್‌ನ್ನು ಕೊಡಿ. ಏನಾದರೂ ಇಂಥ ಸನ್ನಿವೇಶಗಳು ಸೃಷ್ಟಿಯಾದಾಗ. ಯಾರನ್ನು ಇವತ್ತು ಇನ್ಸ್‌ಪೆಕ್ಟರ್‌ಗಳು ಕಾಯುತ್ತಾ ಕುಳಿತುಕೊಳ್ಳಬೇಕು. ಅದನ್ನೇನಾದರೂ ನೀವು ತಕ್ಷಣ ಸುಧಾರಣೆ ಮಾಡಬೇಕು. ಇದನ್ನು ಬಿಟ್ಟು (ಈ ಹಂತದಲ್ಲಿ ಮಾನ್ಯ ಮುಖ್ಯಮಂತ್ರಿಗಳ ಬಳಿ ಮೂರು–ನಾಲ್ಕು ಜನ ಮಾನ್ಯ ಮಂತ್ರಿಗಳು ಸುತ್ತುವರೆದು ಮಾತನಾಡುತ್ತಿದ್ದರು) ನೋಡಿ, ನಮ್ಮ ಸ್ಥಿತಿ. ಅಲ್ಲಿ ಟೆರ್ರರಿಸಂ ಬಗ್ಗೆ ಮಾತನಾಡಲಾ? ಇಲ್ಲಿಯದರ ಬಗ್ಗೆ ಮಾತನಾಡಲಾ ನನಗೆ ಅರ್ಥವಾಗುತ್ತಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಈಗ ನಿಮ್ಮ ಮೇಲೆ ಮೂರು ಜನ ಮಂತ್ರಿಗಳು ಧಾಳಿ ಮಾಡುತ್ತಿದ್ದಾರೆ. ರಕ್ಷಣೆ ಕೊಡುವವರ್‍ಯಾರು?

ಶ್ರೀ ಜೆ.ಸಿ.ಮಾಧುಸ್ವಾಮಿ : ನಿಮಗೆ ರಕ್ಷಣೆ ಇಲ್ಲ ಎಂದು ನಾವು ಇವತ್ತು ಅಧ್ಯಕ್ಷರಿಗೆ ಹೇಳಬೇಕಾಗಿದೆ.

ಶ್ರೀ ವಾಟಾಳ್ ನಾಗರಾಜ್ : ಈಗ ನಾವು ರಕ್ಷಣೆಯನ್ನು ಕೊಡೋಣವೇ ಅಥವಾ ನಿಮಗೆ ಬೇರೆ ರಕ್ಷಕರು ಇದ್ದಾರಾ ಹೇಳಿ.

ಶ್ರೀ ಜೆ.ಸಿ.ಮಾಧುಸ್ವಾಮಿ : ನೀವು ರಾಜ್ಯಕ್ಕೆ ರಕ್ಷಣೆ ಇಲ್ಲದ ಹಾಗೆ ಮಾಡಿದಿರಿ. ಶಾಸನಸಭೆಯೊಳಗೆ ನಿಮಗೆ ರಕ್ಷಣೆಯನ್ನು ನಾವು ಕೊಡಿಸಬೇಕಾಗಿದೆ ಮಾನ್ಯ ಅಧ್ಯಕ್ಷರನ್ನು ಕೇಳಿ.

ಶ್ರೀ ಎನ್. ಧರ್ಮಸಿಂಗ್ (ಮುಖ್ಯಮಂತ್ರಿಗಳು) : ಕೇಳುತ್ತಿದ್ದೇನೆ ಹೇಳಿ.

ಶ್ರೀ ಜೆ.ಸಿ.ಮಾಧುಸ್ವಾಮಿ : ಅದೇಗೆ? ನಿಮಗೆ ಹತ್ತು ಕಿವಿ ಇದೆಯಾ? ಆ ಕಡೆ ಕಿವಿ, ಈ ಕಡೆ ಕಿವಿ ಅವರೇ ಆಕ್ರಮಿಸಿಕೊಂಡುಬಿಟ್ಟಿದ್ದಾರೆ. ನನ್ನ ಮಾತನ್ನು ಬಾಯಿಂದ ಕೇಳಬೇಕು.

ಶ್ರೀ ವಾಟಾಳ್ ನಾಗರಾಜ್ : ಬಹಳ ಕಷ್ಟ ನಿಮ್ಮದು. ಒಬ್ಬರು ಕಿವಿ ಹಿಡಿದುಕೊಳ್ಳುತ್ತಾರೆ. ಒಬ್ಬರು ಮೂಗು ಹಿಡಿದುಕೊಳ್ಳುತ್ತಾರೆ, ಒಬ್ಬರು ಕೈ ಹಿಡಿದುಕೊಳ್ಳುತ್ತಾರೆ. ನೀವು ಬಹಳ ಕಷ್ಟದಲ್ಲಿದ್ದೀರಿ. ಇಲ್ಲಾದರೂ ನಿಮ್ಮನ್ನು ಬಿಡುಗಡೆ ಮಾಡಿ ಎಂದು ಅವರಿಗೆ ಹೇಳಿ.

ಶ್ರೀ ಜೆ.ಸಿ.ಮಾಧುಸ್ವಾಮಿ : ಅವರು ಮಂತ್ರಿಗಳು. ಯಾವಾಗ ಬೇಕಾದರೂ ನಿಮ್ಮನ್ನು ಬಂದು ನೋಡಬಹುದು. ಅಂಥವರು ಶಾಸನಸಭೆಯಲ್ಲಿ ಮುಖ್ಯಮಂತ್ರಿಗಳನ್ನು ನೋಡುತ್ತಾರೆ ಎನ್ನುವ ದುಸ್ಥಿತಿ ಕರ್ನಾಟಕಕ್ಕೆ ಬಂದರೆ ಹೇಗೆ ಸಾರ್ ? They are all Ministers, colleagues, we call them colleagues. ಅವರು ಸಹೋದ್ಯೋಗಿಗಳು. ಈ ಶಾಸನಸಭೆಗೆ ಸೌಜನ್ಯ ಬೇಕು.

ಶ್ರೀ ಹೆಚ್.ಸಿ.ಮಹದೇವಪ್ಪ : ಮುಖ್ಯಮಂತ್ರಿಗಳೇ ಕರೆದಿದ್ದರು.

ಶ್ರೀ ಜೆ.ಸಿ.ಮಾಧುಸ್ವಾಮಿ : ಇಷ್ಟೊಂದು ಜನರನ್ನು ಕರೆದಿದ್ದಿರಾ? ಇಲ್ಲಿ ಕ್ಯಾಬಿನೆಟ್ ಮೀಟಿಂಗನ್ನು ಮಾಡುತ್ತಿದ್ದಾರಾ? ಇಲ್ಲೇನು ಸಚಿವ ಸಂಪುಟವನ್ನು ನಡೆಸುತ್ತಿದ್ದೀರಾ? ಏನೋ ನಾವು ಸನ್ಮಾನ್ಯ ಮುಖ್ಯಮಂತ್ರಿಗಳನ್ನು ನೋಡುವುದಕ್ಕಾಗುವುದಿಲ್ಲ ಎಂದು ಎರಡು ನಿಮಿಷ ಬಳಸಿಕೊಂಡರೆ ಒಂದು ಅರ್ಥ ಇರುತ್ತದೆ. ನೀವೇ ಮಂತ್ರಿಗಳು ಈ ರೀತಿಯಾದರೆ ಹೇಗೆ?

ಶ್ರೀ ಕೆ. ಶ್ರೀನಿವಾಸಗೌಡ (ಕೃಷಿ ಸಚಿವರು) : ಕೆಲವೊಂದು ಸಮಯದಲ್ಲಿ ಮಾನ್ಯ ಸದಸ್ಯರು ಮಾತನಾಡುವ ವಿಷಯಗಳಲ್ಲಿ ಮುಖ್ಯಮಂತ್ರಿಗಳು ನಮಗೆ ಸೂಚನೆಯನ್ನು ಕೊಡುತ್ತಾರೆ. ಮಂತ್ರಿಗಳೇ ಹೋಗಬಾರದು ಎಂದು ಹೇಳುವುದು ಯಾವ ನ್ಯಾಯ?

ಶ್ರೀ ವಾಟಾಳ್ ನಾಗರಾಜ್ : ತಮ್ಮ ಜಾಗಗಳಲ್ಲಿ ನಿಂತು ಮಾತನಾಡುವುದನ್ನು ಕಲಿತುಕೊಳ್ಳಿ.

ಶ್ರೀ ಜೆ.ಸಿ.ಮಾಧುಸ್ವಾಮಿ : ಮಾನ್ಯ ಮುಖ್ಯಮಂತ್ರಿಗಳು ಸೂಚನೆ ತೆಗೆದುಕೊಳ್ಳುವುದಕ್ಕೆ ಅವರಿಗೆ ಎಡಪಾರ್ಶ್ವ ಇದೆ. ಅವರಿಗೆಲ್ಲಾ ಐಎಎಸ್ ಎಂದು ಡಿಗ್ರಿಯನ್ನು ಕೊಟ್ಟು ಅಲ್ಲಿ ಕೂಡಿಸಿದೆ. ಅವರು ಸೂಚನೆಯನ್ನು ತೆಗೆದುಕೊಳ್ಳುತ್ತಾರೆ. ತಾವು ತಮ್ಮ ಖಾತೆ ಕೆಲಸಗಳನ್ನು ನಿರ್ವಹಿಸಿಬಿಟ್ಟರೆ ಸಾಕು.

ಶ್ರೀ ಕೆ. ಶ್ರೀನಿವಾಸಗೌಡ : ಕೆಲವು ವಿಷಯಗಳಲ್ಲಿ ಸೂಚನೆಯನ್ನು ಮುಖ್ಯಮಂತ್ರಿಗಳು ಕೊಡುತ್ತಾರೆ.

ಅಧ್ಯಕ್ಷರು : ಸಾಕು ಅಲ್ಲಿಗೆ ನಿಲ್ಲಿಸಿ.

ಶ್ರೀ ಜೆ.ಸಿ.ಮಾಧುಸ್ವಾಮಿ : ಮಾನ್ಯ ಶ್ರೀನಿವಾಸಗೌಡರೇ, ನಮ್ಮ ಜಿಲ್ಲೆ ಬರ್ನ್ ಆಗಿದೆ ಎಂದಾಗ ನಾನು ಮುಖ್ಯಮಂತ್ರಿಗಳ ಏಕಾಗ್ರತೆಯನ್ನು ನನ್ನ ಕಡೆಗೆ ಸೆಳೆಯಬೇಕಾ ಅಥವಾ ಬೇಡವಾ? ನೀವೇ ಹೇಳಿ. ಯಾರನ್ನು ಕೇಳಬೇಕು ಎಂದು. ಇದನ್ನು ಬಿಟ್ಟು ಬೆಂಗಳೂರು ಸಿಟಿಯಲ್ಲಿ ಕೂಡ ಆತಂಕವನ್ನು ಸೃಷ್ಟಿ ಮಾಡಿದ್ದಾರೆ. ಬಾಂಬ್ ಹಾಕುತ್ತೇವೆ, ಬೆಂಗಳೂರಿನಲ್ಲಿ ಇಂಥ ಕೇಂದ್ರಗಳಿಗೆ ನಾವು ಬಾಂಬ್‌ನ್ನು ಹಾಕುತ್ತೇವೆ, ಇಂಥ ಫ್ಲರಿಷಿಂಗ್ ಇಂಡಸ್ಟ್ರೀಸ್‌ಗಳನ್ನೇ ನೆಲಸಮ ಮಾಡುತ್ತೇವೆ ಎಂದು, ಅದು ಸತ್ಯ ಇರಬಹುದು, ಅಥವಾ ಸುಳ್ಳು ಇರಬಹುದು, ಆದರೆ ಭೀತಿ ನಿರ್ಮಾಣವಾಗುತ್ತದೆ. ಇನ್‌ವೆಸ್ಟರ್ಸ್ ಯೋಚನೆ ಮಾಡುವ ಸ್ಥಿತಿ ನಿರ್ಮಾಣವಾಗುತ್ತಿದೆ. ಇದಕ್ಕೆಲ್ಲಾ ಎಲ್ಲೋ ಒಂದು ಕಡೆ ಮುಕ್ತಾಯವನ್ನು ಹಾಡಬೇಕು. ಇದು ಬೆಂಗಳೂರು, ತಮ್ಮನ್ನು ನಾನು ಕೇಳಿದೆ, ನಿಮಗೆ ನಾನೊಂದು ಮಾಹಿತಿಯನ್ನು ಹೇಳಬೇಕೆಂದರೆ ಬಹುಶಃ ಅತ್ಯಂತ ಫಾಸ್ಟ್ ಗ್ರೋಯಿಂಗ್ ಸಿಟೀಸ್‌ನಲ್ಲಿ ನಾವು ರ್‍ಯಾಂಕಿಂಗ್ ಸ್ಟೇಜ್‌ಗೆ ನಾವು ಬಂದಿರುವವರು. 2015 ನೇ ಇಸವಿಗೆ 550 ನಗರಗಳು ಹತ್ತು ಲಕ್ಷಕ್ಕೂ ಮೀರಿ ಬೆಳೆಯುತ್ತವೆ ಎನ್ನುವ ಒಂದು forecast ಏನು ಇದೆ, ಅದರಲ್ಲಿ ಬೆಂಗಳೂರಷ್ಟು ಫಾಸ್ಟ್ ಆಗಿ ಬೆಳೆಯುವ ನಗರ ಇನ್ನೊಂದು ಇಲ್ಲವೇ ಇಲ್ಲ. ಅಷ್ಟು ವೇಗವಾಗಿ ಇವತ್ತು ಬೆಂಗಳೂರು ನಗರ ಬೆಳೆಯುತ್ತಿದೆ. ಇವತ್ತು 400 ನಗರಗಳು ಪ್ರಪಂಚದಲ್ಲಿ ಹತ್ತು ಲಕ್ಷ ಜನಸಂಖ್ಯೆಯನ್ನು ಮೀರಿರುವ ನಗರಗಳಿವೆ. 2015 ಕ್ಕೆ 550 ಬೆಳೆಯುತ್ತದೆ. Population of the world 50 ಪರ್‌ಸೆಂಟಿಗಿಂತ ಜಾಸ್ತಿ ನಗರ ಪ್ರದೇಶದಲ್ಲಿ ಬೆಳೆಯುತ್ತೆ ಎಂದು forecast ಆಗಿದೆ. ನಾವು ಏನು ಗ್ರಾಮೀಣದಲ್ಲಿ 70 ಇದ್ದೇವೆ, 65 ಇದ್ದೇವೆ, 80 ಇದ್ದೇವೆಂದು ಭಾಷಣವನ್ನು ಮಾಡುತ್ತಿದ್ದೇವೆ, 2015ನೇ ವರ್ಷಕ್ಕೆ ನಗರಪ್ರದೇಶದ ಜನಸಂಖ್ಯೆ ಗ್ರಾಮೀಣ ಪ್ರದೇಶದ ಜನಸಂಖ್ಯೆಯನ್ನು ಧಾಟುತ್ತದೆ. ಅದಕ್ಕೊಂದು ಇನ್‌ಫ್ರಾಸ್ಟ್ರಕ್ಚರನ್ನು ...

Sri M.P. Prakash (Minister for revenue) : 36% is the decadal growth. ಹತ್ತು ವರ್ಷಕ್ಕೆ 36 ಪರ್‌ಸೆಂಟ್.

ಶ್ರೀ ಜೆ.ಸಿ.ಮಾಧುಸ್ವಾಮಿ : ಇದಕ್ಕೆ ನಾವು ಸಜ್ಜಾಗಬೇಕಾಗುತ್ತದೆ. ನೀವೇನು ಇನ್‌ಫ್ರಾಸ್ಟ್ರಕ್ಚರನ್ನು ಸೃಷ್ಟಿಮಾಡುವುದಕ್ಕೆ ಹೊರಟಿದ್ದೀರಿ. Priority must be given to law and order. ನೀವು ಅಲ್ಲಿ ಜನಗಳ ಜೀವನಕ್ಕೆ ಮೊದಲನೇ ಆದ್ಯತೆಯನ್ನು ಕೊಡಬೇಕು. ರಾಜ ಅಂದರೆ ಅದೇ. ದರಿದ್ರರಿಗೆ ರಕ್ಷಣೆಯನ್ನು ಕೊಡುವವನು ಶಾಂತಿಯನ್ನು ಸ್ಥಾಪನೆ ಮಾಡುವವನು ಎಂದೇ ಅರ್ಥ ಸಂಸ್ಕೃತದಲ್ಲಿ. ನಾವೇನೊ ಕುಳಿತುಕೊಂಡು ವಿಮಾನದಲ್ಲಿ ಇಂಟರ್‌ನ್ಯಾಷನಲ್ ಏರ್‌ಪೋರ್ಟನ್ನು ಕಟ್ಟುತ್ತೇವೆಂದರೆ ಆಗುವುದಿಲ್ಲ. ಇಂಟರ್‌ನ್ಯಾಷನಲ್ ಏರ್‌ಪೋರ್ಟನ್ನು ಇಲ್ಲಿ ನೀವು ಮಾಡಿದರೆ ಬಂದು ಹೋಗುವವರಿಗೆ ಸುರಕ್ಷತೆ ಇದೆ ಎಂದರೇನೆ ಅವರು ಬರುವುದು. ಇನ್ನು ಈ ಬೆಂಗಳೂರಿನ ಗ್ರೋಥ್‌ಗೆ ಸಮನಾಗಿ ಇನ್‌ಫ್ರಾಸ್ಟ್ರಕ್ಚರೂ ಡೆವಲಪ್‌ಮೆಂಟ್ ಆಗಿಲ್ಲ. ಲಾ ಅಂಡ್ ಆರ್ಡರ್ ವ್ಯವಸ್ಥೆ ಕೂಡ ಇವತ್ತು ಆಗಿಲ್ಲ. ದುರ್ದೈವದ ಮಾತು. ಲಾ ಅಂಡ್ ಆರ್ಡರ್ ಪ್ರಾಬ್ಲಮ್ ಇವತ್ತು ಬೇರೆ ನಗರಗಳಿಗೆ ಹೋಲಿಸಿದರೆ ನಂಬರ್ ಒನ್ ಸ್ಟೇಜ್‌ನಲ್ಲಿದ್ದ ಬೆಂಗಳೂರು ಇವತ್ತು ಹಿಂದಕ್ಕೆ ಬರುತ್ತಾ ಇದೆ. ಏಕೆ? ಇಂಟೆಲಿಜೆನ್ಸ್ ಹಂಡ್ರೆಡ್ ಪರ್‌ಸೆಂಟ್ ಫೇಲ್ ಆಗಿದೆ. ನಾನು ಒತ್ತಿ ಹೇಳುತ್ತಿದ್ದೇನೆ, ಕಳೆದ ಐದಾರು ವರ್ಷಗಳಿಂದ ಕರ್ನಾಟಕದ ಇಂಟೆಲಿಜೆನ್ಸ್ ನೂರಕ್ಕೆ ನೂರರಷ್ಟು ಫೇಲ್ ಆಗಿದೆ. ಡೆಕನ್ ಹೆರಾಲ್ಡ್ ಪೇಪರ್‌ನಲ್ಲಿ ಬಂದಮೇಲೆ ಮಾಹಿತಿಯನ್ನು ಡಿಐಜಿ ಇಂಟೆಲಿಜೆನ್ಸ್ ತೆಗೆದುಕೊಂಡು ಹೋಗಿ ಕೊಡುತ್ತಾರೆ. ನೋಡಿ ಈ ಊರಿನಲ್ಲಿ ಹೀಗೆ ಆಗಿದೆ, ಅಲ್ಲಿ ಯಾರದೊ ಸಭೆಗೆ ಇಷ್ಟು ಜನರು ಸೇರಿದ್ದರು, ಇನ್ನ್ಯಾರದೋ ಸಭೆಗೆ ಇಷ್ಟು ಎಂದು ಹೇಳುವುದು. ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ಹೋಗುತ್ತಿರುವ ಮಾಹಿತಿ ಯಾವ ಯಾವ ಸಭೆಯಲ್ಲಿ ಎಷ್ಟೆಷ್ಟು ಜನರು ಸೇರಿದ್ದರು ಎಂದು ಪ್ರಜಾವಾಣಿ, ಡೆಕನ್ ಹೆರಾಲ್ಡ್ ಪತ್ರಿಕೆಯಲ್ಲಿ ಬಂದಮೇಲೆ ಹೋಗುತ್ತಿದೆ. ಇದು ತಪ್ಪಬೇಕು ಸಾರ್. ಇಂಟಲಿಜೆನ್ಸ್‌ನ್ನು ತಾವು ಸನ್ನದ್ಧು ಮಾಡಬೇಕಾಗಿದೆ. ಚುರುಕು ಮಾಡಬೇಕಾಗಿದೆ. ಇವತ್ತು ಟ್ರೈನ್‌ಅಪ್ ಮಾಡಬೇಕಾಗಿದೆ. ರಾಜ್ಯದ ಮೂಲೆ ಮೂಲೆಗಳಿಂದ ನಾಳೆ ಏನಾಗುತ್ತೆ ಎಂದು ನಿಮಗೆ ಮಾಹಿತಿ ಬರದೇ ಹೋದರೆ ಖಂಡಿತವಾಗಿ ಗಂಡಾಂತರವನ್ನು ನಾವು ಎದುರು ನೋಡಬೇಕಾಗುತ್ತದೆ. ಮತ್ತೆ ನಾವು ಇವತ್ತು ಫೋರ್ಸ್‌ಗಳನ್ನೂ ಕೂಡ ಡೀಸ್ಟೆಬಿಲೈಜ್ ಮಾಡುತ್ತಿದ್ದೇವೆ. ಪೊಲೀಸ್‌ನವರಿಗೆ ಅಂಥ ಆತ್ಮವಿಶ್ವಾಸ ಇಲ್ಲ. ನಾನು ಬಿಚ್ಚಿ ಹೇಳುತ್ತಿದ್ದೇನೆ. ಪೊಲೀಸ್‌ನವರು ಇವತ್ತು ಗೂಂಡಾ ಎಲಿಮೆಂಟನ್ನು ಇವತ್ತು ಕಂಟ್ರೋಲ್ ಮಾಡುವ ಸ್ಥಿತಿಯಲ್ಲಿ ಇಲ್ಲ. ಕಳ್ಳರನ್ನೂ ಕಂಟ್ರೋಲ್ ಮಾಡುವ ಸ್ಥಿತಿಯಲ್ಲಿಲ್ಲ. ಕೊಲೆಗಾರರನ್ನು ಪತ್ತೆ ಮಾಡುವ ಸ್ಥಿತಿಯಲ್ಲಿಲ್ಲ. ಬರೀ ನಮಗೆ ಕಾನೂನು ಎಷ್ಟಿದೆ, ಎಫ್‌ಐಆರ್ ಎಷ್ಟು ಇದೆ, ಛಾರ್ಜ್‌ಸೀಟ್ ಎಷ್ಟಿದೆ, ಇಷ್ಟಕ್ಕೇ ಸೀಮಿತವಾಗಿದೆ. ನನ್ನ ಕ್ಷೇತ್ರದಲ್ಲಿಯೇ ಈಗ ಐದಾರು ತಿಂಗಳಿಂದ ಏಳೆಂಟು ಮರ್ಡರ್‌ಗಳಾಗಿವೆ. ಒಂದೇ ಒಂದು ಮರ್ಡರ್ ಕೂಡ ಟ್ರೇಸ್ ಆಗಿಲ್ಲ. ಒಂದು ಮರ್ಡರ್ ಕೂಡ ಇವತ್ತಿನವರೆಗೆ ಟ್ರೇಸ್ ಆಗಿಲ್ಲ. ಒಬ್ಬರು ಅರೆಸ್ಟ್ ಆಗಿಲ್ಲ. ಒಬ್ಬರಿಗೆ ಕನ್‌ವಿಕ್ಷನ್‌ಗೆ ನಾವು ರೆಕಮೆಂಡ್ ಮಾಡಿಲ್ಲ ನಿಮ್ಮ ಛಾರ್ಜ್‌ಸೀಟ್‌ನಲ್ಲಿ. ನಮ್ಮ ಚಿಕ್ಕನಾಯಕನಹಳ್ಳಿಯಲ್ಲಿ ಮಧ್ಯೆ ರೋಡು, ರೋಡು ಸೈಡ್ ಇರುವ ಅಂಗಡಿಯನ್ನು ಹಿಂದುಗಡೆ ಕರೆಕ್ಟ್ ಆಗಿ ಕುಯ್ದು 24–30 ಲಕ್ಷ ರೂಪಾಯಿ ಆಭರಣವನ್ನು ನೀಟಾಗಿ ತೆಗೆದುಕೊಂಡು ಹೋಗಿದ್ದಾರೆ. ಇವತ್ತಿನವರೆಗೆ ಟ್ರೇಸ್ ಮಾಡುವುದಕ್ಕಾಗಿಲ್ಲ. ಏಳೆಂಟು–ಹತ್ತು ಈ ರೀತಿಯಾಗಿವೆ. ನಾನು ಪೊಲೀಸ್‌ನವರನ್ನು ದೂರುವುದಿಲ್ಲ. ಇಂಟೆಲಿಜೆನ್ಸ್ ಫೇಲ್ ಆಗಿದೆ. ನೂರಕ್ಕೆ ನೂರು. ನಮ್ಮ ಹತ್ತಿರ ಇರುವ ಯಾರೋ ಆಫೀಸರ್ ಕೆಟ್ಟವರು ಎಂದು ನಾನು ಮಾತನಾಡುವುದಿಲ್ಲ. ನಿಮಗೇನು

ಮಾಹಿತಿಯೇ ಸಿಗುತ್ತಿಲ್ಲ. ಅಕಸ್ಮಾತ್ ನನ್ನ ಕ್ಷೇತ್ರ ತಿಪಟೂರು ತಾಲ್ಲೂಕು ಬೆಳಗೆರೆಯಲ್ಲಿ 11 ಗಂಟೆಯಲ್ಲಿ ಸೀದಾ ಬಂದು ಇಡೀ ಬ್ಯಾಂಕನ್ನೇ ರಾಬ್ ಮಾಡಿಕೊಂಡು ಹೊರಟುಹೋದರು. ಇದು ಐದಾರು ತಿಂಗಳ ಹಿಂದೆ ನಡೆದಿದೆ. ಸುಮ್ಮನೆ ನೀವು ಅಕೌಂಟ್ ಹೋಲ್ಡರ್ಸ್ ಯಾರ‍್ಯಾರು ಇದ್ದೀರಿ, ನೀವು ನಿಂತುಕೊಳ್ಳಿ, ನಾವೇನು ಮಾಡುವುದಿಲ್ಲವೆಂದು ಹೇಳಿ ಎರಡೇ ಎರಡು ಮೋಟಾರ್ ಸೈಕಲ್ ಸೀದಾ ತೆಗೆದುಕೊಂಡು ಹೋಗಿ ಅಲ್ಲಿ 11-12 ಲಕ್ಷ ರೂಪಾಯಿಗಳನ್ನು ತುಂಬಿಕೊಂಡು ಹೊರಟುಹೋಗಿದ್ದಾರೆ. ಇವತ್ತಿನವರೆಗೆ ಟ್ರೇಸ್ ಆಗಿಲ್ಲ. ಒಂದೇ ಒಂದು ಚೂರು . . . . .

ಶ್ರೀ ಕೆ.ಆರ್.ರಮೇಶ್‌ಕುಮಾರ್ : ಇಂಟಲಿಜೆನ್ಸ್ ಫೇಲ್ ಆಗುವುದಕ್ಕೂ ಕೂಡ ರೀಸನ್ಸ್ ಇರುತ್ತದೆ. ನಿಮಗೆ ಗೊತ್ತಿಲ್ಲ. You are an experienced man. Let it go on record. ಹೇಳಿ. ಸಭೆಗೆ ಅನುಕೂಲವಾಗುತ್ತೆ ಹೇಳಿ. ಏಕೆ ಫೇಲ್ ಆಗುತ್ತೆ? ಸಿಓಡಿ ಏಕೆ ಫೇಲ್ ಆಗುತ್ತೆ? ಟ್ರಾಫಿಕ್‌ನಲ್ಲಿ ಏಕೆ ಸಕ್ಸಸ್ ಆಗುತ್ತೆ? ಪೋಸ್ಟಿಂಗ್ಸ್ ಹೇಗೆ ಹೋಗುತ್ತೆ? Politicalisation of police administration.

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೆ, ನಾನು ಸ್ಪಷ್ಟವಾಗಿ ಹೇಳುತ್ತೇನೆ, ನಾನು ಹೇಳಲು ಹೊರಟಿದ್ದೆ. ನಾನು ವೆಂಕಟಮ್ಮನಹಳ್ಳಿನಲ್ಲೇ ಹೇಳಿದೆ, ಯಾರಿಗೂ ಬೇಡದವರನ್ನು ತೆಗೆದುಕೊಂಡು ಹೋಗಿ ಅಲ್ಲಿಗೆ ಅಧಿಕಾರಿಗಳನ್ನು ಹಾಕಿದ್ದೀರಿ. ನಾನು ಹತ್ತಾರು ಸಲ ರಿಕ್ವೆಸ್ಟ್ ಮಾಡಿದ್ದೇನೆ. ಹಾಡುಹಗಲು ಹನ್ನೊಂದು ಗಂಟೆಯಲ್ಲಿ ನ್ಯಾಶನಲ್ ಹೈವೇಯ ದಂಡೆಯಲ್ಲಿರುವ ಬ್ಯಾಂಕುಗಳು ರಾಬರಿಯಾಗುತ್ತವೆ ಎಂದರೆ ಯಾರು ಉತ್ತರ ಕೊಡುವವರು? ತಾವು ನಮ್ಮ ಸ್ಥಿತಿಯನ್ನು ಕೇಳಬೇಕು. ಎಲ್ಲಾ ಟಿ.ವಿ.ಗಳಲ್ಲಿ ನಾವು ಬಿಂಬಿತರಾಗುತ್ತಿದ್ದೇವೆ. ಕ್ರೈಮ್ ನ್ಯೂಸ್‌ನಲ್ಲಿ ಎಂ.ಎಲ್.ಎ. ಏನೂ action ತೆಗೆದುಕೊಳ್ಳಲಿಲ್ಲ. ಎಂ.ಎಲ್.ಎ. ಬಾಯಿಮುಚ್ಚಿಕೊಂಡಿದ್ದಾರೆ, ಎಂ.ಎಲ್.ಎ. ಅಪರೋಕ್ಷವಾಗಿ ಸಪೋರ್ಟ್ ಆಗುತ್ತಾರೆಂದು ಎಲ್ಲಾ ಕ್ಷೇತ್ರದ ಎಂ.ಎಲ್.ಎ. ಸ್ಥಿತಿ ಅಲ್ಲಿಗೆ ಬರುತ್ತಿದೆ. ಯಾವುದೊ ಕೊಲೆ ಟ್ರೇಸ್ ಆಗಲಿಲ್ಲವೆಂದರೆ ನಾವು ಉತ್ತರ ಹೇಳಬೇಕು. ನಾವು ಸಂಭಾವಿತರಾಗಿ ಮಾತನಾಡುವಂತಿಲ್ಲ, ಈ ಕೇಸ್‌ಗೂ ಶಾಸಕರಿಗೂ ಸಂಬಂಧವಿಲ್ಲ I cannot meddle with the investigation of murder case or 302 offence, ಎಂದು ಈಗ ಹೇಳುವಂತಿಲ್ಲ. ಜನ ನಮ್ಮನ್ನು ದೂರುತ್ತಿದ್ದಾರೆ. ನಿಮ್ಮ ಕ್ಷೇತ್ರದಲ್ಲೇ ನಡೆಯಿತು. ನಿಮ್ಮ ಕ್ಷೇತ್ರದಲ್ಲೇ ಸ್ವಾಮೀಜಿಗಳ ಹಗರಣ ಬಂದಾಗ ಇವತ್ತು ಒಂದು ವರದಿ, ನಾಳೆ ಒಂದು ನಾಡಿದ್ದು ಮತ್ತೊಂದು, ಟಿ.ವಿ.ಯನ್ನು ನೋಡುತ್ತಿರುವವರಿಗೆ ಆ ಕಷ್ಟ ಏನೆಂಬುದು ಗೊತ್ತಾಗುತ್ತದೆ. ನೀವು ಈಗ ಏಲ್.ಹೆಚ್.ನಲ್ಲಿ ಕೇಬಲ್ ಟಿ.ವಿ. ನೆಟ್‌ವರ್ಕ್ ಇಲ್ಲದಂತೆ ಮಾಡಿ ನಮ್ಮ ಕಷ್ಟವನ್ನು ತಪ್ಪಿಸಿಬಿಟ್ಟಿದ್ದೀರಾ, ಸುಮ್ಮನೆ ಮಲಗಿಕೊಳ್ಳಿ ಎಂಬ ಸ್ಥಿತಿಗೆ ತಂದಿದ್ದೀರಿ. ತಾವು ರೆಗ್ಯುಲರ್ ಆಗಿ ಟಿ.ವಿ. ಯನ್ನೇನಾದರು view ಮಾಡಿಬಿಟ್ಟರೆ ನಾವೇ ಯಾವ್ಯಾವ ಸ್ಥಿತಿಯಲ್ಲಿರುತ್ತೇವೆ, ಇದು ಸತ್ಯವೋ? ಅದು ಸತ್ಯವೊ ಎಂದು ವಿಮರ್ಶೆ ಮಾಡಲು ಹೊರಟರೆ ನೂರಕ್ಕೆ ನೂರಕ್ಕೆ ಇಂಟಲಿಜೆನ್ಸ್ ರಾಜ್ಯದಲ್ಲಿ fail ಆಗಿದೆ. ಮಾನ್ಯ ರಮೇಶ್‌ಕುಮಾರ್‌ರವರು ಹೇಳಿದ ಮಾತನ್ನು Yes, I endorse. ಪೊಲೀಸ್ ಪೋಸ್ಟಿಂಗ್‌ನ್ನು, ಪೊಲೀಸ್ ಇಲಾಖೆಯಲ್ಲಿ ನೀವು ಹಾಕುತ್ತಿರುವ ಅಧಿಕಾರಿಗಳನ್ನು ಅತ್ಯಂತ ನಿರುಪಯುಕ್ತರಾದ ಅಧಿಕಾರಿಗಳನ್ನು COD ಗೆ ತರುವುದು intelligence ಗೆ ತರುವುದು ಮಷ್ಟಿನಲ್ಲಿ ಬಿಡುವ ಕೆಲಸವನ್ನು ನೀವು ಮಾಡಿಕೊಂಡು ಬಂದರೆ,

ಮಫ್ತಿಯಲ್ಲಿರುವ ಪೋಲೀಸಿನವರೂ ಯಾರು? ಹತ್ತು ಹನ್ನೆರಡು ವರ್ಷದಿಂದ ಇದ್ದಾರೆ. They have acquainted with them ನಮ್ಮ ಭಾಗದಲ್ಲಿ ಯಾರನ್ನಾದರೂ ಒಬ್ಬರು ಇಂಥವರನ್ನು ಹಿಡಿದುಕೊಂಡು ಬನ್ನಿ ಎಂದರೆ ನಾಲ್ಕು ಕಾಯಿ ಕೊಟ್ಟುಬಿಟ್ಟರೆ ನೀನು ಇರಲಿಲ್ಲ ಎಂದು ಹೇಳುತ್ತೇನೆ, ನೀನು ಕಾಣಬೇಡ ಎಂದು ಹೇಳುವ ಪರಿಸ್ಥಿತಿಗೆ ಪೋಲೀಸ್‌ನವರು ಇವತ್ತು ಬಂದಿದ್ದಾರೆ, ಖಂಡಿತ, I stand by it. ನಾವು ಕಳುಹಿಸಿದ ಪೋಲೀಸ್‌ನವರೇ ಅವರಿಗೆ ಹೋಗಪ್ಪ ಎಂದು ಹೇಳಿಬಿಡುತ್ತಾರೆ, ಸಾಹೇಬರು ಬಂದು ಕೇಳಿದರೆ ನಾನು ಮನೆಯಲ್ಲಿ ಇರಲಿಲ್ಲವೆಂದು ಹೇಳಯ್ಯಾ ಎಂದು ಹೇಳುತ್ತಾರೆ. ಆ ಸ್ಥಿತಿಯಲ್ಲಿ ಇವತ್ತು officers ಇದ್ದಾರೆ. ಆ ಸ್ಥಿತಿಯ officers ನ್ನು ತಾವು ಪೋಸ್ಟಿಂಗ್‌ನ್ನು ಕೊಟ್ಟಿದ್ದೀರಿ. ಇಲ್ಲಿ ನಿಮ್ಮ ಡಿ.ಜಿ., ಐ.ಜಿ. ರೆಕಮಂಡೇಷನ್‌ಗೆ ಏನೂ ಸ್ಥಾನನೇ ಇಲ್ಲ. ಪೋಲೀಸ್‌ಗೆ ಒಂದು ಗೌರವವಿತ್ತು. ಅವರ ಎಸ್.ಆರ್.ಗಳನ್ನು ನೋಡಿ ಪೋಸ್ಟಿಂಗ್‌ಗಳನ್ನು ಕೊಡುತ್ತಿದ್ದರು. ಅವರ ಸಿ.ಆರ್. ಗಳನ್ನು ಗಮನದಲ್ಲಿಟ್ಟುಕೊಳ್ಳುತ್ತಿದ್ದರು. ಎಸ್.ಪಿ. ಸಬ್‌ಇನ್ಸ್‌ಪೆಕ್ಟರ್ ಬಗ್ಗೆ ಏ.ಎಸ್.ಐ ಬಗ್ಗೆ, ಸರ್ಕಲ್ ಇನ್ಸ್‌ಪೆಕ್ಟರ್ ಬಗ್ಗೆ ಏನು ಬರೆಯುತ್ತಾನೆ ಎಂಬುವುದನ್ನು ಮೊದಲೆಲ್ಲಾ ನೋಡುತ್ತಿದ್ದರು. ಒಂದು key position ಗೆ ಯಾರ್ಯಾರನ್ನು ಪೋಸ್ಟಿಂಗ್ ಕೊಟ್ಟರೆ ವ್ಯವಸ್ಥೆ ಚೆನ್ನಾಗಿರುತ್ತದೆಯೋ ಎಂಬುದನ್ನು ನೋಡುತ್ತಿದ್ದರು. ಆದಷ್ಟು ಸ್ಥಳೀಯವಾದ ಅಕ್ವೆಟೆನ್ಸ್ ಇಲ್ಲದವರಿಗೆ ಪೋಸ್ಟಿಂಗ್‌ನ್ನು ಕೊಟ್ಟುಕೊಂಡು ನ್ಯೂಟ್ರಲ್ ಆಗಿ ಪೊಲೀಸ್ officers ನ್ನು ಹಾಕುತ್ತಿದ್ದನ್ನು ನಾವು ನೋಡಿದ್ದೇವೆ. ಆದರೆ ಇವತ್ತು ಆ ರೀತಿ ಇಲ್ಲ. ಆ ಊರು ಆ ಕ್ಷೇತ್ರದಲ್ಲಿ ಅಲ್ಲೇ ಹುಟ್ಟಿ ಅಲ್ಲೇ ಜಮೀನು ಮಾಡುವನು ಅಲ್ಲಿ ಏ.ಎಸ್.ಐ. ಇದ್ದಾನೆ, ಎಸ್.ಐ. ಇದ್ದಾನೆ, ಅವನೆ ಬಯಾಸ್ ಆಗಿದ್ದಾನೆ, ಇವತ್ತು ಪೊಲೀಸ್ ಆಫೀಸರ್ಸ್ ನಲ್ಲಿ ಅವನ ಬಗ್ಗೆಯೇ ಪರ ವಿರೋಧ ಇದೆ. I will give hundred of officers list. ನೂರು ಜನ ಸಬ್ ಇನ್ಸ್‌ಪೆಕ್ಟರ್‌ಗೆ local acquaintance ಇರುವವರ ಲಿಸ್ಟ್‌ನ್ನು ಬೇಕಾದರೆ ನಾಳೆ ಬೆಳಿಗ್ಗೆ ಮಾನ್ಯ ಮುಖ್ಯಮಂತ್ರಿಯವರಿಗೆ ಕಳುಹಿಸುತ್ತೇನೆ.

ಶ್ರೀ ಗೋವಿಂದ ಎಂ. ಕಾರಜೋಳ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಒಂದು ನಿಮಿಷ ಈಲ್ಡ್ ಆಗಿ. ಈ ವಿಚಾರದಲ್ಲಿ ನಾನು ಪೋಲೀಸ್ ಮಹಾ ನಿರ್ದೇಶಕರಿಗೆ ಮತ್ತು ಗೃಹ ಕಾರ್ಯದರ್ಶಿಯವರಿಗೆ ಸ್ಪೆಸಿಫಿಕ್ ಆಗಿ ಇಂಥ ಅಧಿಕಾರಿಗಳ ಬಗ್ಗೆ ನಾನು ಶಾಸಕನಾಗಿ ಬಂದ ಎರಡೇ ತಿಂಗಳಿನಲ್ಲಿ ಬರೆದುಕೊಟ್ಟರೂ ಇವತ್ತಿನವರೆಗೆ ಅದು ಏನೂ ಆಗಿಲ್ಲ, ಅವರು ಆರಾಮವಾಗಿದ್ದಾರೆ, ಅದಲ್ಲದೆ ನಮ್ಮ ಬಗ್ಗೆ ಎಷ್ಟು ಲೈಟಾಗಿ ಮಾತನಾಡುತ್ತಾರೆಂದರೆ, ನಮ್ಮ ಜನರ ಮುಂದೆ, ಯಾರು ನಮ್ಮ ಹತ್ತಿರ ತಕರಾರು ಬಂದು ಹೇಳಿದ್ದರು ಅವರನ್ನು ಕೇಳಿಕೊಂಡು ನಾವೇನು ಬರೆದಿದ್ದೆವೋ ಅವರ ಹತ್ತಿರ ಹೋಗಿ ನಿಮ್ಮ ಎಂ.ಎಲ್.ಎ. ನಿಂದ ಏನೂ ಮಾಡಿಕೊಳ್ಳಲು ಆಗುವುದಿಲ್ಲವೆಂದು ಅವರಿಗೆ ಹೋಗಿ ಹೇಳು ಎಂದು ಹೇಳುತ್ತಾರೆ. ಈ ಮಟ್ಟಕ್ಕೆ ಅವರು ಬಂದಿದ್ದಾರೆ.

ಶ್ರೀ ಜೆ.ಸಿ.ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೆ, ನಾನು ಬಹಳ ಹೊತ್ತು ಮಾತನಾಡಲು ಸಮಯ ತೆಗೆದುಕೊಂಡೆ ಎಂದು ಕೇಳಿಕೊಂಡು ಒಂದು ಮಾತನ್ನು ಹೇಳಲು ಇಷ್ಟಪಡುತ್ತೇನೆ. ನನ್ನ ಅಪ್ರಹೆನ್‌ಷನ್, ನಮ್ಮದು ಮೈನಿಂಗ್ ಏರಿಯಾ. ಈಗಾಗಲೇ ಕಾಗದಗಳು ಶುರುವಾಗಿಬಿಟ್ಟಿದೆ. ನಾವು ಐರನ್ ಓರ್, ಮ್ಯಾಂಗನೀಸ್ ಓರನ್ನು ಮೈನ್ ಮಾಡುತ್ತಿಲ್ಲ. ನೇರವಾಗಿ ಚಿನ್ನದ ಮೈನಿಂಗ್ ಮಾಡುತ್ತಿದ್ದೇವೆ. ಎರಡು ವರ್ಷದ ಹಿಂದೆ ಒಂದು ಟನ್ ಓರ್‌ಗೆ 65 ರೂಪಾಯಿ ಇದ್ದ ಬೆಲೆ ಇವತ್ತು ಎರಡು ಸಾವಿರ ರೂಪಾಯಿ ದಾಟಿದೆ. ಎಲ್ಲಾ ದುಡ್ಡಿರುವವರು, ಎಲ್ಲರೂ, ಈ ರಾಜ್ಯದಲ್ಲಿ,

ಆಂಧ್ರ ಪ್ರದೇಶದಲ್ಲಿ ಯಾರ್ಯಾರ ಹತ್ತಿರ ದುಡ್ಡಿದೆ ಅವರೆಲ್ಲಾ ಚಿಕ್ಕನಾಯಕನಹಳ್ಳಿ, ಹೊಸಪೇಟೆ, ಹೊಸದುರ್ಗ ಈ ಭಾಗವನ್ನು ಬಹಳ ಆಸಕ್ತಿಯಿಂದ ನೋಡುವ ಸ್ಥಿತಿಯನ್ನು ಸರ್ಕಾರ ನಿರ್ಮಾಣ ಮಾಡಿಬಿಟ್ಟಿದೆ. ಇನ್ನೊಂದು ಕಡೆ ಇನ್ನೊಂದು ಗುಂಪು ಬೆಳೆಯುತ್ತಿದೆ. ನಮ್ಮದೆಲ್ಲಾ ಲೂಟಿಯಾಗುತ್ತಿದೆ, ನಾವು ನಕ್ಸಲ್ಸ್ ಜೊತೆ ಹೋಗಬೇಕು, ನಾವು ರೈತ ಸಂಘದವರ ಜೊತೆ ಹೋಗಬೇಕು, ನಾವು ಲಾರಿ ತಡೆಯಬೇಕು. ನನ್ನ ಕ್ಷೇತ್ರದಲ್ಲಿ ಇವತ್ತು ನಿತ್ಯ ಲಾ ಅಂಡ್ ಆರ್ಡರ್ ಪ್ರಾಬ್ಲಮ್ ಇದೆ. ನಾವೆಲ್ಲರೂ ನಾಚಿಕೆಯಿಂದ ತಲೆತಗ್ಗಿಸಬೇಕಾದ ಸ್ಥಿತಿ ನಿರ್ಮಾಣವಾಗಿದೆ. ಏಕೆ ಲಾರಿಯನ್ನು ತಡೆದಿರಿ ಎಂದರೆ ಮೈನ್ಸ್‌ನವರಿಂದ ದುಡ್ಡು ತೆಗೆದುಕೊಂಡಿದ್ದೀರಿ ಎಂದು ಹೇಳುತ್ತಾರೆ. ಏಕೆ ತಡೆಯುತ್ತೀರೆಂದರೆ ಲಾ ಅಂಡ್ ಆರ್ಡರ್ ಹಾಳು ಮಾಡುತ್ತಿದ್ದಾರೆ ಎಂದು ಪೊಲೀಸ್‌ನವರು ಹೇಳುವಂಥ ಸ್ಥಿತಿಗೆ ಬಂದಿದೆ. ಹೋಗಲಿ ಬಿಡಿ ಲಾರಿ ಲೀಸ್ ಇದೆಯೆಂದು ನಾನು ಅಂದುಬಿಟ್ಟರೆ ಇವರು ಮೈನ್ಸ್ ಲಾಬಿಗೆ ಈಲ್ಡ್ ಆಗಿಬಿಟ್ಟಿದ್ದಾರೆ, ಇವರಿಗೆ ಮೈನ್ಸ್‌ನವರು ಚೆನ್ನಾಗಿ ನೋಡಿಕೊಂಡಿದ್ದಾರೆ ಎಂದು ಹೇಳುವ ಸ್ಥಿತಿಗೆ ಬಂದಿದೆ. ತಡೆಯಬೇಡಿ ಎಂದರೆ ಆ ಸ್ಥಿತಿ, ತಡೆಯಿರಿ ಎಂದರೆ ಲಾ ಅಂಡ್ ಆರ್ಡರ್ ಸ್ಥಿತಿ, ಕಾನೂನು ಪಾಲನೆಯ ಸ್ಥಿತಿ, ಇದರ ಜೊತೆಗೆ ಸರ್ಕಾರ ನಡೆಸುತ್ತಿರುವವರು ಹೇಗಿದ್ದಾರೆಂದರೆ, ನಮ್ಮ ಉಸ್ತುವಾರಿ ಸಚಿವರು stop mines ಎಂದು ಹೇಳುತ್ತಾರೆ, release mines ಎಂದು ಹೇಳುತ್ತಾರೆ. ಇದು ಲಾ ಅಂಡ್ ಆರ್ಡರ್ ನಡೆಯುವ ಸ್ಥಿತಿಯೇ? I challenge this House, who has given powers to the District Minister to stop or seize the records of the Mines and Geology's office. ಏಕಾಏಕಿ ನಾನೆಲ್ಲಾ ರೆಕಾರ್ಡ್‌ನ್ನು ಸೀಜ್ ಮಾಡಿದ್ದೇನೆ, ನಾಳೆಯಿಂದ ಮೈನಿಂಗ್ ಆಗಬಾರದು, ನಾಡಿದ್ದು ಬೆಳಿಗ್ಗೆ ಅದನ್ನು ಬಿಟ್ಟುಬಿಡಿ, ನನ್ನ ಹತ್ತಿರ ಬಂದು ಮಾತನಾಡಿ ಹೋಗಿದ್ದಾರೆ ಎಂದು ಹೇಳುತ್ತಾರೆ. What is going on in this State? ತಾವು ಹೇಳಬೇಕು? ತಾವು ಮುಖ್ಯಮಂತ್ರಿಯವರು ತಾವು ಆ ಖಾತೆಯ ಸಚಿವರು, ತಾವು ಪೊಲೀಸ್ ಖಾತೆಯ ಸಚಿವರು, ಯಾರ್ಯಾರಿಗೆ ಮೈನ್ಸ್‌ನ್ನು ಅಡವಿಟ್ಟಿದ್ದೀರಿ ಎಂದು ಇಲ್ಲಿ ಹೇಳಬೇಕು. ನಾನು ಮೈನ್ಸ್‌ನ್ನು ಏಕೆ ಬಳಕೆ ಮಾಡುತ್ತಿದ್ದೇನೆಂದರೆ the entire law and order is spoiled in Chikkanayakanahalli, because of these mining operations. ದಿನ ನೂರು, ಇನ್ನೂರು, ಮುನ್ನೂರು ಲಾರಿ ಅಡ್ಡಗಟ್ಟಿ ನಿಲ್ಲಿಸುತ್ತಾರೆ, ಯಾರಿಗೆ ದುಡ್ಡು ಬೇಕೋ ಅವನು ಓಡೋಗಿ ಕುಳಿತುಕೊಳ್ಳುತ್ತಾನೆ, ನನಗೆ ದುಡ್ಡುಕೊಟ್ಟರೆ ಲಾರಿ ಮುಂದಕ್ಕೆ ಬಿಡುತ್ತೇನೆಂದು ಹೇಳುತ್ತಾನೆ, ಕೊಟ್ಟು ಕೊಟ್ಟು ಎಲ್ಲರಿಂದ ಮೈನ್ಸ್‌ನವರು ಕಲೆಕ್ಟ್ ಮಾಡುತ್ತಿದ್ದಾರೆ, ಇವತ್ತು ಸ್ವಲ್ಪ ವಿಶ್ವಾಸವನ್ನು ಇಟ್ಟುಕೊಂಡು ಜನರ ಜೊತೆ ಕೆಲಸ ಮಾಡಲು ಆಗುತ್ತಿಲ್ಲ. ಯಾರಿಗೆ ಬೇಕೋ ಅವನು ಹೋಗಿ ಲಾರಿಯನ್ನು ತಡೆಯುತ್ತಾನೆ. ಮಾನ್ಯ ಮಂಜುನಾಥ್‌ನವರಿಗೆ ಇದರ ಅನುಭವವಿದೆ, ಅವರು ಇದನ್ನು ಎಂಡಾರ್ಸ್ ಮಾಡುತ್ತಾರೆ, ಹೊಸದುರ್ಗದವರು ಇದನ್ನು ಎಂಡಾರ್ಸ್ ಮಾಡಬೇಕು. ನಾನು ಚಿಕ್ಕನಾಯಕನಹಳ್ಳಿಯವನು ಹೇಳಬೇಕು, ಕಿರಣ್‌ಕುಮಾರ್ ಹೇಳಬೇಕು, ಇವತ್ತು ಕಷ್ಟವಾಗಿಬಿಟ್ಟಿದೆ, ಇನ್ನೊಂದು ಗುಂಪು ಉದ್ಯೋಗ ಇಲ್ಲದ Youngsters ದ್ದು ಬೆಳೆಯುತ್ತಿದೆ. ಹೆದುರಿಸಬೇಕಾ? ಹೋಗಿ ಲಾರಿ ತಡೆ, ಜೆ.ಸಿ.ಬಿ. ನಿಲ್ಲಿಸು, ರಸ್ತೆಗೆ ಬಂದು ಕುಳಿತುಕೋ ಎಂದು ಆಗಿದೆ. ಇದಕ್ಕೆ ಹೇಳುವವರು ಯಾರು? ಕೇಳುವವರು ಯಾರು? ಇದಕ್ಕೆ ತಕ್ಕನಾಗಿ ಸಚಿವರುಗಳೂ ನಡೆದುಕೊಳ್ಳುತ್ತಿದ್ದಾರೆ. ಏಕಾಏಕಿ ಮೈನ್ ಸೀಜ್ ಆಗುತ್ತದೆ, ಏಕಾಏಕಿ ಮೈನಿಂಗ್ start ಆಗುತ್ತದೆ,

ನಾವು concerned MLA ಗಳಿಗೆ ಗೊತ್ತಿಲ್ಲ, ಇವತ್ತೂ ಕೂಡ ಅವರು ಚಿಕ್ಕನಾಯಕನಹಳ್ಳಿಯಲ್ಲಿ ಏಕೆ ಮೈನ್ಸ್‌ನ್ನು ನಿಲ್ಲಿಸಿಲ್ಲವೆಂಧು ಹೇಳುತ್ತಿದ್ದಾರೆ. If your colleagues feels, if a Minister of the District Incharge feels ನೀವೇನು ಅವರಿಗೆ ರಾಜತ್ವವನ್ನು ವಹಿಸಿಕೊಟ್ಟಿದ್ದೀರಿ ಅಲ್ಲಿ environment ಹಾಳಾಗುತ್ತಿದೆ, pollution ಆಗುತ್ತಿದೆ, please ಕೈಮುಗಿಯುತ್ತೇನೆ ಆ mines lease ನಿಲ್ಲಿಸಿಬಿಡಿ. ನಮಗೇನೂ ಆಗಬೇಕಾಗಿಲ್ಲ, ನಡೆಸಬೇಕಾ. ಮೊದಲೇ ನಿಮ್ಮ ಹತ್ತಿರ ಇರುವವರಿಗೆ ಹೇಳಿ. It is an illegal order. ಇಂಥದಿಕ್ಕೆಲ್ಲಾ ಅಧಿಕಾರಿಗಳನ್ನು, ಜನರನ್ನು ಬಲಿಪಶುಗಳನ್ನಾಗಿ ಮಾಡಬೇಡಿ ಎಂದು ಹೇಳಿ, ಎಸ್.ಪಿ; ಡಿ.ಸಿ. ಅಲ್ಲಿಗೆ ಬಂದು ಏನು ಮಾಡಬೇಕು? Where is the law and order in the District? ಹೇಳುವವರು ಕೇಳುವವರು ಯಾರು? ಯಾರ‍್ಯಾರದೋ ಆದೇಶ, ಯಾರೋ ಒಬ್ಬ ನಿಲ್ಲಿಸುವುದು, ಯಾರೋ ಪಾಪ ರಿಲೀಸ್ ಮಾಡುವುದು, ನಾವು ಯಾರಿಗೆ ಹೇಳುವುದು. ಅದೂ ಇವರ ಕಾಲದಲ್ಲಿ both portfolios are with the Chief Minister. Home, Mines ನಿಮ್ಮ ಹತ್ತಿರ ಇದೆ, ನಡೆಯಬಾರದ್ದೆಲ್ಲಾ ಲಾ ಅಂಡ್ ಆರ್ಡರ್ ಪ್ರಾಬ್ಲಮ್ ನಮ್ಮಲ್ಲಿ ನಡೆಯುತ್ತಿದೆ. ಚಿಕ್ಕನಾಯಕನಹಳ್ಳಿಯಲ್ಲಿ just because of mininig operations ಕಳೆದ ಮೂರು ತಿಂಗಳಿನಿಂದ ನಾಲ್ಕು ಸಲ 144 ಸೆಕ್ಷನ್ ಡಿಕ್ಲೇರ್ ಮಾಡಿದ್ದಾರೆ. ನಾಲ್ಕು ಸಲ 144 ವಿಧಿಯನ್ನು ಅಲ್ಲಿ impose ಮಾಡಿದ್ದಾರೆ. ನಮ್ಮ ಊರು ಗಲಾಟೆಗೆ ಅಥವಾ ಗಲಭೆಗೆ ಯಾವತ್ತೂ ಕೇಳಿದ್ದ ಊರಲ್ಲ, ಆದರೆ ಈಗ ಪ್ರಾರಂಭವಾಗಿದೆ, ಏಕೆ? There is money and that money is exploited. Exploitation ಆಗುವ ಕಡೆಯೇ ನಿಮ್ಮ ನಕ್ಸಲ್ಸ್ ಬೆಳೆಯುವುದು. ಅದರಿಂದ ರಾಜ್ಯಕ್ಕಾಗಲೀ ತಾಲ್ಲೂಕಿಗಾಗಲೀ ಜಿಲ್ಲೆಗಾಗಲೀ ಒಂದು ರೂಪಾಯಿ ವರಮಾನ ಇಲ್ಲದ ಸ್ಥಿತಿ ನಿರ್ಮಾನ ಮಾಡಿದ್ದೀರಿ, ತೀರಾ ಶ್ರೀಮಂತರು ಬಂದು ಅಲ್ಲಿ ಯಜಮಾನಿಕೆಯನ್ನು ಮಾಡುತ್ತಿದ್ದಾರ,.ಲೋಕಲ್‌ನವರಿಗೆ ಅದನ್ನು ಸಹಿಸುವ ಸ್ಥಿತಿ ಇಲ್ಲ. They will one day convert as Naxalites. They will one day convert as terrorists. ಆ ಹುಡುಗರಿಗೆ ಇವತ್ತು ಕೊರಳ ಪಟ್ಟಿ ಹಿಡಿದುಕೊಂಡರೆ ನಮಗೆ ಏನಾದರೂ ಕೊಡುತ್ತಾರೆ, ದಯ ದಾಕ್ಷಿಣ್ಯ ತೋರಿದರೆ ನಮಗೆ ಏನೂ ಬರುವುದಿಲ್ಲವೆಂಬ ಭಾವನೆ ಬಂದುಬಿಟ್ಟಿದೆ. ಈ ಮನೋಭಾವನೆಯನ್ನು change ಮಾಡುವುದಕ್ಕೆ ತಾವು ಏನಾದರೂ ಪ್ರಯತ್ನ ಮಾಡಬೇಕು, otherwise ಶಾಂತಿಪ್ರಿಯವಾದ ಜಿಲ್ಲೆಗಳು ನಾಳೆ ಇವತ್ತು ಆಳ್ವಿಕೆಯನ್ನು ಮೀರಿ ಹೋಗಿಬಿಡುತ್ತವೆ. ನೂರು ಜನ, ಇನ್ನೂರು ಜನರ ಗ್ಯಾಂಗ್ ಆರಂಭವಾದ ಮೇಲೆ ನೀವು ಕಂಟ್ರೋಲ್ ಮಾಡುವುದಕ್ಕಾಗುವುದಿಲ್ಲ This is the right time, ನಿಮ್ಮ ಜೊತೆ ಇದ್ದೇವೆ, ದಯಮಾಡಿ ರಾಜ್ಯದ ಕಾನೂನನ್ನು ನೀವು ವ್ಯವಸ್ಥೆಗೆ ತರಬೇಕಾಗಿದೆ, ಒಂದು ಕಡೆ ನಿಜವಾಗಿ ಆಂಧ್ರ ಪ್ರದೇಶದ border ನಲ್ಲೇನು ಪ್ರಾರಂಭವಾಗಿದೆ, ಈ ಮುತ್ತುರತ್ನ ಬಾಚಿದಾಗನಿಂದಲೇ ಈ ಗಲಾಟೆ, ಇನ್ನೊಂದು ಕಡೆ ನಮಗೆ ಮೈನ್ಸ್ ನಡೆಯುತ್ತಿರುವ ಕಡೆ start ಆಗಿದೆ, ತಾವು ತಕ್ಷಣ ಕ್ರಮ ತೆಗೆದುಕೊಳ್ಳಬೇಕು. ನಾವು ಆ ರೀತಿ ಕೊಡುವುದು ತಪ್ಪು ಅದಕ್ಕೆ ರಾಜಸ್ವ ಬರುತ್ತಿಲ್ಲವೆಂದು ಹೇಳುತ್ತೇವೆ. ವರಮಾನ ಬರುತ್ತಿಲ್ಲ, ನಮ್ಮ ನಾಡಿನ ಸಂಪತ್ತು ಲೂಟಿಯಾಗುತ್ತಿದೆ, ಏನಾದರೂ ಮಾಡಿ ಅದರಲ್ಲಿ ಸ್ವಲ್ಪ ಸರ್ಕಾರಕ್ಕೆ ತೆಗೆದುಕೊಳ್ಳಬಹುದಾಗಿತ್ತು ಎಂದು ಅನೇಕ ಸಲ ಇಲ್ಲಿ ಹೇಳಿದ್ದೇವೆ, ಆದರೆ ನೀವು ಕೇಳುವುದಿಲ್ಲ, ನೀವು ಒಂದು ಟನ್‌ಗೆ 17 ಇಲ್ಲವೆ 65 ರೂಪಾಯಿಗಳನ್ನೊ ಲೀಸ್ ಅಮೌಂಟ್ fix ಮಾಡಿ

ಅವರು ಎರಡು ಇಲ್ಲವೆ ಎರಡೂವರೆ ಸಾವಿರ ದುಡಿದುಕೊಳ್ಳುವ ಸ್ಥಿತಿಯನ್ನು ನಿರ್ಮಾಣ ಮಾಡಿದ್ದೀರಿ, 17 ಟನ್ ಹಾಕಿಕೊಂಡು ಹೋಗುವ ಲಾರಿಯಲ್ಲಿ 34 ಇಲ್ಲವೆ 35 ಟನ್ 70 ಟನ್ ತೆಗೆದುಕೊಂಡು ಹೋಗುವ ಸ್ಥಿತಿಯನ್ನು ನಿರ್ಮಾಣ ಮಾಡಿದ್ದೀರಿ, ಯಾರೂ ತಡೆಯುವುದಿಲ್ಲ, ಒಂದು ಸಿಗರೇಟ್ ಕಾಗದದ ಮೇಲೆ ಬರೆದುಕೊಡುತ್ತಾರೆ, ಅದು ನಾಲ್ಕು ಆರ್.ಟಿ.ಓ. ಆಫೀಸ್ ಪಾಸ್ ಆಗುತ್ತದೆ, ಎಂಟು ಸಾವಿರ ರೂಪಾಯಿ ಒಂದು ಲಾರಿಗೆ ನಿಗದಿಯಾಗಿದೆ. I challenge ಈ ಸಭೆಯಲ್ಲಿ ಎಂಟು ಸಾವಿರ ರೂಪಾಯಿಗಳನ್ನು ಒಂದು ಲಾರಿಯವರು ಕೊಟ್ಟುಬಿಟ್ಟರೆ ನಾಲ್ಕು ಆರ್.ಟಿ.ಓ. ಏರಿಯಾವನ್ನು ಪಾಸ್ ಮಾಡಿಕೊಂಡು ಮಂಗಳೂರಿನವರೆಗೆ ಹೋಗಿಬಿಡುತ್ತಾನೆ, ಕೊಡಲಿಲ್ಲವೆಂದರೆ ಲಾರಿ ಸೀಜ್ ಆಗುತ್ತದೆ. ಕೊಡಲಿಲ್ಲವೆಂದರೆ ಓವರ್ ಲೋಡ್ ಆಗುತ್ತದೆ, ಪ್ರತಿದಿವಸ 35 ಟನ್ ಹಾಕಿಕೊಂಡು ಹೋಗುವುದು ಇವರಿಗೆ ಗೊತ್ತಿಲ್ಲವೆ? ರೆವಿನ್ಯೂ ಜನರೇಜ್ ಮಾಡಬಾರದಿತ್ತೆ? ಅಲ್ಲಿ ಇಷ್ಟೊಂದು ಮೈನ್ಸ್ ಹೋಗುತ್ತಿದೆ, ಸ್ಥಳೀಯರಿಗೆ ಏನಾದರೂ ಉದ್ಯೋಗ ಕೊಡಿ ಎಂದು ಹೇಳಬಾರದಿತ್ತಾ? ಒಂದು ಸಣ್ಣ ಕೈಗಾರಿಕೆಯನ್ನು ಮಾಡಿ ಅಸಂತೃಪ್ತರೇನಿದ್ದರು, Youngsters ಯಾರಿದ್ದರು, job ಇಲ್ಲವೆಂದು ಯಾರು ಬೀದಿ ಬೀದಿಯಲ್ಲಿ ಅಲೆಯುತ್ತಿದ್ದರು ಅವರಿಗೆ ಕೆಲಸವನ್ನು ಕೊಟ್ಟು ಅವರನ್ನು ಶಾಂತಿಪ್ರಿಯರಾಗಿ ಬಾಳಿ ಎಂದು ಹೇಳುವುದು ಇವತ್ತು ನಮ್ಮ ಜವಾಬ್ದಾರಿಯಾಗಿರಲಿಲ್ಲವೆ? ಇವರನ್ನೆಲ್ಲಾ ನಾವೇ ಟೆರರಿಸ್ಟ್‌ಗಳನ್ನಾಗಿ ಮಾಡಿ ಇವರನ್ನೆಲ್ಲಾ ನಾವೇ ನಕ್ಸಲ್ಸ್‌ರನ್ನಾಗಿ ಮಾಡಿ ಕೊಂದುಬಿಡಿ, ನಮ್ಮನ್ನೂ ಸೇರಿಸಿ ಕೊಂದುಬಿಡಿ. ನಾವು ಟೆರರಿಸ್ಟೇ ಏಕೆಂದರೆ ನಿಮಗೆ ಇಲ್ಲಿ ನಿಂತುಕೊಂಡು ವಿರೋಧ ಮಾಡುತ್ತೇವೆ ಅಲ್ಲಾ. ರಾಜ್ಯದಲ್ಲಿ ಈ ಸ್ಥಿತಿ ನಿರ್ಮಾಣವಾಗಿದೆ. ಆದುದರಿಂದ, ನಾನು ಅತ್ಯಂತ ವಿನಯದಿಂದ ತಮ್ಮ ಮೂಲಕ ಸರ್ಕಾರದಲ್ಲಿ ಪ್ರಾರ್ಥಿಸಿ ಕೊಳ್ಳುವುದೇನೆಂದರೆ, ನಮ್ಮದು ನಿಜವಾಗಿಯೂ ಒಳ್ಳೆಯ ರಾಜ್ಯವಾಗಿದ್ದು, ಇಲ್ಲಿ ಉತ್ತಮ ಸಂಭಾವಿತರು, ಶಾಂತಿಪ್ರಿಯರು ನೆಲೆಸಿರುವ ರಾಜ್ಯವನ್ನು ಅಧೋಗತಿಗೆ ತೆಗೆದುಕೊಂಡು ಹೋಗುವ ಮೊದಲು ಇಲ್ಲಿನ ಕಾನೂನು ಹಾಗೂ ಸುವ್ಯವಸ್ಥೆಯತ್ತ ಮಾನ್ಯ ಮುಖ್ಯಮಂತ್ರಿಗಳು ಗಮನಹರಿಸಬೇಕು. ನನ್ನನ್ನೂ ಒಳಗೊಂಡಂತೆ ಅಡಚಣೆಯುಂಟಾಗಿದ್ದರೆ ನನ್ನನ್ನೂ ಸೇರಿಸಿ ಈ ಎಲ್ಲಾ ಕಾರಣಗಳಿಂದಾಗಿ ಈ ರಾಜ್ಯಕ್ಕೆ ಮುಂದಿನ ದಿವಸಗಳು ಬಹಳ ಗಂಡಾಂತರಕಾರಿಯಾಗಿದೆಯೆಂದು ಹೇಳುತ್ತಾ ತಮಗೆ ವಾದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಅಧ್ಯಕ್ಷರೆ, ನಾವು ನಿಲುವಳಿ ಸೂಚನೆ ಅಥವಾ ನಿಯಮ 69ರಡಿ ಚರ್ಚಿಸುವುದರ ಬದಲು ಈ ಮೊದಲು ಸರ್ಕಾರವೇ ಒಂದು ಹೇಳಿಕೆ ನೀಡಬೇಕಾಗಿತ್ತು. ಚಿಕ್ಕಮಗಳೂರಿನಲ್ಲಿ ಆದದ್ದೇನು? ಪಾವಗಡದಲ್ಲಿ ಆದದ್ದೇನು? ಈ ಬಗ್ಗೆ ಏನೇನು ಜರುಗಿದೆ ಎಂಬ ಬಗ್ಗೆ ಸರ್ಕಾರವೇ ನೇರವಾಗಿ ಹೇಳಬೇಕಾಗಿತ್ತು. ಈ ಎಲ್ಲದರ ಬಗ್ಗೆಯೂ ಸವಿಸ್ತಾರವಾಗಿ ಈ ಸದನ ಆರಂಭವಾದ ತಕ್ಷಣ ಗೃಹಮಂತ್ರಿಗಳಾಗಿರುವ ಮಾನ್ಯ ಮುಖ್ಯಮಂತ್ರಿಗಳು ಒಂದು ಹೇಳಿಕೆ ನೀಡುವ ಮೂಲಕ ಇವೆಲ್ಲಾ ನಡೆದಿದೆ ಎಂದು ಚರ್ಚೆಗೆ ಅವರೇ ದಾರಿ ತೋರಬೇಕಾಗಿತ್ತು. ಆದರೂ ಇವೊತ್ತು ಆ ಕುರಿತಂತೆ ಚರ್ಚಿಸಲು ತಾವು ಒಳ್ಳೆಯ ಅವಕಾಶ ದೊರಕಿಸಿಕೊಟ್ಟಿದ್ದೀರಿ. ಇದು ನಿಜವಾಗಿಯೂ ಚರ್ಚೆಯಾಗಬೇಕಾದ ಪ್ರಾಮುಖ್ಯವಾಗಿರುವ ವಿಚಾರವಾಗಿದೆ. ಈ ವಿಚಾರದಲ್ಲಿ ನಾವು ನಾನಾ ದಿಕ್ಕುಗಳಿಗೆ ಹೋಗುತ್ತೇವೆ. ಇದು ಬರೀ ಸೀಮಿತವಾಗಿ ನಿಲ್ಲತಕ್ಕಂಥ ಪ್ರಶ್ನೆಯಲ್ಲ. ಒಂದೆಡೆ ಪ್ರಜಾತಂತ್ರ ವ್ಯವಸ್ಥೆ, ಮತ್ತೊಂದೆಡೆ ಈ ವ್ಯವಸ್ಥೆ ಕುಸಿದು ಬೀಳುತ್ತಿದೆ. ಪ್ರಜಾತಂತ್ರ ವ್ಯವಸ್ಥೆಯಲ್ಲಿನ ಎಲ್ಲಾ ನಂಬಿಕೆಗಳೂ ನಾಶವಾಗುತ್ತಿವೆಯೆಂದು ಯುವ ಜನಾಂಗ

ಇಂದು ಬೇರೆ ದಿಕ್ಕಿನೆಡೆ ಚಲಿಸುತ್ತಿದೆ. ಚುನಾವಣೆಗಳಲ್ಲಿ ಯಾವ ರೀತಿ ಗೆದ್ದು ಬರಬೇಕು? ಶಾಸನಸಭೆಯಲ್ಲಿ ಶಾಸಕರಾಗಿ ಇರಬೇಕು, ಶಾಸನಸಭೆಯಲ್ಲಿ ಚರ್ಚಿಸಬೇಕು, ಐದು ವರ್ಷಗಳ ಕಾಲ ಇರಬೇಕು . . . ಈ ತರಹದಲ್ಲಿ ನಾವು ಕಾಲ ನೂಕಿಕೊಂಡು ಹೋಗುತ್ತಿದೆಯೇ ಹೊರತು ಪರಿಣಾಮಕಾರಿಯಾಗಿ, ಪ್ರಾಮಾಣಿಕವಾಗಿ ಹೇಳುವುದಾದರೆ, ಚುನಾಯಿತ ಪ್ರತಿನಿಧಿಗಳಾಗಿ ಎಂತಹವರು ಬರುತ್ತಿದ್ದಾರೆ? ಚುನಾವಣೆಗೆ ಯಾರು ನಿಲ್ಲುತ್ತಿದ್ದಾರೆ? ಅವರ ಹಿನ್ನೆಲೆಗಳು ಏನು? ಚುನಾವಣೆ ನಡೆಸುವವರು ಯಾರು? ಸ್ವಾತಂತ್ರ್ಯಪೂರ್ವದ ಚುನಾವಣೆ ಹೇಗಿತ್ತು? ಸ್ವಾತಂತ್ರ್ಯ ನಂತರದ ಚುನಾವಣೆ ಹೇಗಿತ್ತು? ಅದರ ನಂತರ ಜರುಗಿದ ಚುನಾವಣೆಗಳ ಪರಿಸ್ಥಿತಿಗಳೇನು? ಪ್ರಸ್ತುತ ಚುನಾವಣೆಗಳು ಯಾವ ರೀತಿ ಜರುಗುತ್ತಿವೆ? ಹಣದ ಪ್ರಭಾವ, ದಬ್ಬಾಳಿಕೆ, ಜಾತಿ. . . ಹೀಗೆ ಇನ್ನು ಮುಂತಾದ ವಿಷಯಗಳು ಚುನಾವಣೆಯಲ್ಲಿ ಪ್ರಭಾವ ಬೀರುತ್ತಿವೆ ! ಒಂದೊಂದು ಶಾಸನ ಸಭಾ ಕ್ಷೇತ್ರಕ್ಕೂ ಇಂತಿಷ್ಟು ಹಣ ಖರ್ಚು ಮಾಡಲೇಬೇಕೆಂದು ...ಮತದಾರರನ್ನು ನಾವೇ ಕೆಡಿಸಿದ್ದೇವೆ. ಇಂದು ಚುನಾವಣಾ ವ್ಯವಸ್ಥೆಯೇ ನಾಶವಾಗಿದೆ. ಇವೆಲ್ಲವೂ ಸೇರಿ ಇವೊತ್ತು ನಮ್ಮನ್ನು ಎಲ್ಲಿಯೋ ಒಂದು ಕಡೆ ಅಪರಾಧ ಮತ್ತು ಅನಾಯಕತ್ವದತ್ತ ತೆಗೆದುಕೊಂಡು ಹೋಗುತ್ತಿದೆ. ಇದು ತಮಗೆ ಗೊತ್ತಿದೆ. ಇದು ಬಹಳ ನೋವಿನ ಪ್ರಸಂಗವೂ ಕೂಡ ಆಗಿದೆ.

ಇವೊತ್ತು ಜಾರ್ಖಂಡ್ ರಾಜ್ಯದಲ್ಲಿ ಜರುಗುತ್ತಿರುವ ವಿದ್ಯಮಾನದತ್ತ ಗಮನ ಹರಿಸುವುದಾದರೆ, "ನೀವು ಇಂತಹ ತಾರೀಖಿನಂದೇ ಚುನಾವಣೆ ನಡೆಸಬೇಕು" ಎಂದು ಸರ್ವೋಚ್ಚ ನ್ಯಾಯಾಲಯ ಅಲ್ಲಿನ ಶಾಸಕಾಂಗಕ್ಕೆ ನೇರವಾಗಿ ಹೇಳುವ ಪರಿಸ್ಥಿತಿ ನಿರ್ಮಾಣವಾಗಿದೆ ಎಂದರೆ, ಇನ್ನು ಮುಂದೆ ಇದೇ ಪರಿಸ್ಥಿತಿ ಮುಂದುವರೆಯುವುದಾದರೆ, ನಾವು ಇರಬಹುದು, ಹೋಗಬಹುದು. ಇನ್ನು 10–15–20 ವರ್ಷಗಳಾದ ಬಳಿಕ ಶಾಸನಸಭೆಗೆ ಬರಬಹುದು. ಆಗ ಅರಾಜಕತೆ ಆರಂಭವಾಗುತ್ತದೆ. ಈಗಾಗಲೇ ಅರಾಜಕತೆ ಆರಂಭವಾಗಿದೆ. ನಾವು ರಾಷ್ಟ್ರೀಯ ಪಕ್ಷಗಳಲ್ಲಿರಬಹುದು, ರಾಜ್ಯದ ಪಕ್ಷಗಳಲ್ಲಿರಬಹುದು, ಪಕ್ಷೇತರರಾಗಿರಬಹುದು. ಎಲ್ಲಿಯೋ ಒಂದು ಕಡೆ ಈ ಚುನಾವಣಾ ವ್ಯವಸ್ಥೆ ಸಮಗ್ರವಾಗಿ ಬದಲಾವಣೆಯಾಗಲಿಲ್ಲವೆಂದರೆ, ಆಡಳಿತದ ಮೇಲೆ ಬಹಳ ಕೆಟ್ಟ ಪರಿಣಾಮ ಬೀರುತ್ತದೆ. ಇವೊತ್ತು ಚಿಕ್ಕಮಗಳೂರಿನ ಮೆಣಸಿನಹಾಡ್ಯದ ಪ್ರಕರಣ ತೆಗೆದುಕೊಂಡರೆ, ನಮ್ಮಲ್ಲಿ ನಕ್ಸಲೈಟ್ಸ್ ಇರಲಿಲ್ಲ. "ಕರ್ನಾಟಕವು ಶಾಂತಿಯ ತೋಟ" ವೆಂದು ರಾಷ್ಟ್ರಕವಿ ಕುವೆಂಪು ಬಹಳ ಹಿಂದೆಯೇ ಸಾರಿದ್ದಾರೆ. ರಾಜ್ಯದಲ್ಲಿ ಎಲ್ಲಿಯೂ ಅಶಾಂತ ವಾತಾವರಣವಿರಲಿಲ್ಲ. ಬಹಳ ಹಿಂದೆ ಬೆಂಗಳೂರು ನಗರದಲ್ಲಿ ಕೊಲೆ ಎಂಬುದೇ ಇರಲಿಲ್ಲ. ಗಾಂಧಿನಗರದಲ್ಲಿ ಉನ್ನತ ಮಟ್ಟದ ವಕೀಲರಾಗಿದ್ದ ಬೇಲೂರು ಶ್ರೀನಿವಾಸ ಅಯ್ಯಂಗಾರ್‌ರವರ ಕೊಲೆಯಾದ ಬಳಿಕ ಮತ್ತು ಗಾಂಧಿಬಜಾರಿನಲ್ಲಿ ಜೋಡಿ ಕೊಲೆಗಳಾಗಿರುವ ಪ್ರಕರಣಗಳನ್ನು ಹೊರತುಪಡಿಸಿದರೆ, ಬೆಂಗಳೂರಿನಲ್ಲಿ ಕೊಲೆ, ಸುಲಿಗೆ, ದರೋಡೆ ಎಂಬುದು ಇರದೆ, ಬೆಂಗಳೂರು ಕಲ್ಯಾಣ ಪಟ್ಟಣವಾಗಿ ಪವಿತ್ರವಾಗಿತ್ತು. ಈ ರಾಜ್ಯದಲ್ಲಿ ಕೆ.ಸಿ.ರೆಡ್ಡಿ ಮತ್ತು ಕೆಂಗಲ್ ಹನುಮಂತಯ್ಯನವರು ಮುಖ್ಯಮಂತ್ರಿಗಳಾಗಿ ಅಧಿಕಾರ ನಡೆಸಿ ಹೋದ ಬಳಿಕ ನನಗನಿಸುತ್ತದೆ. 1972ರಿಂದ ಇಲ್ಲಿಯ ತನಕ ಸುಮಾರು 40 ಲಕ್ಷದಷ್ಟು ಜನಸಂಖ್ಯೆ ಹೆಚ್ಚಾಗಿದೆ. ಬೆಂಗಳೂರನ್ನು ನಾವು ಯದ್ವಾತದ್ವಾ ಬೆಳೆಯಲು ಬಿಟ್ಟಿದ್ದೇವೆ. ಇದರಲ್ಲಿ ತಮ್ಮ ಗಮನಕ್ಕೆ ನಾನು ತರುವುದೇನೆಂದರೆ, ಅಧಿಕವಾಗಿರುವ ಈ 40 ಲಕ್ಷ ಜನರು ಹೊರಗಡೆಯಿಂದ ಬಂದರು, ಯಾರ್‍ಯಾರು ಬಂದರು? ಎಲ್ಲಿಂದ ಬಂದರು? ಹೇಗೆ ಬಂದರು? ಇವರುಗಳ ಹಿನ್ನೆಲೆಗಳೇನು? ಏತಕ್ಕಾಗಿ ಬಂದರು? ಈ ಕುರಿತಂತೆ ಒಬ್ಬರ ಮಾಹಿತಿಯನ್ನೂ ಪಡೆದುಕೊಂಡಿಲ್ಲ.

ಬೆಂಗಳೂರಿನಲ್ಲಿ ಭೂಗತ ದೊರೆಗಳಿದ್ದಾರೆ, ಕೊಲೆಪಾತಕರಿದ್ದಾರೆ, ಕೊಲೆ ಮಾಡುವ ಬಾಡಿಗೆ ಹಂತಕರಿದ್ದಾರೆ. ಎಲ್ಲಾ ರೀತಿಯ ದುಷ್ಕೃತ್ಯಗಳು ಬೆಂಗಳೂರಿನಲ್ಲಿ ಜರುಗುತ್ತಿದೆ. ಬೆಂಗಳೂರಿನ ಸುತ್ತಮುತ್ತಲಿರುವ ಹೊಸ ಬಡಾವಣೆಗಳ ಹೊಸ ಮನೆಗಳಿಗೆ ಯಾರ್‍ಯಾರು ಬಂದಿದ್ದಾರೆ? ಅವರ ಚಲನ-ವಲನಗಳೇನು? ಇವರು ಪಂಜಾಬ್‌ನಿಂದ ಬಂದಿದ್ದಾರೆಯೇ? ತಮಿಳುನಾಡು, ಗುಜರಾತ್‌ನಿಂದ ಬಂದಿದ್ದಾರೆಯೇ? ಈ ಬಗ್ಗೆ ಯಾರ ಬಳಿಯೂ ಸೂಕ್ತ ಮಾಹಿತಿ ಇಲ್ಲ. ಬೆಂಗಳೂರಿನಂಥ ಶಾಂತಿಯುತ ನಗರ ಭಯೋತ್ಪಾದಕ ನಗರವಾಗಿ ಪರಿಣಮಿಸುತ್ತಿದೆ. ಬೆಂಗಳೂರು ಇವೊತ್ತು ಎಲ್ಲರಿಗೂ ಬೇಕಾಗಿದೆ. ಆದರೆ, ಬೆಂಗಳೂರಿಗೆ ರಕ್ಷಣೆ ಏನಿದೆ? ಬೆಂಗಳೂರಿಗೆ ಯಾವ ರೀತಿಯ ರಕ್ಷಣೆ ಇದೆಯೆಂದರೆ, ರಾಜೀವ್‌ಗಾಂಧಿಯವರ ಹತ್ಯೆಯ ರೂವಾರಿಯಾಗಿದ್ದ ಶಿವರಾಸನ್ ಸುಮಾರು ಎರಡು ತಿಂಗಳ ಕಾಲ ಬೆಂಗಳೂರಿನಲ್ಲಿ ಅವಿತುಕೊಂಡಿದ್ದು ಯಾರಿಗೂ ಗೊತ್ತಿರಲಿಲ್ಲ. ಮುತ್ತುರಾಯನ ದೇವಸ್ಥಾನವಿರುವ ಮುತ್ತತ್ತಿಯಲ್ಲಿಯೇ ಕೆಲವರು ಇದ್ದುದ್ದು. ಅಲ್ಲಿ ದೊರೆತ ಡೈರಿಯಿಂದ ಆತ ಬೆಂಗಳೂರಿನಲ್ಲಿ ಅವಿತುಕೊಂಡಿದ್ದ ವಿಷಯ ತಿಳಿದು ಬಂದಾಗ ಅವರೆಲ್ಲರೂ ಸಿಕ್ಕಿಬಿದ್ದದ್ದು. ಅಲ್ಲಿಯವರೆಗೂ ಶಿವರಾಸನ್ ಪೊಲೀಸ್ ಕಮೀಷನರ್ ಕಚೇರಿ ಹತ್ತಿರವಿರುವ ಹೋಟೆಲಿನಲ್ಲಿಯೇ ತಿಂಡಿ ತಿನ್ನುತ್ತಿದ್ದುದ್ದು. ಈತ ಯಾರು? ಎಲ್ಲಿದ್ದಾನೆ ಎಂಬುದು ಗೊತ್ತಿರಲಿಲ್ಲ. ಇದು ಬೆಂಗಳೂರಿನ ಪರಿಸ್ಥಿತಿ !

ಮತ್ತೊಂದು ನೋವಿನ ಪ್ರಸಂಗವನ್ನು ತಮಗೆ ಹೇಳುವುದಾದರೆ, ಯಾರನ್ನಾದರೂ ಬಾಡಿಗೆ ಮನೆಯಿಂದ ಬಿಡಿಸಬೇಕಾದರೆ ಪೊಲೀಸರು ಬೇಕಾಗಿಲ್ಲ, ನ್ಯಾಯಾಲಯ ಬೇಕಾಗಿಲ್ಲ. ಬದಲಿಗೆ ಗೂಂಡಾಗಳಿದ್ದಾರೆ ! ಅವರಿಗೆ ಇಂತಿಷ್ಟು ದುಡ್ಡು ಕೊಟ್ಟರೆ ಬಾಡಿಗೆ ಮನೆಯಲ್ಲಿರುವವರನ್ನು ಬೆದರಿಸುತ್ತಾರೆ. "ಇಪ್ಪತ್ತನಾಲ್ಕು ಗಂಟೆಯೊಳಗೆ ಮನೆ ಖಾಲಿ ಮಾಡಲಿಲ್ಲವೆಂದರೆ ಕೊಲ್ಲುತ್ತೇವೆ, ನಿಮ್ಮ ಗಂಡನನ್ನು ಕೊಲ್ಲುತ್ತೇವೆ, ಹೆಂಡತಿಯನ್ನು ಕೊಲ್ಲುತ್ತೇವೆ, ಮಕ್ಕಳನ್ನು ಎತ್ತಿಕೊಂಡು ಹೋಗುತ್ತೇವೆ" ಎನ್ನುತ್ತಾರೆ. ಇದು ಬೆಂಗಳೂರಿನಲ್ಲಿ ಒಂದು ವ್ಯಾಪಾರವಾಗಿದೆ. ಇದು ಬೆಂಗಳೂರಿನಲ್ಲಿ ಮಾತ್ರವಾಗಿರದೆ ಎಲ್ಲಾ ಕಡೆಗಳಲ್ಲೂ ನಡೆಯುತ್ತಿದೆ. ಆದರೆ, ಯಾರೂ ಕೂಡ ಇದನ್ನು ಹೇಳಿಕೊಳ್ಳಲಾರರು. ಅವರ ಬಗ್ಗೆ ಪೊಲೀಸಿನವರಿಗೆ ದೂರು ನೀಡಿದರೆ, "ನಿನ್ನನ್ನು ಉಳಿಸುವುದಿಲ್ಲ. ಎಲ್ಲರೂ ಗಂಟು ಮೂಟೆ ಕಟ್ಟಿಕೊಂಡು ಮನೆ ಬಿಟ್ಟು ಹೋಗಿ" ಎನ್ನುತ್ತಾರೆ. ಏನಿದು ದೌರ್ಜನ್ಯ? ಬೆಂಗಳೂರಿನ ಪರಿಸ್ಥಿತಿ ಬಗ್ಗೆ ತಮಗೆ ಹೇಳುವುದಾದರೆ, ಈ ಕುರಿತಂತೆ ಮಾನ್ಯ ಮುಖ್ಯಮಂತ್ರಿಗಳಲ್ಲಿ ಕಳಕಳಿಯಿಂದ ಮನವಿ ಮಾಡಿಕೊಳ್ಳುವುದೇನೆಂದರೆ, ಇಡೀ ಪೊಲೀಸ್ ಇಲಾಖೆಯನ್ನೇ ಪುನರ್ ನಿರ್ಮಾಣ ಮಾಡಬೇಕು.

ಅಧ್ಯಕ್ಷರು : ಮಾನ್ಯ ವಾಟಾಳ್ ನಾಗರಾಜ್‌ರವರೆ, ತಾವು ಹೇಳಿದ್ದು ಒಳ್ಳೆಯದು. ಆದರೆ, ಯಾವ ರೀತಿಯಲ್ಲಿ ಪುನರ್ ನಿರ್ಮಾಣವಾಗಬೇಕು ಎಂಬುದರ ಬಗ್ಗೆ ಸಲಹೆ ಕೊಡಿ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಈಗ ನಮ್ಮಲ್ಲಿರುವ ಪರಿಸ್ಥಿತಿಯನ್ನು ನಾವು ಪ್ರಾಮಾಣಿಕವಾಗಿ ಒಪ್ಪಿಕೊಳ್ಳೋಣ. ವರ್ಗಾವರ್ಗಿಗೆ ರಾಜಕಾರಣಿಗಳಾದವರು ಯಾರೂ ಕೂಡ ಕೈಹಾಕಬಾರದು. ಇದು ಸ್ಪಷ್ಟ. ಮಾನ್ಯ ಮುಖ್ಯಮಂತ್ರಿಗಳು ದಯಮಾಡಿ ಇತ್ತ ಗಮನಹರಿಸಬೇಕು. ನಾನು ತಮಗೆ ಹೇಳುತ್ತಿರುವುದೇನೆಂದರೆ, ರಾಜಕಾರಣಿಗಳಾಗಿರುವ ನಾವು ಒಬ್ಬ ಪೊಲೀಸರನ್ನು ಬದಲಾಯಿಸಬೇಕೆಂದು ನಿಮಗೆ ಅರ್ಜಿ ಸಲ್ಲಿಸಬಾರದು. ಬೇಕಿದ್ದರೆ, ದೂರು

ನೀಡೋಣ. ಆದರೆ, ಯಾವ ಪೊಲೀಸರನ್ನು ನೇಮಿಸಬೇಕು, ಬಿಡಬೇಕೆಂಬುದನ್ನು ಮಾನ್ಯ ಮುಖ್ಯಮಂತ್ರಿಗಳಾದ ನೀವೇ ತೀರ್ಮಾನ ಮಾಡಬೇಕು. ಇವೊತ್ತು ಸ್ಟೇಷನ್‌ಗಳ ರೇಟು ಏನಾಗಿದೆಯೆಂದರೆ, ಒಂದನೇ ದರ್ಜೆ, ಮೂರನೇ ದರ್ಜೆಯ ಸ್ಟೇಷನ್‌ಗೆ ಬರಬೇಕಾದರೆ ಜಾತಿ, ಕುಲ, ಗೋತ್ರ ಹಣ... ಬಹುಶಃ ರಾಷ್ಟ್ರಪತಿಯಿಂದ ಫೋನ್ ಮಾಡಿಸಬಹುದಾದಂಥ ವ್ಯವಸ್ಥೆ ಇವೊತ್ತು ನಿರ್ಮಾಣವಾಗಿದೆ. ಮುಖ್ಯಮಂತ್ರಿಗಳಿರಬಹುದು, ಉನ್ನತಾಧಿಕಾರಿಗಳಿರಬಹುದು, ಅವರಿಗೆ ಬಹಳ ಕಷ್ಟವಿದೆ. ಏನೂ ಮಾಡುವುದಿಲ್ಲ. ಆದುದರಿಂದ, ಇಂತಹ ಪರಿಸ್ಥಿತಿಯನ್ನು ತಡೆಗಟ್ಟಬೇಕಾದರೆ, ಮೊದಲು ಪೊಲೀಸ್ ವರ್ಗಾವರ್ಗಿ ನೀತಿಯನ್ನು ಸಮಗ್ರವಾಗಿ ಬದಲಾವಣೆ ಮಾಡಬೇಕು. ಇದು ಮೊದಲನೆಯದು. ಎರಡನೆಯದಾಗಿ, ಪೊಲೀಸ್ ಠಾಣೆಗಳು ಸಮಗ್ರವಾಗಿ ನವೀಕರಣಗೊಳ್ಳಬೇಕು. ಪೊಲೀಸ್ ಇಲಾಖೆಯ ಸುಧಾರಣೆ ಕುರಿತಂತೆ ರಚಿಸಲಾಗಿದ್ದ ಧರ್ಮವೀರ ಸಮಿತಿಯ ವರದಿ ಧೂಳು ತಿನ್ನುತ್ತಾ ಮೂಲೆಯಲ್ಲಿ ಬಿದ್ದಿದೆ.

ಶ್ರೀ ಕೆ.ಆರ್.ರಮೇಶ್‌ಕುಮಾರ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಉತ್ತಮವಾದ ಸಲಹೆ ಕೊಡುತ್ತಿದ್ದಾರೆ. ಆಗಲೆ ತಾವು ಮಾತನಾಡುತ್ತಾ ಒಂದು ಮಾತನ್ನು ಹೇಳಿದಿರಿ. ಬೆಂಗಳೂರಿನಲ್ಲಿ ಬಾಡಿಗೆ ಮನೆಯೊಂದನ್ನು ಖಾಲಿ ಮಾಡಿಸಬೇಕಾದರೆ ಪೊಲೀಸ್‌ನವರ ಮೊರೆಹೊಕ್ಕರೆ ಏನೂ ಪ್ರಯೋಜನವಾಗುವುದಿಲ್ಲ, ಅದಕ್ಕೆ ಬೇರೆ ಏಜನ್ಸಿಸ್ ಇದ್ದಾವೆ ಎಂದು ಒಂದು ಮಾತನ್ನು ಹೇಳಿದಿರಿ. ಹಾಗೆಯೇ ಬೆಂಗಳೂರಿನ ಸುತ್ತಮುತ್ತ ಬೆಲೆಬಾಳುವ ಕೋಟ್ಯಾಂತರ ರೂಪಾಯಿಯ ಜಮೀನು ನ್ಯಾಯವಾಗಿ ಪಾಪ ಯಾರದ್ದೋ ಆಗಿದ್ದರೂ ಅವರು ಮಾರಾಟವನ್ನೂ ಮಾಡುವಂತಿಲ್ಲ, ಅನುಭವಿಸುವಂತೆಯೂ ಇಲ್ಲ, ಅದು ಬೇರೆಯವರ ಖಬ್ಜದಲ್ಲಿದೆ. ಇವರಲ್ಲಿ ಯಾರು ಪ್ರಮುಖರು? ಇವರಿಗೆಲ್ಲಾ ಯಾರು ರಕ್ಷಣೆ ಕೊಡುವವರು? ಈ ಘಟನೆಗಳಿಗೆಲ್ಲಾ ಯಾರು ಪ್ರೋತ್ಸಾಹ ಕೊಡುವವರು? ತಾವು ಚುನಾವಣೆಯ ವಿಚಾರವನ್ನು ಮಾತನಾಡಲು ಪ್ರಾರಂಭವಾಗಿ ಕೆ.ಸಿ.ರೆಡ್ಡಿಯವರು, ಮಾನ್ಯ ಹನುಮಂತಯ್ಯನವರ ಬಗ್ಗೆ ಮಾತನಾಡಿದಿರಿ, ನನಗೆ ಬಹಳ ಖುಷಿಯಾಯಿತು, ಚುನಾವಣಾ ವ್ಯವಸ್ಥೆ ಸುಧಾರಿಸಬೇಕೆಂದು you have started with the main issue, ನಿಜ, ಇಡೀ ಸಮಸ್ಯೆಗೆ ಪರಿಹಾರ ಅಲ್ಲಿದೆ, ಚುನಾವಣೆ ಭ್ರಷ್ಟವಾಗಿರುವುದರಿಂದ ಹೀಗೆಲ್ಲಾ ಆಗತಕ್ಕದ್ದು. ಪಾಪ ಪೊಲೀಸ್‌ನವರೇನು ಮಾಡುತ್ತಾರೆ? ನಾವು ಪ್ರಾಮಾಣಿಕವಾಗಿದ್ದರೆ ಅವರೂ ಪ್ರಾಮಾಣಿಕರಾಗಿರುತ್ತಾರೆ, ದುಡ್ಡು ಕೊಟ್ಟೇ ಬರಬೇಕೆಂದರೆ ದುಡ್ಡು ತೆಗೆದುಕೊಂಡು ಬರುತ್ತಾರೆ. ನಾವು, ನಮ್ಮ ಕತೆ ಸ್ವಲ್ಪ ಹೇಳಿ. ನಾವಂತೂ ಹೇಳಲು ಆಗುವುದಿಲ್ಲ, ನೀವು ಧೈರ್ಯವಾಗಿ ಹೇಳುತ್ತೀರಿ. ನೀವು ನಮಗೆಲ್ಲಾ ಮಾರ್ಗದರ್ಶಿಗಳು.

ಶ್ರೀ ವಾಟಾಳ್ ನಾಗರಾಜ್ : ನಾನು ಅದನ್ನೇ ಪ್ರಾಮಾಣಿಕವಾಗಿ ಹೇಳುತ್ತಿದ್ದೇನೆ. ನಾವು ಚುನಾವಣೆಗಳಲ್ಲಿ.

ಅಧ್ಯಕ್ಷರು : ಅವರ ಮನಸ್ಸಿನಲ್ಲಿರುವುದನ್ನು ನೀವು ಹೇಳಬೇಕೆಂದು ಅವರ ಉದ್ದೇಶವೇ!

ಶ್ರೀ ಕೆ.ಆರ್.ರಮೇಶ್‌ಕುಮಾರ್ : ಮಾನ್ಯ ಅಧ್ಯಕ್ಷರೆ, ತಮ್ಮ ಕಷ್ಟ ನನಗೆ ಗೊತ್ತು.ನ ನಿಮ್ಮ ಮನಸ್ಸಿನಲ್ಲಿರುವುದನ್ನು ಊಹೆ ಮಾಡಿ ನಾನು ಅವರಿಗೆ ಸೂಚನೆ ಕೊಟ್ಟೆ !

ಶ್ರೀ ವಾಟಾಳ್ ನಾಗರಾಜ್ : ತಮ್ಮ ಮನೋಧರ್ಮವೂ ನನಗೆ ಅರ್ಥವಾಯಿತು !

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ತಾವು ಮಾಜಿ ಅಧ್ಯಕ್ಷರು, ತಮಗೆ ಆ ವಿಚಾರ ಮೊದಲೇ ಬಂದಿತ್ತೋ? ಆಮೇಲೆ ಅದು ಲೇಟಾದ ಮೇಲೆ ಅದಕ್ಕೆ ನಾನು ಇಲ್ಲಿದ್ದೇನೆ, ನೀವು ಹೇಳಿಬಿಡಿ ಎಂದು ಅವರ ಪರವಾಗಿ ಹೇಳುತ್ತಿದ್ದಾರೆ !

ಶ್ರೀ ಜೆ.ಸಿ.ಮಾಧುಸ್ವಾಮಿ : ಮಾನ್ಯ ಶ್ರೀರಾಮರೆಡ್ಡಿಯವರು ಕಪ್ಪು ಬಟ್ಟೆಯನ್ನು ಹಾಕಿಕೊಂಡು ಬಂದು ಏಕೆ ಪ್ರೊಟೆಸ್ಟ್ ಮಾಡುತ್ತಿದ್ದರೆ ಎಂಬ ಬಗ್ಗೆ ಮೊದಲು ಹೇಳಬೇಕು !

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ನಮ್ಮಲ್ಲಿ ಚುನಾವಣೆಯ ಪದ್ಧತಿಯ ಪ್ರಶ್ನೆ ಬಂದಾಗ ನಾವೆಲ್ಲರೂ ಎಲ್ಲೋ ಒಂದು ಕಡೆ ಎಲ್ಲಾ ಪಕ್ಷದವರೂ ಪ್ರಾಮಾಣಿಕತೆ ಇರಬೇಕು. ನಾವು ಯಾರನ್ನು ಆರಿಸಬೇಕು ಎನ್ನುವಾಗ ಅವರ ಹಿನ್ನೆಲೆಯೇನು ಎಂಬ ಬಗ್ಗೆ ಪ್ರಾಮಾಣಿಕತೆ ಇರಬೇಕು. ಇದರ ಬಗ್ಗೆ ನಾನು ಯಾರನ್ನೂ ಕುರಿತು ಮಾತನಾಡುತ್ತಿಲ್ಲ. ಇವತ್ತು ಲೂಟಿ ಮಾಡಿರತಕ್ಕವರು, ಭೂಗಳ್ಳರು, ಅಕ್ರಮ ಮಾಡಿರತಕ್ಕವರು, ಇವರೆಲ್ಲರೂ ಚುನಾವಣೆಗೆ ನಿಲ್ಲಬೇಕು, ಇವರೆಲ್ಲರೂ ಅಧಿಕಾರಕ್ಕೆ ಬರಬೇಕು, ಇವರೆಲ್ಲರೂ ಮಂತ್ರಿಗಳಾಗಬೇಕು ಎಂಬ ಹುಚ್ಚು ಬೆಳೆದಿದೆ. ಇದಕ್ಕೆ ನಾವು ಎಲ್ಲೋ ಒಂದು ಕಡೆ, ನಾವೇನು ' ಬಿ ' ಫಾರಂ ಎಂದು ಕೊಡುತ್ತೇವಲ್ಲಾ, ನಮಗೇನು ಹುಚ್ಚು ಇದೆ ಎಂದರೆ, ಹೇಗೂ ಗೆಲ್ಲುತ್ತಾರೆ 'ಬಿ' ಫಾರಂನ್ನು ಕೊಡಿ, ಅವರು-ರೌಡಿಯೋ ಮತ್ತೊಂದೋ ಒಟ್ಟಿನಲ್ಲಿ ಅವರಿಗೆ ಕೊಟ್ಟುಬಿಡೋಣ, ಅವರು ಗೆಲ್ಲಲಿ, ಗೆಲ್ಲಬೇಕಾದರೆ ಅವರಿಗೆ ಕೊಡಿ, ಈ ನೀತಿ ಸರಿಯಲ್ಲ. ಇದರಿಂದ ನಮ್ಮಲ್ಲೂ ಒಂದು ರಾಷ್ಟ್ರೀಯ ಪಕ್ಷವಿರಬಹುದು, ರಾಜ್ಯ ಪಕ್ಷವಿರಬಹುದು, ಯಾವುದೇ ಪಕ್ಷಗಳು ಇರಬಹುದು, ನಮ್ಮ ಪಕ್ಷಗಳಲ್ಲೂ ಶಿಸ್ತು ಇರಬೇಕು, ಎಂಥವರಿಗೆ ಚುನಾವಣೆಗೆ 'ಬಿ' ಫಾರಂನ್ನು ಕೊಡಬೇಕು ಎಂಬ ಬಗ್ಗೆ ಶಿಸ್ತು ಇರಬೇಕಾಗುತ್ತದೆ. ನಾವೇನು ಹೇಳುತ್ತಿದ್ದೇನೆ ಅದರಿಂದ ಪ್ರಯೋಜನವಿಲ್ಲ, ಎಮ್ಮೆಯ ಮುಂದೆ ಕಿಂದರಿ ಬಾರಿಸಿದಂತೆ ಆಗುತ್ತದೆ. ಹಿಂದೆ ಇಲ್ಲಿ ಒಬ್ಬರು ಮಂತ್ರಿಯಾಗಬೇಕಾಗಿದ್ದರೆ.

ಶ್ರೀ ಜೆ.ಸಿ.ಮಾಧುಸ್ವಾಮಿ : ಎಮ್ಮೆಯಲ್ಲ, ಕೋಣನ ಮುಂದೆ ಎಂದು ಹೇಳಿ.

ಶ್ರೀ ವಾಟಾಳ್ ನಾಗರಾಜ್: ಕೋಣ ಮತ್ತು ಎಮ್ಮೆ ಎರಡೂ ಒಂದೇ. ಹಾಗಾದರೆ ಎಮ್ಮೆ ಬುದ್ಧಿವಂತ ಎಂದುಕೊಂಡಿರೋ?

ಶ್ರೀ ಎಂ.ಪಿ.ಪ್ರಕಾಶ್ : ಎಮ್ಮೆ ಬುದ್ಧಿವಂತ ಅಲ್ಲ, ಆದರೆ ಕೋಣ ತುಂಬ ದಡ್ಡ !

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಪ್ರಕಾಶ್‌ರವರ ಮಾತಿಗೆ ಬೆಂಬಲ ಕೊಟ್ಟು ಹೇಳುವುದಾದರೆ ಕೋಣನ ಮುಂದೆ ಕಿಂದಿರಿ ಬಾರಿಸಿದಂತೆ. ನಾನು ಇದನ್ನು ಏಕೆ ಹೇಳುತ್ತಿದ್ದೇನೆಂದರೆ, ಒಬ್ಬರು ಮಂತ್ರಿಯಾಗಬೇಕಾಗಿದ್ದರೆ, ಅಲ್ಲಿ ಬಂದು ಕುಳಿತುಕೊಳ್ಳಬೇಕಾಗಿದ್ದರೆ, ಎಷ್ಟು ತ್ಯಾಗ ಮಾಡಿರುತ್ತಿದ್ದರು. ಹೆಚ್.ಎಂ. ಚೆನ್ನಬಸಪ್ಪನವರು, ಜಿಲ್ಲಾ ಬೋರ್ಡ್ ಸದಸ್ಯರು, ಜಿಲ್ಲಾ ಬೋರ್ಡ್ ಅಧ್ಯಕ್ಷರು, ತಾಲ್ಲೂಕು ಬೋರ್ಡ್ ಅಧ್ಯಕ್ಷರು ಎಲ್ಲವನ್ನೂ ಮಾಡಿ ಹೋರಾಟ ಮಾಡಿ ಮಂತ್ರಿಗಳಾಗಿದ್ದರು. ಆದರೆ ಈಗ ಏನೂ ಇಲ್ಲ. ನಮ್ಮ ಪಕ್ಷದ ಐದು ಮಂತ್ರಿಗಳಿಗೆ ಕೊಡು, ಅವನಿಗೆ ಇವನಿಗೆ ಕೊಟ್ಟು ನೆಗೆದೇಬಿದ್ದು ಹೋಯಿತು, ಇದಕ್ಕೇನು ಲೆಕ್ಕ ಬುಕ್ಕ ಇಲ್ಲ, ಹೇಳುವಂತೆ ಇಲ್ಲ, ಯಾವುದೂ ಬೇಕಾಗಿಲ್ಲ, ನಾನು ಹಿಂದಿನಿಂದ ಎಂತೆಂಥ ಸುವರ್ಣ ರತ್ನಗಳನ್ನು ನೋಡಿದ್ದೇನೆ, ಈ ಸದನದಲ್ಲಿ ರತ್ನಗಳನ್ನು ನೋಡಿದ್ದೆ, ಇವತ್ತಿನ ಪರಿಸ್ಥಿತಿಯನ್ನು ನೋಡಿದರೆ ನನಗನ್ನಿಸುತ್ತದೆ ಅವರ ಪಾದಗಳಿಗೆ ಸಾಷ್ಟಾಂಗ, ಶರಣಾರ್ಥಿ. ಪೊಲೀಸ್ ಇಲಾಖೆ ಇವತ್ತು ಹಸ್ತಕ್ಷೇಪ ಪ್ರಾಮಾಣಿಕವಾಗಿ ನಿಲ್ಲಬೇಕು, ಎರಡನೆಯದಾಗಿ, ಉತ್ತಮ ಶಸ್ತ್ರಾಸ್ತ್ರಗಳು ಅವರಿಗೆ ಒದಗಿಸಬೇಕು, ಇವತ್ತು ಅದು ಬದಲಾವಣೆಯಾಗಬೇಕಾದರೆ ಮೊದಲು ಅದರಲ್ಲಿ ರಾಜಕಾರಣಿಗಳ ಪೊಲೀಸ್ ಠಾಣೆಗಳನ್ನು

ಅಗೋಚರವಾಗಿ ನೋಡಬೇಕು, ಸಿ.ಓ.ಡಿ. ಮತ್ತು ಇನ್ನಿತರೆ ಮೂರ್‍ನಾಕು ವಿಭಾಗ, ಯಾವುದು ಆಗಲಿಲ್ಲವೋ ಸಿ.ಓ.ಡಿ. ಗೆ ಹಾಕು, ಯಾರು ಬೇಕೋ ಮೆಜೆಸ್ಟಿಕ್‌ಗೆ ಹಾಕು, ಬೇಡವೋ ಬೇರೆಯದ್ದಕ್ಕೆ ಹಾಕು, ಇದು ಬಂದುಬಿಟ್ಟಿದೆ. ಇದರಿಂದ ಅವರಲ್ಲಿ ಅಸಮಧಾನ ಪ್ರಾರಂಭವಾಗಿದೆ, ಸಬ್‌ಇನ್ಸ್‌ಪೆಕ್ಟರ್‌ನ ಕೆಳಗಿನವರಿಗೆ ಮೂವತ್ತು ವರ್ಷಗಳಿಂದ ಬಡ್ತಿಯನ್ನೇ ಕೊಟ್ಟಿಲ್ಲ, ಹೀಗಾದರೆ ಅವರ ಪರಿಸ್ಥಿತಿ ಏನಾಗಬೇಕು? ಇವತ್ತು ಅವರಿಗೆ ಕೊಡತಕ್ಕಂಥ ಊಟ, ನನಗನ್ನಿಸುತ್ತದೆ, ಪೊಲೀಸ್ ನಾಯಿಗೆ ಎಷ್ಟು ವ್ಯವಸ್ಥೆ ಎಂದರೆ, ರಾಜಮರ್ಯಾದೆ, ಅದಕ್ಕೇ ಒಂದು ಮನೆ, ನೋಡಿಕೊಳ್ಳಲು ನಾಲ್ಕು ಜನ, ವೈದ್ಯರು, ಔಷಧಿ, ವ್ಯವಸ್ಥೆ, ಈ ರೀತಿ ಪೊಲೀಸ್ ನಾಯಿಗಿರುವ ವ್ಯವಸ್ಥೆ, ಇಲ್ಲೆಲ್ಲಾ ಬಂದು ಮೂಸಿ ನೋಡುತ್ತದೆ ನೋಡಿ ಆ ನಾಯಿಗೆ ಇರುವ ವ್ಯವಸ್ಥೆ, ವೈಭವ, ವೈಭವೀಕರಣ, ಮತ್ತು ಆ ನಾಯಿ ಸತ್ತ ದಿವಸ ಸಂತಾಪವನ್ನೂ ಮಾಡಿದರು, ಒಂದು ನಾಯಿ ಸತ್ತ ತಕ್ಷಣ ಮನುಷ್ಯನಷ್ಟೆ ಸಂತಾಪವನ್ನು ಸಹ ಮಾಡಿದರು, ಅದರಲ್ಲಿ ತಪ್ಪೇನಿಲ್ಲ, ಒಳ್ಳೆಯದೆ, ಆದರೆ ಆ ಪೊಲೀಸ್ ನಾಯಿಗಿಂತಲೂ ಈ ಪೊಲೀಸ್‌ನವರದ್ದು ಕಡೆಯ ಜೀವನ, ಇದು ಒಳ್ಳೆಯದಲ್ಲವೆಂದು ನನಗನ್ನಿಸುತ್ತದೆ. ಅದು ಒಳ್ಳೆಯದಲ್ಲವೇ ಅಲ್ಲ. ಆದ್ದರಿಂದ ಇಡೀ ಇಲಾಖೆ ಅಸಮದಾನದ ಹೊಗೆ ಎದ್ದು ಕಾಣುತ್ತಿದೆ. ಆ ರೀತಿ ಅಸಮದಾನದ ಹೊಗೆ ಎದ್ದು ಕಾಣುವುದರಿಂದ ಅವರಲ್ಲಿ ಕಾನೂನು ಸುವ್ಯವಸ್ಥೆ ತರುವುದರಲ್ಲಿ ಅಸಮರ್ಥರಾಗಿದ್ದಾರೆ, ಪ್ರಾಮಾಣಿಕವಾಗಿ ಅಸಮರ್ಥರಾಗಿದ್ದಾರೆ, ಅದರಲ್ಲಿ ಎರಡು ಮಾತಿಲ್ಲ. ನಕ್ಸಲೀಯರದ್ದು ಏನಿದು? ನನಗನ್ನಿಸುತ್ತದೆ, ಮೊದಲನೆಯದು ಇವರು ಚಿಕ್ಕಮಗಳೂರಿನಲ್ಲಿ ನೇರವಾಗಿ ಅವರನ್ನು ಕೊಂದ ಬಗ್ಗೆ ನನಗೆ ಸಮಾಧಾನವಿಲ್ಲ. ಆ ವಿಚಾರದಲ್ಲಿ ನಾನು ಸ್ಪಷ್ಟ. ಕಾರಣವೇನು? ಆಂಧ್ರ ಪ್ರದೇಶದಲ್ಲಿದ್ದಷ್ಟು ಉದ್ವೇಗ ನಮ್ಮಲ್ಲಿ ಇನ್ನೂ ಇರಲಿಲ್ಲ. ನಮ್ಮಲ್ಲಿ ಎಲ್ಲೋ ಒಂದು ಕಡೆ ನೋಟೀಸ್ ಹಾಕುತ್ತಿದ್ದರು, ಬರುತ್ತಿದ್ದರು, ಬೀದಿಗೆ ಬರುತ್ತಿದ್ದರು, ಹೇಳುತ್ತಿದ್ದರು, ಮಾತನಾಡುತ್ತಿದ್ದರು, ಅವರನ್ನು ಏಕೆ ಕೊಂದಿರಿ? ಏನು ಕಾರಣ? ಅವರನ್ನು ಕೊಲ್ಲಲು ತಮಗೆ ತಕ್ಷಣ ಸಿಕ್ಕಂಥ ವ್ಯವಸ್ಥೆ ಏನು? ಅಲ್ಲಿ ಸತ್ತವರ ಬಗ್ಗೆ ಇಡೀ ರಾಜ್ಯದ ಎಲ್ಲರಿಂದಲೂ ಅನುಕಂಪ, ಮುಖ್ಯಮಂತ್ರಿಗಳ ಪ್ರಕಾರವೇ 'ನಕ್ಸಲೀಯ ಮುಖಂಡರ ಸಾವಿಗೆ ಮರುಕ ಪಟ್ಟ ಮುಖ್ಯಮಂತ್ರಿಗಳು' ಮುಖ್ಯಮಂತ್ರಿಗಳೂ ಇದರ ಬಗ್ಗೆ ಮರುಕಪಟ್ಟಿದ್ದಾರೆ, ಅತ್ಯಂತ ಮೇಧಾವಿಯೊಬ್ಬರನನ್ನು ಕೊಂದುಹಾಕಿಬಿಟ್ಟಿದ್ದೇವೆ ಎಂಬ ಮನೋ ಚಿಂತನೆ ಪ್ರಗತಿ ವರ್ಗದವರು ಅವರನ್ನು ಭೇಟಿ ಮಾಡಲು ಹೋದಾಗ ಈ ಮಾತನ್ನು ಹೇಳಿದ್ದಾರೆ. ಮೊದಲನೆಯದಾಗಿ ಇವರು ಏಕೆ ನಕ್ಸಲೀಯರಾದರು? ನಮ್ಮ ಪ್ರದೇಶಕ್ಕೆ ನಕ್ಸಲೀಯರು ಏಕೆ ಬಂದರು? ಅವರ ಬೇಡಿಕೆ ಏನು? ಪರಿಸ್ಥಿತಿ ಏನು? ಇದರ ಬಗ್ಗೆ ಯಾರೂ ಅರಿತುಕೊಳ್ಳುವುದನ್ನು ಮಾಡಲಿಲ್ಲವಲ್ಲಾ? ಮೊದಲು ಅವರ ಬೇಡಿಕೆ, ಒತ್ತಾಯ, ಮನವಿಯ ಬಗ್ಗೆ ಇಡೀ ಪ್ರದೇಶದಲ್ಲಿ ಬಡತನದ ಬೇಗೆಯಿಂದ ಸತ್ತು ನರಳುತ್ತಿರತಕ್ಕಂಥ ಜನರ ಕಲ್ಯಾಣದ ಬಗ್ಗೆ ನಾವ್ಯಾರೂ ಚಿಂತನೆ ಮಾಡಲಿಲ್ಲ, ನಮ್ಮಲ್ಲಿ ಬಂದೂಕಿನ ಒಂದೇ ಚಿಂತನೆಯೆ? ಗುಂಡಿನ ಕಾಳಗ ಒಂದೆಯೆ? ಇದು ಸಾಧ್ಯವಿಲ್ಲ, ಅದು ಆದಮೇಲೆ ಮುಖ್ಯಮಂತ್ರಿಗಳ ಹತ್ತಿರ ಬಂದಾಗ ಅವರು ಏನು ಹೇಳಬೇಕು, ಆ ರೀತಿ ಸತ್ತಿರುವವರ ಹೆಣವನ್ನು ನಾವು ನಿಮಗೆ ಕೊಡುತ್ತೇವೆ ಎಂದರು, ಅದು ಆದಮೇಲೆ ಮುಖ್ಯಮಂತ್ರಿಗಳ ಗಮನಕ್ಕೂ ಬಾರದೆಯೆ ಆ ಹೆಣಗಳನ್ನು ಪೊಲೀಸಿನವರು ಸುಟ್ಟರು, ಏಕೆ? ಏಕೆ ಅಷ್ಟೊಂದು ತರಾತುರಿಯಲ್ಲಿ ಸುಡಬೇಕಾಗಿತ್ತು ಎಂಬುದೊಂದೇ ನನ್ನ ಪ್ರಶ್ನೆ? ಏಕೆ ತರಾತುರಿಯಲ್ಲಿ ಸುಟ್ಟಿರಿ ಎಂಬ ನೇರವಾದ ಪ್ರಶ್ನೆಯನ್ನು ನಾನು ಕೇಳುತ್ತಿದ್ದೇನೆ. ಸತ್ತಿರುವ ಹೆಣವನ್ನು ತರಾತುರಿಯಿಂದ

ಸುತ್ತಲೂ ಪೊಲೀಸ್‌ನ ಬಂದೋಬಸ್ತನ್ನು ಹಾಕಿಕೊಂಡು ಆ ಹೆಣವನ್ನು ಸುಟ್ಟು ಬೂದಿ ಮಾಡುವ ಉದ್ದೇಶವೇನು? ಸಾಕ್ಷ್ಯವನ್ನು ಸಂಪೂರ್ಣವಾಗಿ ಮರೆಮಾಚಿ ಸಾಕ್ಷ್ಯವನ್ನು ನಾಶ ಮಾಡತಕ್ಕ ಒಂದೇ ಒಂದು ಉದ್ದೇಶ ಅದರಲ್ಲಿ ಇತ್ತು. ಅದು ಬಿಟ್ಟು ಬೇರೆ ಯಾವುದೇ ಉದ್ದೇಶವಿಲ್ಲ. ಮೊದಲನೆಯದಾಗಿ ಅವರನ್ನು ಹೊಡೆಯಬಾರದಿತ್ತು. ಹೊಡೆದ ಮೇಲೆ ನೀವು ನಡೆದಂಥ ರೀತಿ ನೀತಿಗಳಿದೆಯಲ್ಲಾ ಅದರ ಬಗ್ಗೆ ನನಗೇನು ಅಂಥ ಸಮಾಧಾನ ತರತಕ್ಕ ಉದ್ದೇಶವಲ್ಲ, ನಕ್ಸಲೀಯರಿಂದಲೇ ಈ ದೇಶದ ಉದ್ಧಾರ ಎಂಬ ಪ್ರಶ್ನೆಯಲ್ಲ, ನಕ್ಸಲೀಯರು ಇವತ್ತು ಶಸ್ತ್ರಾಸ್ತ್ರಗಳನ್ನು ಬದಿಗೊತ್ತಿ ಪ್ರಜಾತಂತ್ರ ವ್ಯವಸ್ಥೆಗೆ ಬರಬೇಕು, ಪ್ರಜಾತಂತ್ರ ಚಿಂತನೆಗೆ ಬರಬೇಕು, ಪ್ರಜಾತಂತ್ರದ ಒಕ್ಕೂಟಕ್ಕೆ ಬರಬೇಕು, ಪ್ರಜಾತಂತ್ರದ ಜೊತೆಯಲ್ಲಿ ಬೆಳೆದು ಸಂಯಮದಿಂದ ಅವರು ಹೋರಾಟವನ್ನು ಜೊತೆಯಲ್ಲಿ ಸೇರಿ ಸಮಗ್ರವಾದ ಹೋರಾಟವನ್ನು ಮಾಡಬೇಕಾದದ್ದು ಅವರ ಕರ್ತವ್ಯ. ಅಲ್ಲಿ ಇಬ್ಬರು ಸತ್ತ ಮೇಲೆ ನಮ್ಮ ಗಡಿ ಪ್ರದೇಶಗಳಲ್ಲಿ ಪೊಲೀಸ್ ಬಂದೋಬಸ್ತು ಎಷ್ಟಿರಬೇಕಾಗಿತ್ತು? ಇದಾದ ಮೇಲೆ ನಿಮ್ಮ ಕರ್ತವ್ಯವೇನು? ಪೊಲೀಸ್‌ರ ಕರ್ತವ್ಯವೇನು? ಪಾವಗಡ ಮುಂತಾದ ಎಲ್ಲೆಲ್ಲಿ ಗಡಿ ಪ್ರದೇಶಗಳಿವೆಯೋ, ಅಲ್ಲಿ ಪೊಲೀಸ್ ಬಂದೋಬಸ್ತು ಮಾಡಬೇಕಾಗಿತ್ತು. ಪೊಲೀಸಿನವರ ಬೇಜವಾಬ್ದಾರಿತನದಿಂದ ಮತ್ತು ವಿಫಲತೆಯಿಂದಾಗಿ ಪಾವಗಡದಲ್ಲಿ ನಮ್ಮ ಪೊಲೀಸರು ಸತ್ತರು. ನಕ್ಸಲೈಟ್‌ರು ಅಲ್ಲಿ ಸತ್ತ ತಕ್ಷಣ ನೀವು ಸಮಗ್ರವಾಗಿ ಪಾವಗಡ ಮುಂತಾದ ಗಡಿ ಪ್ರದೇಶಗಳಲ್ಲಿ ಬಿಗಿಯಾದ ಬಂದೋಬಸ್ತನ್ನು ಏರ್ಪಡಿಸಬೇಕಾಗಿತ್ತು. ಆ ಕೆಲಸವನ್ನು ನೀವು ಮಾಡಲಿಲ್ಲ. ಇದರಿಂದ ಅಲ್ಲಿ ಪೊಲೀಸಿನವರು ಸತ್ತರು. ಅಲ್ಲಿ ಸತ್ತ ಪೊಲೀಸರ ಕುಟುಂಬಕ್ಕೆ 5 ಲಕ್ಷ ರೂಪಾಯಿಗಳಂತೆ ಪರಿಹಾರ ಕೊಡುವುದು ಏನೇನೂ ಅಲ್ಲ. ಇದು ಹರಾಜಲ್ಲ, ವ್ಯಾಪಾರ ಅಲ್ಲ. ಸತ್ತ ಐದು ಜನ ಪೊಲೀಸರು ಎಂತಹ ಪರಿಸ್ಥಿತಿಯಲ್ಲಿ ಅಲ್ಲಿ ಮಲಗಿದ್ದರು? ಹಳ್ಳಿಯ ರೈತರು ವಾಸ ಮಾಡುವುದಕ್ಕಿಂತ ಕಡೆಯದಾದ ಒಂದು ಹಳೆಯ ಸೋರುವ ಶಾಲೆಯೊಂದರಲ್ಲಿ ಅವರು ಮಲಗಿದ್ದರು. ರಾತ್ರೋರಾತ್ರಿ 150 ಜನರು ಬಂದು ಅಲ್ಲಿ ಧಾಳಿ ಮಾಡುವವರೆಗೂ ಪೊಲೀಸರಿಗೆ ಇದರ ಸುದ್ದಿಯೇ ಗೊತ್ತಿರಲಿಲ್ಲ. ಪೊಲೀಸರಿಗೆ ಇದರ ಮುನ್ಸೂಚನೆ ಸಿಕ್ಕಿರಲಿಲ್ಲ. ಈ ವಿಚಾರ ಗೊತ್ತಿಲ್ಲವೆಂದರೆ ಹೇಗೆ? ಅನವಶ್ಯಕವಾಗಿ ನಮ್ಮ ನಿರಪರಾಧಿ ಪೊಲೀಸರು ಇದರಿಂದಾಗಿ ಸಾಯುವಂತಾಯಿತು. ಮೊದಲನೆಯದಾಗಿ, ನಕ್ಸಲೈಟರು ಸತ್ತ ಬಗ್ಗೆ ನ್ಯಾಯಾಂಗ ತನಿಖೆಯಾಗಬೇಕು. ಎರಡನೆಯದಾಗಿ, ಇಲ್ಲಿ ನಮ್ಮ ಪೊಲೀಸಿನವರು ಸತ್ತಿರುವ ಬಗ್ಗೆ ನ್ಯಾಯಾಂಗ ತನಿಖೆಯಾಗಬೇಕು. ಸದನ ಸಮಿತಿ ಮಾಡುವುದು ಬೇರೆ, ಅದು ಇರಲಿ. ಅದರ ಪ್ರಕಾರ ನಾವು ಹೋಗೋಣ. ನ್ಯಾಯಾಂಗ ತನಿಖೆಯೂ ಆಗಬೇಕು. ನ್ಯಾಯಾಂಗ ತನಿಖೆಯಾಗಿ, ಕನಿಷ್ಠ ಒಂದು ತಿಂಗಳಲ್ಲಿ ಅದು ನಮಗೆ ವರದಿಯನ್ನು ಸಲ್ಲಿಸತಕ್ಕಂಥದ್ದು ಆಗಲೇಬೇಕು. ಇಲ್ಲದಿದ್ದರೆ ಎಲ್ಲೋ ಒಂದು ಕಡೆ ಅಪರಾಧವೊಂದನ್ನು ನಾವು ಮಾಡುತ್ತಿದ್ದೇವೇನೋ ಎಂಬ ಪ್ರಶ್ನೆ ನಿರಂತರವಾಗಿ ನಮ್ಮನ್ನು ಕಾಡುತ್ತಿದೆ. ಬಹಳ ದಿವಸಗಳ ಕಾಲ ಈ ವ್ಯವಸ್ಥೆ ಹೀಗೇ ಮುಂದುವರೆದರೆ, ಮಾನ್ಯ ಅಧ್ಯಕ್ಷರೇ, ನಾವು ಮತ್ತು ನೀವು ಓಡಾಡುವುದಕ್ಕೆ ಭಯ-ಭೀತಿ ಪಡತಕ್ಕಂಥ ಪರಿಸ್ಥಿತಿ ಬರುತ್ತದೆ . . . . .

ಶ್ರೀ ಕೆ.ಆರ್.ರಮೇಶ್ ಕುಮಾರ್ : ಮಾನ್ಯ ವಾಟಾಳ್‌ರವರೇ, ತಾವು House Committee ಮಾಡಬೇಕೆಂದಿರಿ. ಅದರ ವ್ಯಾಪ್ತಿ ಏನು? ಅದು ಯಾವ ವಿಷಯದ ಬಗ್ಗೆ ತನಿಖೆ ಮಾಡಬೇಕೆಂಬುದು ತಮ್ಮ ಅಭಿಪ್ರಾಯವಾಗಿದೆ?

ಶ್ರೀ ವಾಟಾಳ್ ನಾಗರಾಜ್ : ನಾನು ನ್ಯಾಯಾಂಗ ತನಿಖೆಯಾಗಬೇಕೆಂದು ಹೇಳಿದೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ವೆಂಕಟಮ್ಮನಹಳ್ಳಿಯ ಘಟನೆ ಬಗ್ಗೆ ಸದನ ಸಮಿತಿಯನ್ನು ರಚನೆ ಮಾಡಿ, ವರದಿಯನ್ನು . . . . .

ಶ್ರೀ ಕೆ.ಆರ್.ರಮೇಶ್ ಕುಮಾರ್ : ಮಾನ್ಯ ವಾಟಾಳ್ ನಾಗರಾಜ್‌ರವರು ಚಿಕ್ಕಮಗಳೂರು ಘಟನೆಯನ್ನು ಪ್ರಸ್ತಾಪ ಮಾಡುವಾಗ, ಅದರ ಬಗ್ಗೆ ಅವರು ಮರುಕ ಪಟ್ಟರು, ಹೀಗೆ ಮಾಡಬಾರದಾಗಿತ್ತು ಎಂದರು. ಅವರು ಸ್ಪಷ್ಟವಾಗಿ ಹೇಳಲಿಲ್ಲ. ಅವರಿಗೆ ಎನ್‌ಕೌಂಟರ್ ಬಗ್ಗೆ ಅನುಮಾನ ಇದೆ. ಇದು fake ಎನ್‌ಕೌಂಟರ್ರೇ ಅಥವಾ genuine ಎನ್‌ಕೌಂಟರ್ರೇ? ಪೊಲೀಸಿನವರು first fire open ಮಾಡಿದರಾ? ಅವರು ಮಾಡಿದ್ದಕ್ಕೆ ಇವರು defence ಮಾಡಿದರಾ? ಅದನ್ನು he must clarfiy? House Committee ವ್ಯಾಪ್ತಿ ಏನು? ಅದು "fake encounter" ಎಂದು ನೀವು charge ಮಾಡುತ್ತೀರಾ ?

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಮುಖ್ಯಮಂತ್ರಿಗಳು ಹಿಂದೆ ಗೃಹ ಮಂತ್ರಿಗಳಾಗಿ ಒಳ್ಳೆಯ ಕೆಲಸ ಮಾಡಿದ್ದಾರೆ. ನನಗೆ ಅವರ ಬಗ್ಗೆ ಅಪಾರವಾದ ಗೌರವ ಇದೆ. STF ನವರು ಬಹಳ ಚೆನ್ನಾಗಿ ಕೆಲಸ ಮಾಡಿದ್ದಾರೆ ಎಂದೇನೂ ಹೊಗಳುವುದಕ್ಕೆ ನಾನು ತಯಾರಾಗಿಲ್ಲ. ನ್ಯಾಯಮೂರ್ತಿ ಸದಾಶಿವ ಆಯೋಗದ ವರದಿ ಬರಲಿ. ಆ ವರದಿ ಬಂದಾಗ ಏನೇನಾಗಿದೆ, ಎಷ್ಟು ಜನ ನಿರಪರಾಧಿಗಳು ಏನೇನಾಗಿದ್ದಾರೆ ಎಂಬುದು ನಮಗೆ ಗೊತ್ತಾಗುತ್ತದೆ. STF ನವರನ್ನು ಒಂದು ಸಾರಿ ನಕ್ಸಲೈಟ್ ಹಿಡಿಯುವುದಕ್ಕೆ ಹಾಕುತ್ತೇವೆ ಎಂದು ಹೇಳುತ್ತೀರಿ. ಮತ್ತೊಂದು ಸಾರಿ ಹಾಕುವುದಿಲ್ಲ ಎಂದು ಹೇಳುತ್ತೀರಿ. ಇನ್ನೊಂದು ಸಾರಿ ನಾವು ಇದಕ್ಕಾಗಿ ಭದ್ರವಾದಂತಹ ಬುನಾದಿ ಇರತಕ್ಕಂಥ ಪಡೆಗಳನ್ನು ರಚನೆ ಮಾಡಿದ್ದೇವೆ ಎಂದು ಹೇಳುತ್ತೀರಿ. ಯಾವ ಪಡೆಗಳನ್ನು ನೀವು ರಚನೆ ಮಾಡಿದ್ದೀರಿ? ನಕ್ಸಲೈಟ್ಸ್ ಹಿಡಿಯುವುದಕ್ಕೆ ವೀರಪ್ಪನ್ ಹಿಡಿಯಲು ರಚಿಸಿದಂತಹ ತಂಡ ಬೇಡ. ವೀರಪ್ಪನ್ ಹಿಡಿಯಲು ನೇಮಿಸಿದಂತಹ ತಂಡಕ್ಕೆ ವಹಿಸಿದಂತಹ ವಿಚಾರವೇ ಬೇರೆ. ವೀರಪ್ಪನ್‌ನ ವಿಚಾರಧಾರೆಗಳೇ ಬೇರೆ, ಈ ನಕ್ಸಲೈಟ್‌ಗಳ ವಿಚಾರಧಾರೆಗಳೇ ಬೇರೆ. STF ನವರನ್ನು ಇದಕ್ಕೆ ನೇಮಿಸಿದರೆ ಸರಿ ಹೋಗುವುದಿಲ್ಲ. STF ನವರ ಬಗ್ಗೆ ನನಗೆ ಅಪಾರವಾದಂತಹ ಗೌರವ ಇದೆ. ನಾನು ಅವರ ಇತಿಹಾಸವನ್ನೆಲ್ಲಾ ನೋಡಿದ್ದೇನೆ. ಇವತ್ತು ರೈತ ಮುಖಂಡರೊಬ್ಬರು ಏನು ಹೇಳಿದ್ದಾರೆ ಎಂದರೆ, ತಾವು ಅದನ್ನು ಓದಿರಬಹುದು, ಅದು ತಮ್ಮ ಗಮನಕ್ಕೂ ಸಹ ಬಂದಿರಬಹುದು. 'ವೀರಪ್ಪನ್ ಸಾಯಬಾರದಾಗಿತ್ತು, ವೀರಪ್ಪನ್ ಕೊಂದದ್ದು ತಪ್ಪು, ಅವನು ಸತ್ತದ್ದರಿಂದ ಅಲ್ಲಿ ಗ್ರಾನೈಟ್ ದಂಧೆ ಶುರುವಾಯಿತು, ಲೂಟಿ ಶುರುವಾಯಿತು, ಇದೆಲ್ಲಾ ಶುರುವಾಯಿತು' ಎಂದು ರೈತ ಮುಖಂಡರೊಬ್ಬರು ಮಾತನಾಡುವಂತಹ ಮಟ್ಟಕ್ಕೆ ಪರಿಸ್ಥಿತಿ ಬಂದು ಮುಟ್ಟಿದೆ. ವೀರಪ್ಪನ್ ಸಾಯುವುದನ್ನೇ ನಮ್ಮಲ್ಲಿ ಕಾಯ್ದುಕೊಂಡಿದ್ದರು. ವೀರಪ್ಪನ್ ಸತ್ತರೆ ಸಾಕು, ಗ್ರಾನೈಟ್ ದಂಧೆಗೆ ಕೈ ಹಾಕೋಣ ಎಂದು ಕಾಯುತ್ತಿದ್ದರು. ಮಹದೇಶ್ವರ ಬೆಟ್ಟದಲ್ಲಿ ಈಗ ಸಮಗ್ರವಾಗಿ ಲೂಟಿ ಮಾಡುವುದಕ್ಕೆ ಹೊರಟಿದ್ದಾರೆ. ವೀರಪ್ಪನ್ ಇದ್ದಾಗ ಮಹದೇಶ್ವರ ಬೆಟ್ಟದ ಪ್ರದೇಶದಲ್ಲಿ ಬಹಳಷ್ಟು ಪರಿಣಾಮಕಾರಿಯಾಗಿ ಗ್ರಾನೈಟ್ ಲೂಟಿ ನಿಂತಿತ್ತು. ಅದು ತಮಗೂ ಗೊತ್ತಿದೆ. ಮಾನ್ಯ ಮುಖ್ಯಮಂತ್ರಿಗಳಲ್ಲಿ ನಾನು ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ. ಯಾವುದೇ ಕಾರಣಕ್ಕೂ ಮಹದೇಶ್ವರ ಬೆಟ್ಟದ ಪ್ರದೇಶದಲ್ಲಿ ಗಣಿಗಾರಿಕೆಗೆ ಅವಕಾಶ ಕೊಡಬಾರದು. ಈಗ ಅಲ್ಲಿ ವೀರಪ್ಪನ್ ಸತ್ತಿದ್ದಾನೆ. ವೀರಪ್ಪನ್‌ನನ್ನು ಮೀರಿಸತಕ್ಕಂಥ ಗ್ರಾನೈಟ್ ಕಳ್ಳರು ಅಲ್ಲಿ ಗಣಿಗಾರಿಕೆ ನಡೆಸಲು ಅನುಮತಿ ಕೋರಿ ತಮ್ಮ ಮೇಲೆ ಇನ್ನಿಲ್ಲದ ಪ್ರಭಾವ ಬೀರಲಿಕ್ಕೆ ಬರತಕ್ಕಂಥ ವ್ಯವಸ್ಥೆ ಇದೆ. ದಯಮಾಡಿ ತಾವು ಯಾವುದೇ ಕಾರಣಕ್ಕೂ,

ತಾವು ಇರುವವರೆಗೆ, ಅಲ್ಲಿ ಗಣಿಗಾರಿಕೆಗೆ ಅವಕಾಶವನ್ನು ಕೊಡಬಾರದು. ಒಂದು ವೇಳೆ ಅನುಮತಿ ಕೊಟ್ಟರೆ, ಅದರಿಂದಾಗಿ ಆ ಪ್ರದೇಶದ ಪಾವಿತ್ರತೆ ಹಾಳಾಗುತ್ತದೆ ಮತ್ತು ಮಹದೇಶ್ವರ ಬೆಟ್ಟದ ಇತಿಹಾಸ ಹಾಳಾಗುತ್ತದೆ. ನಾಳೆ ಇದರಿಂದಾಗಿ ತಾವು ಕೆಟ್ಟ ಅಪವಾದಕ್ಕೆ ಗುರಿಯಾಗಬಾರದೆಂದು ನಾನು ತಮ್ಮಲ್ಲಿ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ. ಬೆಂಗಳೂರು ನಗರದ ರೈಲ್ವೆ ನಿಲ್ದಾಣ ಮತ್ತು ವಿಮಾನ ನಿಲ್ದಾಣ ಮುಂತಾದ ಕಡೆಗಳಲ್ಲೆಲ್ಲಾ ಭಯೋತ್ಪಾದಕರು ಎಷ್ಟು ಧಾರಾಳವಾಗಿ ಬಂದು, ಅವರ ಶಸ್ತ್ರಾಸ್ತ್ರಗಳನ್ನು ಇಟ್ಟು ಹೋಗುತ್ತಿದ್ದಾರೆ. ಇದನ್ನೆಲ್ಲಾ ನೋಡಿದಾಗ, ಬೆಂಗಳೂರು ನಗರಕ್ಕೇ ಒಂದು ವಿಶೇಷ ಪೊಲೀಸ್ ವ್ಯವಸ್ಥೆ ಬೇಕೆನಿಸುತ್ತದೆ. ಇಡೀ ರಾಜ್ಯಕ್ಕೆ ಬೇರೆ ಪೊಲೀಸರಾದರೆ, ಬೆಂಗಳೂರು ನಗರಕ್ಕೆಂದೇ ಬೇರೆ ಪೊಲೀಸ್ ವ್ಯವಸ್ಥೆಯನ್ನು ಮಾಡಬೇಕು. ಬೆಂಗಳೂರು ನಗರದ ಸಮಗ್ರ ಕಾನೂನು ಸುವ್ಯವಸ್ಥೆ ಕಾಪಾಡಲು ಮತ್ತು ಭಯೋತ್ಪಾದನೆ ಮತ್ತಿತರ ಎಲ್ಲಾ ಬಗೆಯ ಅನಿಷ್ಟಗಳನ್ನು ತಡೆಯಲಿಕ್ಕೆ ಬೆಂಗಳೂರಿಗಾಗಿಯೇ ವಿಶೇಷವಾದಂತಹ ಹೊಸ ಪೊಲೀಸ್ ವ್ಯವಸ್ಥೆಯನ್ನು ಮಾಡಬೇಕು. ಇದಕ್ಕಾಗಿ ಚಿಂತನೆ ಮಾಡಬೇಕು. ಹದ್ದಿನ ಕಣ್ಣಿನ ರೀತಿಯಲ್ಲಿ ಕಟ್ಟೆಚ್ಚರ ವಹಿಸುವಂತಹ ವಿಶೇಷ ಪೊಲೀಸ್ ವ್ಯವಸ್ಥೆಯೊಂದನ್ನು ಬೆಂಗಳೂರಿಗಾಗಿಯೇ ಮಾಡಬೇಕು. ಇದಲ್ಲದೆ ರಾಜ್ಯಕ್ಕಾಗಿಯೇ ವಿಶೇಷ ಪೊಲೀಸ್ ವ್ಯವಸ್ಥೆಯೊಂದನ್ನೂ ಸಹ ಮಾಡಬೇಕು. ಇದನ್ನು ಮಾಡಲಿಲ್ಲವೆಂದರೆ ಬಹಳ ಕಷ್ಟವಾಗುತ್ತದೆ. ಇನ್ನು ಮೂರನೆಯದಾಗಿ, ಸರ್ವೋಚ್ಚ ನ್ಯಾಯಾಲಯ ಹೇಳಿದಾಕ್ಷಣ ಜಯಲಲಿತಾರವರ ವಿಚಾರಣೆ ಇಲ್ಲಿಯ ನ್ಯಾಯಾಲಯದಲ್ಲಿ ನಡೆಯಬೇಕು ಎಂಬುದರಲ್ಲಿ ಅರ್ಥ ಇಲ್ಲ. ಈಗಾಗಲೇ ನಾವು ಅಪಾಯದಲ್ಲಿ ಸಿಕ್ಕಿದ್ದೇವೆ, ನಮ್ಮಲ್ಲಿ ಭಯೋತ್ಪಾದಕರು ಬರುತ್ತಿದ್ದಾರೆ, ಬೇರೆ ಬೇರೆ ಕೊಲೆಪಾತಕರು ಬರುತ್ತಿದ್ದಾರೆ, ಅಂತಾದ್ದರಲ್ಲಿ ಜಯಲಲಿತಾಗೆ ರಕ್ಷಣೆ ಕೊಡುವುದಕ್ಕೆ ನಮಗೆ ಎಲ್ಲಿಂದ ಸಾಧ್ಯ? ಈ ಬಗ್ಗೆ ಕರ್ನಾಟಕ ಸರ್ಕಾರ ಸರ್ವೋಚ್ಚ ನ್ಯಾಯಾಲಯಕ್ಕೆ ನೇರವಾಗಿ, 'ನಮ್ಮ ಕೈಯ್ಯಲ್ಲಿ ಆಗುವುದಿಲ್ಲ, ನಮಗೆ ನಮ್ಮದೇ ಕಷ್ಟ ಬಹಳ ಇದೆ, ಇಲ್ಲಿ ನಾವು ನ್ಯಾಯಾಲಯ ಮಾಡುವುದಕ್ಕಾಗುವುದಿಲ್ಲ' ಎಂದು ಹೇಳಿದ್ದರೆ ಚೆನ್ನಾಗಿತ್ತು. ಅವರ ವಿಚಾರಣೆ ಉತ್ತರ ಪ್ರದೇಶ ಅಥವಾ ಇನ್ನಿತರ ರಾಜ್ಯಗಳಲ್ಲಿ ಬೇಕಾದರ ನಡೆಯಲಿ. ಅವರ ವಿಚಾರಣೆ ಎಲ್ಲಿ ಬೇಕಾದರೂ ನಡೆಯಲಿ. ಕರ್ನಾಟಕ ರಾಜ್ಯಕ್ಕೆ ಎಲ್ಲರನ್ನೂ ಕೂಡ ಆಹ್ವಾನ ಮಾಡುವುದು ಎಷ್ಟರಮಟ್ಟಿಗೆ ಸರಿ? ಇದೇನು ಎಂದು ನನಗೆ ಅರ್ಥವಾಗುತ್ತಿಲ್ಲ. ಯಾರ ಪ್ರೀತಿಗೋಸ್ಕರ ಅವರ ವಿಚಾರಣೆ ಇಲ್ಲಿ ನಡೆಯುತ್ತಿದೆ? ಇದು ಸರಿಯಾದ ಮಾರ್ಗವಲ್ಲ ಎನ್ನತಕ್ಕಂಥ ಮಾತನ್ನು ಹೇಳುತ್ತೇನೆ, ಜಯಲಲಿತಾರವರ ವಿಚಾರಣೆ ಇಂದು ಆರಂಭವಾಗಿದೆ. ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಕೈ ಮುಗಿದು ಕೇಳುತ್ತೇನೆ, ತಾವು ಇವತ್ತೇ ಸರ್ವೋಚ್ಚ ನ್ಯಾಯಾಲಯಕ್ಕೆ ಮನವಿಯೊಂದನ್ನು ಸಲ್ಲಿಸಿ, 'ನಮ್ಮ ಕೈಯಲ್ಲಿ ಇವರಿಗೆ ಭದ್ರತೆ ಕೊಡುವುದಕ್ಕೆ ಆಗುವುದಿಲ್ಲ' ಎಂದು ನೇರವಾಗಿ ಹೇಳಬೇಕು. ಇದರಿಂದ ತಪ್ಪೇನೂ ಮಾಡಿದಂತಾಗುವುದಿಲ್ಲ. ಕಾವೇರಿ ಬಗ್ಗೆ ಮತ್ತು ಇತರ ವಿಚಾರಗಳ ಬಗ್ಗೆ ನಮ್ಮಲ್ಲಿ ಚಳುವಳಿಗಳು ನಡೆದಿರುವಾಗ, ಅವರಿಗೆ ನಾವು ಭದ್ರತೆ ಕೊಡಲು ಹೇಗೆ ಸಾಧ್ಯ? ನಮ್ಮ ರಾಜ್ಯದ ಜನಕ್ಕೇ ನೀವು ರಕ್ಷಣೆ ಕೊಡಲಿಕ್ಕೆ ಸಾಧ್ಯವಾಗದಿರುವಾಗ, ನೀವು ಜಯಲಲಿತಾಗೆ ರಕ್ಷಣೆ ಕೊಡಲು ಹೊರಟಿದ್ದೀರಿ. ಬೇರೆ ಯಾರಿಗೂ ಬೇಡ, ನಮ್ಮ ಪೊಲೀಸರಿಗೇ ರಕ್ಷಣೆ ಕೊಡಲು ಆಗಲಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಬೇರೆ ಇನ್ನಾರಿಗೆ ನೀವು ರಕ್ಷಣೆ ಕೊಡಬಲ್ಲಿರಿ? ಆದುದರಿಂದ ತಾವು ಇದರ ಬಗ್ಗೆ ಚಿಂತನೆ ಮಾಡಿ, ಬೇರೆ ರೀತಿಯಲ್ಲಿ ಹೋಗುವುದು ಒಳ್ಳೆಯದು. ಕೊನೆಯದಾಗಿ, ನಾವೆಲ್ಲರೂ ಪಕ್ಷಾತೀತವಾಗಿ ಕುಳಿತು ಈ ರಾಜ್ಯದ ಕಾನೂನು ಸುವ್ಯವಸ್ಥೆ ಮತ್ತು ಪೊಲೀಸ್ ಇಲಾಖೆಯ ಪುನರ್ ನಿರ್ಮಾಣದ ಬಗ್ಗೆ ಸಮಗ್ರವಾಗಿ ಚರ್ಚೆ ಮಾಡುವುದಕ್ಕೆ ತಮ್ಮ ಅಧ್ಯಕ್ಷತೆಯಲ್ಲಿ ಒಂದು ವ್ಯವಸ್ಥೆ ಮಾಡಿ ಎಂದು ಹೇಳಿ, ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.